ಕರ್ನಾಟಕ ಸರ್ಕಾರ

Govt of Karnataka

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

Dept. of Law and Parliamentary affairs

Karnataka State Universities Act 1976

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ

# ಅಧಿನಿಯಮ, ೧೯೭೬

(೧೯೭೬ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೮)

No 28 of Karnataka Act 1976.

-5487
378.1550
26
KAR-K

Amended as on April 1984

(೧೯೮೪ರ ಏಪ್ರಿಲ್‌ವರೆಗೆ ತಿದ್ದುಪಡಿಯಾದಂತೆ)

(1986 ಹಾಗು 1987ರ ತಿದ್ದುಪಡಿ ಅಧಿನಿಯಮಗಳನ್ನು ಒಳಗೊಂಡಿದೆ)

Includes Amendments Act of 1986 & 1987

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, *1976*

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

### ಅಧಿಸೂಚನೆ

ಸಂಖ್ಯೆ ಲಾ ೪ ಎಲ್ ಎಮ್ ಟಿ ೮೮, ದಿನಾಂಕ ೨೮ನೇ ಮಾರ್ಚಿ ೧೯೮೮.

ಕರ್ನಾಟಕ ರಾಜಭಾಷಾ ಅಧಿನಿಯಮ ೧೯೬೩ (ಕರ್ನಾಟಕ ಅಧಿನಿಯಮ ಸಂಖ್ಯೆ ೧೯೬೩ರ ೨೬)ರ ೫ಕ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ನಾನು ಶ್ರೀ ಎ. ಎನ್. ಬ್ಯಾನರ್ಜಿ, ಕರ್ನಾಟಕ ವಿಶ್ವ ವಿದ್ಯಾನಿಲಯಗಳ ಅಧಿನಿಯಮ, ೧೯೭೬ (ಕರ್ನಾಟಕ ಅಧಿನಿಯಮ ಸಂಖ್ಯೆ ೧೯೭೬ ರ ೨೮)ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

-5487
378.155026
KAR-K

ಎ. ಎನ್. ಬ್ಯಾನರ್ಜಿ,
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ರಾಮಚಂದ್ರ ರಾಜು.
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

...Educational
...ration
... Mar... Delhi-110016
D-5878
22-2-91

## 1976 ರ ಕರ್ನಾಟಕ ಅಧಿನಿಯಮ ಸಂಖ್ಯೆ 28

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976

## ಪ್ರಕರಣಗಳ ಅನುಕ್ರಮಣಿಕೆ

### ಅಧ್ಯಾಯ—I

ಪ್ರಾರಂಭಿಕ — ಪುಟಗಳ ಸಂಖ್ಯೆ

ಪ್ರಕರಣಗಳು :—


೧. ಚಿಕ್ಕ ಹೆಸರು ಮತ್ತು ಪ್ರಾರಂಭ ೧
೨. ಪರಿಭಾಷೆಗಳು ೨


### ಅಧ್ಯಾಯ—II

ವಿಶ್ವವಿದ್ಯಾನಿಲಯಗಳು


೩. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ ೩
೪. ವಿಶ್ವವಿದ್ಯಾನಿಲಯದ ಅಧಿಕಾರಗಳು ೫
೫. ಅಧಿಕಾರ ವ್ಯಾಪ್ತಿ, ವಿಶೇಷಾಧಿಕಾರ ಇತ್ಯಾದಿಗಳಿಗೆ ಪ್ರವೇಶ ಅವಕಾಶ ೮
೬. ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳಿಗೂ ತೆರೆದಿರತಕ್ಕದು. ೧೧
೭. ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆ ೧೨
೮. ಪರಿಶೀಲನೆ ಮತ್ತು ನಿಯಂತ್ರಣ ೧೩


### ಅಧ್ಯಾಯ—III

ವಿಶ್ವವಿದ್ಯಾನಿಲಯದ ಅಧಿಕಾರಿಗಳು


೯. ವಿಶ್ವವಿದ್ಯಾನಿಲಯದ ಅಧಿಕಾರಿಗಳು ೧೪
೧೦. ಕುಲಾಧಿಪತಿ ೧೫
೧೧. ಕುಲಪತಿ ೧೫
೧೨. ಕುಲಪತಿಯ ಅಧಿಕಾರಗಳು ೬೧

೧೩. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯ ವ್ಯವಸ್ಥೆ ೧೭
೧೪. ಕುಲಸಚಿವ ೮೧
೧೫. ಪರೀಕ್ಷೆಗಳ ನಿಯಂತ್ರಕ ೯೧
೧೬. ಹಣಕಾಸು ಅಧಿಕಾರಿ ೯೧
೧೬ಎ. ಕುಲಸಚಿವ, ಪರೀಕ್ಷೆಗಳ ನಿಯಂತ್ರಕ ಅಥವಾ ಹಣಕಾಸು ಅಧಿಕಾರಿಯು ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು. ೯೧
೧೭. ಡೀನರು ೨೦
೧೮. ವಿದ್ಯಾರ್ಥಿ ಕಲ್ಯಾಣದ ಡೀನ್ ೨೦
೧೯. ಗ್ರಂಥಪಾಲ ೨೧

## ಅಧ್ಯಾಯ—IV

## ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳು

೨೦. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ೨೧
೨೧. ಸೆನೆಟು ೨೧
೨೨. ಸೆನೆಟಿನ ಸಭೆಗಳು ೨೫
೨೩. ಸೆನೆಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ೨೫
೨೪. ಸಿಂಡಿಕೇಟು ೨೭
೨೫. ಸಿಂಡಿಕೇಟಿನ ಅಧಿಕಾರಗಳು ೨೮
೨೬. ವಿದ್ಯಾವಿಷಯಕ ಪರಿಷತ್ತು ೩೦
೨೭. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು ೩೧
೨೮. ವ್ಯಾಸಂಗ ವಿಭಾಗಗಳು ೩೨
೨೯. ಅಧ್ಯಯನ ಮಂಡಲಿ ೩೪
೩೦. ಹಣಕಾಸು ಸಮಿತಿ ೩೪
೩೧. ಪರೀಕ್ಷಕರ ನೇಮಕಾತಿಗಾಗಿ ಮಂಡಲಿ ೩೫
೩೨. ಇತರ ಮಂಡಲಿಗಳು ೩೬
೩೩. ಸೆನೆಟು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಪದಾವಧಿ ೩೬
೩೪. ಸೆನೆಟು, ಸಿಂಡಿಕೇಟು ಮತ್ತು ವಿದ್ಯಾವಿಷಯಕ ಪರಿಷತ್ತಿನ ಚುನಾವಣೆಯ ವಿಧಾನ ೩೭
೩೪ಕ. ಸೆನೆಟು ಇತ್ಯಾದಿ ಸಭೆಗಳಿಗೆ ಹಾಜರಾಗಲು ಅಧಿಕಾರಿಯನ್ನು ನಾಮನಿರ್ದೇಶಿಸಲು ಕೆಲವು ಪದನಿಮಿತ್ತ ಸದಸ್ಯರ ಅಧಿಕಾರ ೩೭

## ಅಧ್ಯಾಯ—V

### ಪರಿನಿಯಮಗಳು ಅಧ್ಯಾದೇಶಗಳು ವಿನಿಯಮನಗಳು ಮತ್ತು ನಿಯಮಗಳು


೩೫. ಪರಿನಿಯಮಗಳು ೩೭

೩೬. ಪರಿನಿಯಮಗಳು—ಇವುಗಳ ರಚನೆ ೩೯

೩೭. ಅಧ್ಯಾದೇಶಗಳು ೪೦

೩೮. ಅಧ್ಯಾದೇಶಗಳು—ಅವುಗಳ ರಚನೆ ೪೧

೩೯. ವಿನಿಯಮನಗಳು ೪೨

೪೦. ನಿಯಮಗಳು ೪೩


## ಅಧ್ಯಾಯ—VI

### ಹಣಕಾಸು ಮತ್ತು ಲೆಕ್ಕಪತ್ರಗಳು


೪೧. ವಿಶ್ವವಿದ್ಯಾನಿಲಯದ ನಿಧಿಗಳು ೪೩

೪೨. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ ೪೪

೪೩. ಹಣಕಾಸಿನ ಅಂದಾಜುಗಳು ೪೫

೪೪. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ ೪೫

೪೫. ವಾರ್ಷಿಕ ವರದಿ ೪೫


## ಅಧ್ಯಾಯ—VII

### ಪ್ರಾಧಿಕಾರದಲ್ಲಿ ಖಾಲಿಸ್ಥಾನಗಳು ಮತ್ತು ಚುನಾವಣೆಗಳು


೪೬. ಹುದ್ದೆಯನ್ನು ತೆರವು ಮಾಡುವುದು. ೪೫

೪೭. ಖಾಲಿ ಸ್ಥಾನಗಳನ್ನು ಭರ್ತಿಮಾಡುವುದು. ೪೬

೪೮. ಸದಸ್ಯತ್ವಕ್ಕೆ ಸಂಬಂಧಿಸಿದ ವಿವಾದಗಳು. ೪೭


## ಅಧ್ಯಾಯ-VIII

### ವಿಶ್ವವಿದ್ಯಾನಿಲಯದ ಅಧ್ಯಾಪಕರ ಮತ್ತು ಇತರ ನೌಕರರ ನೇಮಕಾತಿ


೪೯. ಅಧ್ಯಾಪಕರು, ಮೊದಲಾದವರ ನೇಮಕಾತಿ. ೪೭

೫೦. ಇತರ ಅಲಿಪಿಕ ಸಿಬ್ಬಂದಿಯ ನೇಮಕಾತಿ. ೫೦

೫೧. ಲಿಪಿಕ ಸಿಬ್ಬಂದಿಯ ನೇಮಕಾತಿ. ೫೧

೫೧ಕ. ಅಂಶಕಾಲಿಕ ಹುದ್ದೆಗಳಿಗೆ ನೇಮಕಾತಿ. ೫೧

೫೧ಖ. ತಾತ್ಕಾಲಿಕ ನೇಮಕಾತಿ. ೫೨

೫೧ಗ. ಅನುಸೂಚಿತ ಜಾತಿ, ಮೊದಲಾದವರಿಗೆ ಬಡ್ತಿಗಾಗಿ ಖಾಲಿ ಸ್ಥಾನಗಳನ್ನು ಮೀಸಲಿಡುವಿಕೆ. ೫೩

೫೨. ನಿಯೋಜಿತರ ವರ್ಗಾವಣೆಗಳು. ೫೩

## ಅಧ್ಯಾಯ–IX

### ಕಾಲೇಜುಗಳ ಸಂಲಗ್ನತೆ ಮತ್ತು ಸಂಸ್ಥೆಗಳಿಗೆ ಮನ್ನಣೆ

೫೩. ಕಾಲೇಜುಗಳ ಸಂಲಗ್ನತೆ. ೫೩

೫೪. ಕೆಲವು ಸಂಸ್ಥೆಗಳಿಗೆ ಮನ್ನಣೆ. ೫೭

೫೫. ಕಾಲೇಜುಗಳ ಪರಿಶೀಲನೆ ಮತ್ತು ವರದಿಗಳು. ೫೭

೫೬. ಸಂಲಗ್ನತೆಯನ್ನು ಹಿಂತೆಗೆದುಕೊಳ್ಳುವುದು. ೫೭

೫೬. ಸ್ವಾಯತ್ತ ಕಾಲೇಜು. ೫೯

## ಅಧ್ಯಾಯ–X

### ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

೫೭. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ. ೬೦

೫೮. ವಿದ್ಯಾರ್ಥಿಗಳ ವಾಸಸ್ಥಳ. ೬೦

೫೯. ಗೌರವ ಪದವಿಗಳು. ೬೧

೬೦. ಪದವಿ ಅಥವಾ ಡಿಪ್ಲೋಮಾವನ್ನು ಹಿಂತೆಗೆದುಕೊಳ್ಳುವುದು. ೬೧

## ಅಧ್ಯಾಯ–IX

### ವಿಶ್ವವಿದ್ಯಾನಿಲಯ ಪುನರವಲೋಕನಾ ಆಯೋಗ

೬೧. ವಿಶ್ವವಿದ್ಯಾನಿಲಯ ಪುನರವಲೋಕನಾ ಆಯೋಗದ ನೇಮಕಾತಿ. ೬೦

೬೧ಕ. ಯೋಜನಾ ಮಂಡಲಿ. ೬೨

## ಅಧ್ಯಾಯ–XII

### ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

೬೨. ಶಿಸ್ತು. ೬೨

೬೩. ಜೇಷ್ಠತೆ. ೬೩

೧೪. ವ್ಯವಹರಣೆ ಮುಂತಾದವುಗಳ ಸಿಂಧುತ್ವ. ೧೩

೧೫. ಇತರ ಅಧಿನಿಯಮಿತಿಗಳ ಮೇಲೆ ಈ ಅಧಿನಿಯಮವು ಪ್ರಭಾವವುಳ್ಳದ್ದಾಗಿರತಕ್ಕದು. ೧೪

೧೬. ಸದ್ಭಾವನೆಯಿಂದ ಮಾಡಲಾದ ಕಾರ್ಯಕ್ಕೆ ಸಂರಕ್ಷಣೆ. ೧೪

೧೭. ವಿಶ್ವವಿದ್ಯಾನಿಲಯದೊಂದಿಗೆ ಸಂಲಗ್ನಗೊಂಡ ಕಾಲೇಜುಗಳ ಸಂಬಂಧಗಳು. ೧೪

೧೮. ವಿಶ್ವವಿದ್ಯಾನಿಲಯಕ್ಕೆ ಕಾಲೇಜುಗಳ ವರ್ಗಾವಣೆ ಮತ್ತು ಅಂಥ ವರ್ಗಾವಣೆಗೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ಇತರ ಉಪಬಂಧಗಳು. ೧೫

೧೯. ಪುರಸ್ಕೃತ ಪರಿಯೋಜನೆಗಳು. ೧೬

೨೦. ಈ ಅಧಿನಿಯಮದ ಪ್ರಾರಂಭದಲ್ಲಿನ ತೊಂದರೆಗಳ ನಿವಾರಣೆ. ೧೬

೨೧. ತಾತ್ಕಾಲಿಕ ಉಪಬಂಧಗಳು. ೧೭

೨೨. ಪರಿನಿಯಮಗಳು, ಅಧ್ಯಾದೇಶಗಳು ಇತ್ಯಾದಿಗಳ ಮುಂದುವರಿಕೆ. ೧೯

೨೩ ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಆಯ್ಕೆ, ನೇಮಕಾತಿ, ನಾಮ ನಿರ್ದೇಶನ ಮತ್ತು ಸಹ ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಬಗ್ಗೆ ಅವಶ್ಯಕ ಕ್ರಮವನ್ನು ಕುಲಪತಿಯು ಕೈಗೊಳ್ಳತಕ್ಕದು. ೨೧

೨೪. ಕೆಲವೊಂದು ಪರೀಕ್ಷೆಗಳ ಉಳಿಸುವಿಕೆ. ೨೧

೨೫. ೧೯೭೫ರ ಕರ್ನಾಟಕ ಅಧ್ಯಾದೇಶ ಸಂಖ್ಯೆ ೧೨ರ ನಿರಸನ. ೨೨

**1976ರ ಕರ್ನಾಟಕ ಅಧಿನಿಯಮ ಸಂಖ್ಯೆ 28**

(೧೯೭೬ನೇ ಮಾರ್ಚಿ ಹದಿನೈದನೇ ದಿನದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ, ಅಧಿನಿಯಮ, 1976

(೧೯೭೬ರ ೫೭, ೧೯೭೭ರ ೫, ೧೯೭೭ರ ೧೪, ೧೯೭೮ರ ೯, ೧೯೮೦ರ ೨೫ ಮತ್ತು ೧೯೮೨ರ ೨೪ ಮತ್ತು ೧೯೮೪ರ ೧೦ನೇ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಗಿದೆ)

(೧೯೭೬ನೇ ಮಾರ್ಚ್ ಹದಿಮೂರನೇ ದಿನದಂದು ರಾಜ್ಯಪಾಲರ ಅನುಮತಿ ಪಡೆದಿದೆ)

ಕರ್ನಾಟಕ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಏಕರೂಪದ ಕಾನೂನನ್ನು ಅಧಿನಿಯಮಿಸುವ ಅಧಿನಿಯಮ.

ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಏಕರೂಪದ ಕಾನೂನನ್ನು ಹೊಂದಿರುವುದಕ್ಕಾಗಿ ಕರ್ನಾಟಕ ವಿಶ್ವವಿದ್ಯಾನಿಲಯ ಅಧ್ಯಾದೇಶ, ೧೯೭೫ನ್ನು ಹೊರಡಿಸಲಾಗಿರುವುದರಿಂದ;

ಮತ್ತು, ಸದರಿ ಅಧ್ಯಾದೇಶವನ್ನು ಅಧಿನಿಯಮದ ಮೂಲಕ ಪ್ರತಿಸ್ಥಾಪಿಸುವುದು ವಿಹಿತವೆಂದು ಪರಿಗಣಿಸಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು :—

## ಅಧ್ಯಾಯ—I

## ಪ್ರಾರಂಭಿಕ

೧. ಚಿಕ್ಕ ಹೆಸರು ಮತ್ತು ಪ್ರಾರಂಭ:—(೧) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, ೧೯೭೬ ಎಂದು ಕರೆಯತಕ್ಕದ್ದು.

(೨) ಇದು ೧೯೭೫ನೇ ಸೆಪ್ಟೆಂಬರ್ ಇಪ್ಪತ್ತೈದನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

೨. ಪರಿಭಾಷೆಗಳು :— ಈ ಅಧಿನಿಯಮದಲ್ಲಿ ಮತ್ತು ಪರಿನಿಯಮ, ಅಧ್ಯಾದೇ ವಿನಿಯಮನ ಮತ್ತು ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತ

(೧) "ತಿದ್ದುಪಡಿ ಅಧಿನಿಯಮ" ಎಂದರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿ ಯಗಳ (ತಿದ್ದುಪಡಿ) ಅಧಿನಿಯಮ, ೧೯೮೦.)

(೧ಕ) "ಗೊತ್ತುಪಡಿಸಲಾದ ದಿನಾಂಕ" ಎಂದರೆ, ಈ ಅಧಿನಿಯಮವು ಪ್ರಾರಂ ವಾದ ದಿನಾಂಕ.

(೨) "ಕಾಲೇಜು" ಎಂದರೆ, ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವಂಥ ಸಂ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಶ್ವವಿದ್ಯಾನಿಲಯದೊ ಸಂಲಗ್ನಗೊಂಡ ಕಾಲೇಜಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪ ರುವ ಸಂಸ್ಥೆಯನ್ನು ಒಳಗೊಳ್ಳುತ್ತದೆ.

(೨ಕ) "ವಿಭಾಗ". ಅಧ್ಯಯನಗಳ ವಿಭಾಗ, "ಸ್ನಾತಕೋತ್ತರ ಪದವಿ ವಿಭಾ ಮತ್ತು "ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ" ಎಂದರೆ, ವಿಶ್ವವಿದ್ಯಾನಿಲಯ ನಡೆಸುತ್ತಿರುವ ಮತ್ತು ನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯದಲ್ಲಿನ ವಿಭಾಗ, ಅಧ್ಯಯನ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಮತ್ತು ಅಧ್ಯಯನಗಳ ಸ್ನಾತಕೋತ್ತರ ಪ ವಿಭಾಗ :

ಪರಂತು, ವಿಶ್ವವಿದ್ಯಾನಿಲಯವು, ಯಾವುದೇ ವಿಭಾಗ, ಅಧ್ಯಯನಗಳ ವಿಭಾ ಸ್ನಾತಕೋತ್ತರ ಪದವಿ ವಿಭಾಗ ಅಥವಾ ಅಧ್ಯಯನಗಳ ಸ್ನಾತಕೋತ್ತರ ವಿಭಾಗವ ನಡೆಸದೆ ಮತ್ತು ನಿರ್ವಹಿಸದೆ ಇರುವಲ್ಲಿ, ಸಂಲಗ್ನಗೊಂಡ ಕಾಲೇಜು ಅಥವಾ ಕಾಲೇ ಗಳು ಅಥವಾ ವಿದ್ಯಾಸಂಸ್ಥೆಗಳಲ್ಲಿನ, ಕುಲಾಧಿಪತಿಯು ರಾಜ್ಯ ಸರ್ಕಾರದೊಡನೆ ಸ ಲೋಚಿಸಿ ನಾಮನಿರ್ದೇಶನ ಮಾಡಬಹುದಾದಂಥ ಅಧ್ಯಾಪಕರ ವಿಭಾಗ, ಅಧ್ಯಯನ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಅಥವಾ ಅಧ್ಯಯನಗಳ ಸ್ನಾತಕೋತ್ತರ ಪ ವಿಭಾಗಗಳು ಎಂದು ಭಾವಿಸತಕ್ಕುದು ;

(೩) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನು ವಾಗಿ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ವಿ ದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಇರುವ ವಾಸಸ್ಥಳದ ಘಟಕ ;

(೪) "ಪ್ರಾಂಶುಪಾಲ" ಎಂದರೆ ಕಾಲೇಜಿನ ಮುಖ್ಯಸ್ಥ.

(೫) "ನೋಂದಾಯಿತ ಪದವೀಧರ" ಎಂದರೆ, ಈ ಅಧಿನಿಯಮದ ಮೇ ನೋಂದಾಯಿಸಲಾದ ಅಥವಾ ನೋಂದಾಯಿಸಲಾಗಿರುವುದಾಗಿ ಭಾವಿಸಲಾದ ಪದವೀಧ

(೬) "ಪರಿನಿಯಮಗಳು", "ಅಧ್ಯಾದೇಶಗಳು", "ವಿನಿಯಮನಗಳು", ಮ ನಿಯಮಗಳು ಎಂದರೆ, ಅನುಕ್ರಮವಾಗಿ ಈ ಅಧಿನಿಯಮದ ಮೇರೆಗೆ ರಚಿಸಲಾದ

ವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳು ;

(೭) "ಅಧ್ಯಾಪಕರು" ಎಂಬುದು ಯಾವುದೇ ಸಂಲಗ್ನಗೊಂಡ ಕಾಲೇಜಿನಲ್ಲಿ ಶಿಕ್ಷಣ ಕೊಡುವ ಪ್ರಾಧ್ಯಾಪಕರು, ರೀಡರುಗಳು, ಉಪನ್ಯಾಸಕರು ಮತ್ತು ಇತರ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(೮) "ವಿಶ್ವವಿದ್ಯಾನಿಲಯದ ಅಧ್ಯಾಪಕರು" ಎಂದರೆ, ವಿಶ್ವವಿದ್ಯಾನಿಲಯದಲ್ಲಿ ಅಥವಾ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಯಾವುದೇ ಕಾಲೇಜಿನಲ್ಲಿ ಶಿಕ್ಷಣ ಕೊಡುವ ಉದ್ದೇಶಕ್ಕಾಗಿ ನೇಮಕಗೊಂಡಿರುವ ವ್ಯಕ್ತಿಗಳು ;

(೯) "ವಿಶ್ವವಿದ್ಯಾನಿಲಯ" ಎಂದರೆ, 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮತ್ತು ನಿಗಮಿತವಾದ ವಿಶ್ವವಿದ್ಯಾನಿಲಯ ;

(೧೦) "ವಿಶ್ವವಿದ್ಯಾನಿಲಯ ಪ್ರದೇಶ", ಎಂದರೆ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶ.

## ಅಧ್ಯಾಯ—II

## ವಿಶ್ವವಿದ್ಯಾನಿಲಯಗಳು

### ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ

(೧) ಗೊತ್ತುಪಡಿಸಲಾದ ದಿನಾಂಕದಂದು ಮತ್ತು ಅಂದಿನಿಂದ ಪರಿಣಾಮಕಾರಿಯಾಗುವಂತೆ ಈ ಕೆಳಕಂಡ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗತಕ್ಕದ್ದು, ಎಂದರೆ,—

(ಕ) ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಬೆಂಗಳೂರು ವಿಶ್ವವಿದ್ಯಾನಿಲಯ ;

(ಖ) ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬೆಳಗಾವಿ, ಬಳ್ಳಾರಿ, ಬೀದರ್, ವಿಜಾಪುರ, ಧಾರವಾಡ, ಕಲ್ಬುರ್ಗಿ, ಉತ್ತರ ಕನ್ನಡ ಮತ್ತು ರಾಯಚೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ವಿಶ್ವವಿದ್ಯಾನಿಲಯ ;

(ಗ) ಮೈಸೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ಹಾಸನ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯ ;

(೧೪) (೧)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ತಿದ್ದುಪಡಿ ಅಧಿನಿಯಮವು ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ,—

(ಕ) ಬಳ್ಳಾರಿ, ಬೀದರ್, ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಕರ್ನಾಟಕ ವಿಶ್ವವಿದ್ಯಾನಿಲಯವು ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತು ಹೋಗತಕ್ಕದು.

(ಖ) ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಮೈಸೂರು ವಿಶ್ವವಿದ್ಯಾನಿಲಯವು ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು ನಿಂತು ಹೋಗತಕ್ಕದು.

(ಗ) ಈ ಕೆಳಕಂಡ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗತಕ್ಕದು. ಎಂದರೆ,—

(i) ಕಲ್ಬುರ್ಗಿಯಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬಳ್ಳಾರಿ, ಬಿದರೆ, ಕಲ್ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಲ್ಬುರ್ಗಿ ವಿಶ್ವವಿದ್ಯಾನಿಲಯ ;

(ii) ಕೊಣಾಜೆಯಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮಂಗಳೂರು ವಿಶ್ವವಿದ್ಯಾನಿಲಯ.

(೨) (i) ವಿಶ್ವವಿದ್ಯಾನಿಲಯದ ಕುಲಾಧಿಪತಿ, ಕುಲಪತಿ ಮತ್ತು ಸೆನೆಟು, ಸಿಂಡಿಕೇಟು ಮತ್ತು ಅಕಡೆಮಿಕ್ ಕೌನ್ಸಿಲ್‌ನ ಸದಸ್ಯರು, (೧)ನೇ ಉಪಪ್ರಕರಣ ಮತ್ತು 1ಕ ಉಪ ಪ್ರಕರಣ ದಲ್ಲಿ ನಿರ್ದಿಷ್ಟಪಡಿಸದ ವಿಶ್ವವಿದ್ಯಾನಿಲಯದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದು ;

(ii) ಸದರಿ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನೂ ಹೊಂದಿರತಕ್ಕದು ಮತ್ತು ಅದರ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ವಿಶ್ವವಿದ್ಯಾನಿಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಅರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ಗೇಣಿಗೆ ಕೊಡಲು, ಮಾರಾಟ ಮಾಡಲು ಅಥವಾ ಬೇರೆ ರೀತಿಯಲ್ಲಿ ವರ್ಗಾವಣೆ ಮಾಡಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾದ ಇತರ ಎಲ್ಲಾ ಕಾರ್ಯಗಳನ್ನೂ ಮಾಡಲು ಸಕ್ರಮವಾಗಿರತಕ್ಕದು.

(೪) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧವಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದಪತ್ರಗಳಿಗೆ ಕುಲಸಚಿವನು ಸಹಿ ಮಾಡಿ

ಸ್ಥಾಪನೆ ಮಾಡತಕ್ಕುದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ಕುಲಸಚಿವನಿಗೆ ಹೊರಡಿಸತಕ್ಕುದು ಮತ್ತು ಅವನಿಗೆ ಜಾರಿ ಮಾಡತಕ್ಕುದು

೪. ವಿಶ್ವವಿದ್ಯಾನಿಲಯದ ಅಧಿಕಾರಗಳು :— ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಪರಿನಿಯಮಗಳು ಅಥವಾ ಅಧ್ಯಾದೇಶಗಳಿಂದ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾನಿಲಯವು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕುದು ಮತ್ತು ಈ ಕೆಳಕಂಡ ಕರ್ತವ್ಯಗಳನ್ನು ನೆರವೇರಿಸತಕ್ಕುದು ; ಎಂದರೆ,—

(i) ತಾನು ಯುಕ್ತವೆಂದು ಭಾವಿಸುವಂತಹ ವ್ಯಾಸಂಗ ಶಾಖೆಗಳಲ್ಲಿ ಮತ್ತು ಅಧ್ಯಯನ ಕ್ರಮಗಳಲ್ಲಿ, ಶಿಕ್ಷಣ (ಪತ್ರ ವ್ಯವಹಾರದ ಮೂಲಕ ಶಿಕ್ಷಣವೂ ಸೇರಿದಂತೆ) ಬೋಧನೆ ಮತ್ತು ತರಬೇತಿಯನ್ನು ಒದಗಿಸುವುದು ಮತ್ತು ಸಂಶೋಧನೆ ಹಾಗೂ ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡುವುದು.

(ii) ಪರೀಕ್ಷೆಗಳನ್ನು ನಡೆಸುವುದು ಮತ್ತು ಯಾರು,—

(ಕ) ಪರಿನಿಯಮಗಳಿಂದ, ಅಧ್ಯಾದೇಶಗಳಿಂದ ಅಥವಾ ವಿನಿಯಮನಗಳಿಂದ ನಿಯಮಿಸಲಾದ ರೀತಿಯಲ್ಲಿ ಅವುಗಳಿಂದ ವಿನಾಯಿತಿಗೊಳಿಸಲಾಗಿದ್ದ ಹೊರತು, ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಕಾಲೇಜಿನಲ್ಲಿ ಅಧ್ಯಯನ ಕ್ರಮವನ್ನು ಅನುಸರಿಸಿ ವಿಶ್ವವಿದ್ಯಾನಿಲಯದಿಂದ ನಿಯಮಿಸಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರೋ ; ಅಥವಾ

(ಖ) ಪರಿನಿಯಮಗಳಿಂದ ಅಥವಾ ಅಧ್ಯಾದೇಶಗಳಿಂದ ನಿಯಮಿಸಲಾದ ಷರತ್ತುಗಳ ಮೇರೆಗೆ ಸಂಶೋಧನೆ ನಡೆಸಿರುವರೊ ; ಆ ವ್ಯಕ್ತಿಗಳಿಗೆ ಪದವಿಗಳನ್ನು, ಡಿಪ್ಲೋಮಾಗಳನ್ನು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಕೊಡುವುದು ಮತ್ತು ಪ್ರದಾನ ಮಾಡುವುದು;

(iii) ಪರಿನಿಯಮಗಳಿಂದ ವಿಧಿಸಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ;

(iv) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಿಲ್ಲದ ವ್ಯಕ್ತಿಗಳಿಗೆ ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂಥ ಡಿಪ್ಲೋಮಾಗಳನ್ನು ಕೊಡುವುದು ಮತ್ತು ಉಪನ್ಯಾಸ ಮತ್ತು ಶಿಕ್ಷಣಗಳಿಗೆ ವ್ಯವಸ್ಥೆ ಮಾಡುವುದು ;

(v) ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳೊಂದಿಗೆ ಮತ್ತು ಪ್ರಾಧಿಕಾರಗಳೊಡನೆ ಸಹಕರಿಸುವುದು ;

(vi) ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಇತರ ಯಾವುದೇ ಬೋಧಕ ಹುದ್ದೆಗಳನ್ನು ಸ್ಥಾಪಿಸುವುದು, ಮಾರ್ಪಾಡುಗೊಳಿಸುವುದು ಅಥವಾ ರದ್ದುಗೊಳಿಸುವುದು ;

(vii) ಅಧಿಸದಸ್ಯತ್ವ, ಸಂಚಾರಿ ಅಧಿಸದಸ್ಯತ್ವ, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ವೃತ್ತಿ ವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ಕೊಡುವುದು ;

(viii) ಕಾಲೇಜುಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಮುದ್ರಣಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಇತರ ಸಂಸ್ಥೆಗಳನ್ನು ನಿರ್ವಹಿಸುವುದು ಮತ್ತು ಅವುಗಳ ಆಡಳಿತವನ್ನು ನಡೆಸುವುದು ;

(ix) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಡೆಸುವುದು ;

(x) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ವಾಸಸ್ಥಳದ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ;

(xi) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾನ್ಯ ಕಲ್ಯಾಣವನ್ನು ವೃದ್ಧಿಗೊಳಿಸುವುದಕ್ಕಾಗಿ ಏರ್ಪಾಟುಗಳನ್ನು ಮಾಡುವುದು ;

(xii) ಆಧ್ಯಾದೇಶಗಳ ಮೂಲಕ, ನಿಯಮಿಸಬಹುದಾದಂಥ ಫೀಜುಗಳನ್ನು ನಿಗದಿಪಡಿಸುವುದು, ಅಂಥ ಫೀಜುಗಳನ್ನು ಮತ್ತು ಇತರ ಚಾರ್ಜುಗಳನ್ನು ತಗಾದೆ ಮಾಡುವುದು ಮತ್ತು ಸ್ವೀಕರಿಸುವುದು ;

(xiii) ವಿದ್ಯಾರ್ಥಿನಿಯರಿಗೆ, ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಹಾಗೂ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳೆಂದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಘೋಷಿಸುವಂಥ ವ್ಯಕ್ತಿಗಳಿಗೆ, ವಾಸ ಸ್ಥಳಕ್ಕೆ, ಶಿಸ್ತಿಗೆ ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಏರ್ಪಾಟುಗಳನ್ನು ಮಾಡುವುದು ;

(xiv) ಆಡಳಿತಾತ್ಮಕ, ಲಿಪಿಕ ಮತ್ತು ಇತರ ಆವಶ್ಯಕ ಬೋಧನೇತರ ಹುದ್ದೆಗಳನ್ನು ಸೃಷ್ಟಿಸುವುದು ;

(xv) ವಿಶ್ವವಿದ್ಯಾನಿಲಯದ ಉದ್ದೇಶಕ್ಕಾಗಿ ಅನುದಾನ, ಮರಣ ಶಾಸನಿಕ ವ್ಯವಸ್ಥೆಯ ಮೂಲಕ ಅಥವಾ ಅನ್ಯಥಾ ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಬಹುದಾದ ಯಾವುದೇ ದತ್ತಿಗಳು, ದೇಣಿಗೆಗಳನ್ನು, ಅಥವಾ ನಿಧಿಗಳನ್ನು ಅಂಗೀಕರಿಸುವುದು ; ಧಾರಣ

ನು ಮತ್ತು ನಿರ್ವಹಿಸುವುದು ಹಾಗೂ ಯುಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಅಂತಹ ದತ್ತಿಗಳನ್ನು, ದೇಣಿಗೆಗಳನ್ನು ಅಥವಾ ನಿಧಿಗಳನ್ನು ಬಳಸುವುದು :

ಪರಂತು, ವಿದೇಶದ, ವಿದೇಶಿ ಪ್ರತಿಷ್ಠಾನದ ಅಥವಾ ಅಂಥ ದೇಶದ ಪ್ರತಿಷ್ಠಾನದ ಯಾವನೇ ವ್ಯಕ್ತಿಯಿಂದ ಯಾವುದೇ ದೇಣಿಗೆಯನ್ನು ರಾಜ್ಯ ಸರ್ಕಾರದ ಅನುಮೋದನೆ ಇಲ್ಲದೆ ಅಂಗೀಕರಿಸತಕ್ಕದ್ದಲ್ಲ.

(xvi) ಯೋಗ್ಯವಾದ ಮತ್ತು ಸಂಶೋಧನೆಯ ಹಾಗೂ ಸಾಮಾನ್ಯಜ್ಞಾನದ ಗಳ ಪ್ರಕಟಣೆಯನ್ನು ಕೈಗೊಳ್ಳುವುದು ;

(xvii) ವಿದ್ಯಾರ್ಥಿಗಳ ಅಥವಾ ನಿಯೋಜಿತರಿಗೆ ಸಂಬಂಧಿಸಿದ ವಿಶ್ವವಿದ್ಯಾಲಯ ಸಂಘಗಳನ್ನು ಸಂಘಟಿಸುವುದು, ಪ್ರೋತ್ಸಾಹಿಸುವುದು, ವಿನಿಯಮಿಸುವುದು ನಿಯಂತ್ರಿಸುವುದು ;

(xviii) (ಕ) ವಾರ್ತಾ ವಿಭಾಗ ;

(ಖ) ಉದ್ಯೋಗ ವಿಭಾಗ ;

(ಗ) ಪ್ರಕಟಣಾ ಇಲಾಖೆ ;

(ಘ) ವಿಶ್ವವಿದ್ಯಾನಿಲಯ ವಿಸ್ತರಣಾ ಮಂಡಲಿಗಳು ;

(ಙ) ವಿದ್ಯಾರ್ಥಿ ಕಲ್ಯಾಣ ವಿಭಾಗ ; ಮತ್ತು

(ಚ) ಅಂತರಿಕ ಶಿಸ್ತಿನ ಕೇಂದ್ರ ;

—ಇವುಗಳನ್ನು ನಿರ್ವಹಿಸುವುದು ;

(xix) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ಶಿಕ್ಷಣ ಸಂಸ್ಥೆಗಳನ್ನು ಸಂಲಗ್ನ ಕಾಲೇಜುಗಳಾಗಿ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿಗಳಿಗೆ ಪ್ರವೇಶ ಕೊಡುವುದು ಹಾಗೂ ಅಂಥ ಸಂಲಗ್ನತೆಯನ್ನು ಅಮಾನತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು ;

(xx) (ಕ) ವಿಶ್ವವಿದ್ಯಾನಿಲಯದ ಹೊರಗಿನ ಬೋಧನೆಗೆ ;

(ಖ) ಶಾರೀರಕ ಮತ್ತು ಸೈನಿಕ ತರಬೇತಿಗೆ ;

(ಗ) ವಿದ್ಯಾರ್ಥಿ ಸಂಘಗಳಿಗೆ ;

(ಘ) ಕ್ರೀಡಾ ಮತ್ತು ವ್ಯಾಯಾಮ ಕ ಬ್ಬುಗಳಿಗೆ; ಮತ್ತು

(ಙ) ಶೈಕ್ಷಣಿಕ ಉದ್ದೇಶಗಳಿಗಾಗಿ ದೃಢನಿಷ್ಠೆಯುಳ್ಳ ಶಿಕ್ಷಣ ಸಂಸ್ಥೆಗಳು ಅಥವಾ ಸಂಸ್ಥೆಗಳ ನಿರ್ವಹಣೆಗೆ ;

— ವಿಶ್ವವಿದ್ಯಾನಿಲಯದ ನಿಧಿಗಳಿಂದ ಅನುದಾನಗಳನ್ನು ಕೊಡುವುದು,

(xxi) ತನ್ನ ಪ್ರಾಧ್ಯಾಪಕರು ಮತ್ತು ಇತರ ಅಧ್ಯಾಪಕರು ಮತ್ತು ಇಲಾಖೆಗಳ ಹಾಗೂ ವಿಶೇಷ ಸಂಶೋಧನಾ ಸಂಸ್ಥೆಗಳ ಮೂಲಕ, ಸಂಲಗ್ನಗೊಂಡ ಕಾಲೇಜುಗಳಿಗೆ ಅಗತ್ಯವಾಗಬಹುದಾದಂಥ ಬೋಧನೆ ಮತ್ತು ಮಾರ್ಗದರ್ಶನವನ್ನು ಒದಗಿಸುವುದು;

(xxii) ಯಾವುದೇ ಸಂಸ್ಥೆಯನ್ನು ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾವುದೇ ಉದ್ದೇಶಕ್ಕಾಗಿ ಪೂರ್ಣವಾಗಿ ಅಥವಾ ಭಾಗಶಃ ಮನ್ನಣೆ ಕೊಡುವುದು ಮತ್ತು ಅಂಥ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು ;

(xxiii) ವಿಶೇಷವಾಗಿ, ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ, ಸಾಮಾನ್ಯವಾಗಿ ಕಲೆಗಳು, ವಿಜ್ಞಾನ ಮತ್ತು ವ್ಯಾಸಂಗ ಹಾಗೂ ಸಂಸ್ಕೃತಿಯ ಇತರ ಶಾಖೆಗಳನ್ನು ಅಭ್ಯಾಸಿಸಲು ಮತ್ತು ವೃದ್ಧಿಪಡಿಸಲು ಅಗತ್ಯವಾಗಬಹುದಾದಂಥ ಅವು ಹಿಂದೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ ಇತರ ಕಾರ್ಯಗಳನ್ನು ಮತ್ತು ವಿಷಯಗಳನ್ನು ಮಾಡುವುದು.

೫. ಅಧಿಕಾರ ವ್ಯಾಪ್ತಿ, ವಿಶೇಷ ಅಧಿಕಾರ ಇತ್ಯಾದಿಗಳಿಗೆ ಪ್ರವೇಶಾವಕಾಶ.— (೧) ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ವಿಶ್ವವಿದ್ಯಾನಿಲಯದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯ ಪ್ರದೇಶದಲ್ಲಿ ಚಲಾಯಿಸತಕ್ಕದ್ದು ಮತ್ತು ಸದರಿ ಪ್ರದೇಶದ ಹೊರಗಡೆ ಇರುವ ಯಾವುದೇ ಶಿಕ್ಷಣ ಸಂಸ್ಥೆಯು ವಿಶ್ವವಿದ್ಯಾನಿಲಯದ ಯಾವುದೇ ವಿಶೇಷಾಧಿಕಾರಗಳೊಡನೆ ಸಹವರ್ತಿಸತಕ್ಕದ್ದಲ್ಲ ಅಥವಾ ಅವುಗಳಿಗೆ ಪ್ರವೇಶ ಪಡೆಯತಕ್ಕದ್ದಲ್ಲ:

ಪರಂತು ಪತ್ರ ವ್ಯವಹಾರದ ಮೂಲಕ ವ್ಯಾಸಂಗಕ್ರಮಗಳ ಅಥವಾ ಬಾಹ್ಯ ಪದವಿ ಕ್ರಮಗಳ ಪ್ರಯೋಜನವನ್ನು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಪ್ರದೇಶದ ಹೊರಗಡೆ ಇರುವ ವಿದ್ಯಾರ್ಥಿಗಳಿಗೆ ವಿಸ್ತರಿಸಬಹುದು.

(೨) ತತ್ಕಾಲದಲ್ಲಿ ಜಾರಿಯಲ್ಲಿರುವ, ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ ಇತರ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯ ಪ್ರದೇಶದೊಳಗಿರುವ ಯಾವುದೇ ಶಿಕ್ಷಣ ಸಂಸ್ಥೆಯು, ಕಾನೂನಿನ ಮೂಲಕ ಸ್ಥಾಪಿತವಾದ ಮತ್ತು ನಿಗಮಿತವಾದ ಇತರ ಯಾವುದೇ ವಿಶ್ವವಿದ್ಯಾನಿಲಯದೊಡನೆ ಯಾವುದೇ ರೀತಿಯಲ್ಲಿ ಸಹವರ್ತಿಸತಕ್ಕದ್ದಲ್ಲ ಅಥವಾ ಅದರ ಯಾವುದೇ ವಿಶೇಷಾಧಿಕಾರಗಳಿಗೆ ಪ್ರವೇಶಪಡೆಯತಕ್ಕದ್ದಲ್ಲ ಮತ್ತು ಅದಕ್ಕೆ ಸಂಲಗ್ನಗೊಳ್ಳತಕ್ಕದ್ದಲ್ಲ ಮತ್ತು ಅಂಥ ಯಾವುದೇ ಇತರ ವಿಶ್ವವಿದ್ಯಾನಿಲಯವು ಸದರಿ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿರುವ ಅಂಥ ಯಾವುದೇ ಸಂಸ್ಥೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಕೊಡಲಾದ ಅಂಥ ಸಂಲಗ್ನತೆಯು ಆ ದಿನಾಂಕದಿಂದ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(೩) ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು:—

(i) ಬೆಂಗಳೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೬೪ರ ಮೇರೆಗೆ ಬೆಂಗಳೂರು ವಿಶ್ವವಿದ್ಯಾನಿಲಯಂದ ವಿಶೇಷಧಿಕಾರಿಗಳಿಗೆ ಪ್ರವೇಶ ಪಡೆದಿರುವ;

(ii) ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ, ೧೯೪೯ರ ಮೇರೆಗೆ ಕರ್ನಾಟಕ ವಿಶ್ವವಿದ್ಯಾನಿಲಯಂದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆದಿರುವ ಅಥವಾ ಅದರೊಡನೆ ಸಂಲಗ್ನಗೊಂಡಿರುವ;

(iii) ಮೈಸೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೫೬ರ ಮೇರೆಗೆ ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಸಂಸ್ಥೆಗಳನ್ನು ಹೊರತುಪಡಿಸಿ, ಮೈಸೂರು ವಿಶ್ವವಿದ್ಯಾನಿಲಯಂದ ವಿಶೇಷಾಧಿಕಾರಿಗಳಿಗೆ ಪ್ರವೇಶ ಪಡೆದಿರುವ ಅಥವಾ ಅದರೊಡನೆ ಸಂಲಗ್ನಗೊಂಡಿರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಆ ದಿನಾಂಕದಂದು ಮತ್ತು ixನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಸಂದರ್ಭಾನುಸಾರ, ಬೆಂಗಳೂರು ವಿಶ್ವವಿದ್ಯಾನಿಲಯ ಅಥವಾ ಕರ್ನಾಟಕ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯಗಳ ವಿಶೇಷ ಅಧಿಕಾರಗಳಿಗೆ ಪ್ರವೇಶಪಡೆದ ಅಥವಾ ಅವುಗಳೊಡನೆ ಸಂಲಗ್ನಗೊಂಡ ಸಂಸ್ಥೆಗಳೆಂದು ಭಾವಿಸತಕ್ಕದ್ದು. ಆ ದಿನಾಂಕಕ್ಕೆ ಮೊದಲು, ಮೈಸೂರು ವಿಶ್ವವಿದ್ಯಾನಿಲಯದೊಡನೆ ಸಂಲಗ್ನಗೊಂಡಿದ್ದ ಬೆಂಗಳೂರು ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಶಿಕ್ಷಣ ಸಂಸ್ಥೆಗಳು ಬೆಂಗಳೂರು ವಿಶ್ವವಿದ್ಯಾನಿಲಯದೊಡನೆ ಸಂಲಗ್ನಗೊಂಡಿರುವುದಾಗಿ ಭಾವಿಸತಕ್ಕದ್ದು :

ಪರಂತು, ಗೊತ್ತುಪಡಿಸಲಾದ ದಿನಾಂಕದಂದು, ರಾಜ್ಯ ಸರ್ಕಾರದ ಮುಂದೆ ಇತ್ಯರ್ಥದಲ್ಲಿರುವ, ಸದರಿ ಅಧಿನಿಯಮಿತಿಗಳ ಪೈಕಿ ಯಾವುದೇ ಅಧಿನಿಯಮಿತಿಯ ಅನುಸಾರವಾಗಿ ಸಂಲಗ್ನತೆಗಾಗಿ ಮಾಡಿದ ಯಾವುದೇ ಶಿಫಾರಸು, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಸಮುಚಿತ ಹೊಸ ವಿಶ್ವವಿದ್ಯಾನಿಲಯದೊಡನೆ ಸಂಲಗ್ನತೆಗೆ ಮಾಡಿದ ಶಿಫಾರಸು ಆಗಿರುವುದಾಗಿ ಭಾವಿಸತಕ್ಕದ್ದು ಮತ್ತು ಈ ಆಧಾರದ ಮೇಲೆ ರಾಜ್ಯ ಸರ್ಕಾರವು ಅದನ್ನು ವಿಲೆ ಮಾಡತಕ್ಕದ್ದು:

(೪) ಬೆಂಗಳೂರು, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಿಗೆ, ಸೇರಿರುವ ಕಾಲೇಜುಗಳು, ಅವುಗಳಿಗೆ ಲಗತ್ತಾದ ವಿದ್ಯಾರ್ಥಿನಿಲಯಗಳು, ಪೀಠೋಪಕರಣ ಸಾಮಗ್ರಿಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಸಾಮಗ್ರಿಗಳ ಸಮೇತ ಇತರ ಕಟ್ಟಡಗಳು ಮತ್ತು ಎಲ್ಲ ಇತರ ಚರ ಮತ್ತು ಸ್ಥಿರ ಸ್ವತ್ತು ಮತ್ತು ಗೊತ್ತುಪಡಿಸಲಾದ ದಿನಾಂಕಕ್ಕೆ ಹಿಂದೆ ಇತ್ಯರ್ಥದಲ್ಲಿರುವ ಕಾನೂನು ವ್ಯವಹರಣೆಗಳೂ ಸೇರಿ ಎಲ್ಲಾ ವ್ಯವಹರಣೆಗಳೂ ಆ ದಿನಾಂಕದಂದು ಮತ್ತು ದಿನಾಂಕದಿಂದ ಪರಿಣಾಮಕಾರಿಯಾಗುವ

ಸಂದರ್ಭಾನುಸಾರ ೩ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಮಂಗಳೂರು ವಿಶ್ವವಿದ್ಯಾ ನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿ ವರ್ಗಾಯಿತವಾಗತಕ್ಕುದು ಅಥವಾ ಅದರಿಂದ ಅಥವಾ ಅದರ ವಿರುದ್ಧ ಮುಂದುವರಿಸ ತಕ್ಕುದು.

(೫) (೩) ಮತ್ತು (೪)ನೇ ಉಪಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,—

೩ (i) ಬಳ್ಳಾರಿ, ಬೀದರ್, ಕಲ್ಬುರ್ಗಿ ಮತ್ತು ರಾಯಚೂರು, ಜಿಲ್ಲೆಗಳಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಗಳಿಗೆ ಪ್ರವೇಶ ಪಡೆದಿರುವ ಅಥವಾ ಅದರೊಂದಿಗೆ ಶಿಕ್ಷಣ ಸಂಸ್ಥೆಗಳು ;

(ii) ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿರುವ ಮತ್ತು ಮೈಸೂರು ವಿಶ್ವ ವಿದ್ಯಾನಿಲಯದ ವಿಶೇಷಾಧಿಕಾರಿಗಳಿಗೆ ಪ್ರವೇಶ ಪಡೆದಿರುವ ಅಥವಾ ಅದರೊಂದಿಗೆ ಸಂಲಗ್ನಗೊಂಡಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳು ;

ಸದರಿ ದಿನಾಂಕದಂದು ಮತ್ತು ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಮತ್ತು IX ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಸಂದರ್ಭಾನುಸಾರ ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದಾ ನಿಲಯಗಳ ವಿಶೇಷಾಧಿಕಾರಿಗಳಿಗೆ ಪ್ರವೇಶ ಪಡೆದಿರುವ ಅಥವಾ ಅವುಗಳೊಂದಿಗೆ ಸಂಲಗ್ನಗೊಂಡಿರುವ ಸಂಸ್ಥೆಗಳೆಂದು ಭಾವಿಸತಕ್ಕುದು :

ಪರಂತು, ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಂದು, ಹಿಂದೆ ಹೇಳಿದ ಯಾವುದೇ ಜಿಲ್ಲೆಯಲ್ಲಿರುವ ಸಂಸ್ಥೆಗೆ ಸಂಬಂಧಿಸಿದಂತೆ ಸಂಲಗ್ನತೆಗಾಗಿ ಸಲ್ಲಿಸಲಾದ ಯಾವುದೇ ಅರ್ಜಿ ಕರ್ನಾಟಕ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಅಥವಾ ರಾಜ್ಯ ಸರ್ಕಾರದಲ್ಲಿ ಇತ್ಯರ್ಥದಲ್ಲಿದ್ದರೆ ೩ನೇ ಪ್ರಕರಣದ ಉಪಪ್ರಕರಣ (೧ಕ)ದ ಮೇರೆಗೆ ಸ್ಥಾಪಿತವಾದ ಸಮುಚಿತ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನತೆಗಾಗಿ ಸಲ್ಲಿಸಲಾದ ಅರ್ಜಿಯೆಂದು ಭಾವಿಸತಕ್ಕುದು ಮತ್ತು ಈ ಆಧಾರದ ಮೇಲೆ, ಸಂದರ್ಭಾನುಸಾರ, ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದ್ಯಾನಿಲಯ ಅಥವಾ ರಾಜ್ಯ ಸರ್ಕಾರವು ಅದನ್ನು ವ್ಯವಹರಿಸತಕ್ಕುದು ಮತ್ತು ವಿಲೆ ಮಾಡತಕ್ಕುದು.

(ಖ) (i) ಕಲ್ಬುರ್ಗಿಯಲ್ಲಿರುವ ಮತ್ತು ಬಳ್ಳಾರಿ ಜಿಲ್ಲೆಯ ನಂದಿಹಳ್ಳಿಯಲ್ಲಿರುವ ಸ್ನಾತಕೋತ್ತರ ಕೇಂದ್ರಗಳಲ್ಲಿನ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿದ ; ಮತ್ತು

(ii) ಕೊಣಾಜೆಯಲ್ಲಿರುವ ಸ್ನಾತಕೋತ್ತರ ಕೇಂದ್ರದಲ್ಲಿನ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ, ಎಲ್ಲ ಕಾಲೇಜುಗಳು, ಅವುಗಳಿಗೆ ಲಗತ್ತಾದ ವಿದ್ಯಾರ್ಥಿ ನಿಲಯಗಳು, ಪೀಠೋಪಕರಣ ಸಾಮಗ್ರಿಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗ

, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಗಳೊಡನೆ ಇತರ ಕಟ್ಟಡಗಳು ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಡ ಎಲ್ಲ ಇತರ ಸ್ವತ್ತು ;

ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ೩ನೇ ಪ್ರಕರಣದ (೧ಕ) ಉಪಪ್ರಕರಣದ ಮೇರೆಗೆ ಸ್ಥಾಪಿಸ ಲಾದ, ಸಂದರ್ಭಾನುಸಾರ, ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ವರ್ಗಾಯಿತವಾಗತಕ್ಕದು.

(ಗ) ಈ ಮುಂದಿನವುಗಳ ವ್ಯವಹಾರಗಳಿಗೆ ಸಂಬಂಧಪಟ್ಟಂತೆ — ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ;

(i) ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯವಹಾರಗಳಿಗೆ ಸಂಬಂಧಿಸಿದ ಮತ್ತು ಕಲ್ಬುರ್ಗಿ ವಿಶ್ವವಿದ್ಯಾನಿಲಯದ ವಿಶ್ವವಿದ್ಯಾನಿಲಯ ಪ್ರದೇಶದಿಂದ ಉದ್ಭವಿಸಿರುವ ;

(ii) ಮೈಸೂರು ವಿಶ್ವವಿದ್ಯಾನಿಲಯದ ವ್ಯವಹಾರಗಳಿಗೆ ಸಂಬಂಧಿಸಿದ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ವವಿದ್ಯಾನಿಲಯ ಪ್ರದೇಶದಿಂದ ಉದ್ಭವಿಸಿರುವ ; ಕಾನೂನು ವ್ಯವಹರಣೆಗಳನ್ನು ಒಳಗೊಂಡು ಎಲ್ಲಾ ವ್ಯವಹರಣೆಗಳು ಆ ದಿನಾಂಕದಂದು ಮತ್ತು ಆ ದಿನಾಂಕದಂದಿನಿಂದ ಪರಿಣಾಮಕಾರಿಯಾಗುವಂತೆ ;

೩ನೇ ಪ್ರಕರಣದ (೧ಕ) ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ, ಸಂದರ್ಭಾನುಸಾರ ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿತ ವಾಗತಕ್ಕದು ಅಥವಾ ಅದರಿಂದ ಅಥವಾ ಅದರ ವಿರುದ್ಧ ಮುಂದುವರಿಯತಕ್ಕದು.

<u>ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳಿಗೂ ತೆರೆದಿರತಕ್ಕದು</u> :—(೧) ವಿಶ್ವ ವಿದ್ಯಾನಿಲಯವು, ಎಲ್ಲಾ ವ್ಯಕ್ತಿಗಳಿಗೂ ಅವರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗಕ್ಕೆ ಸೇರಿರಲಿ, ತೆರೆದಿರತಕ್ಕದು, ಮತ್ತು ಅದಕ್ಕೆ ಅಧ್ಯಾಪಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆಯಲು ಅಥವಾ ಅದರಲ್ಲಿ ಯಾವುದೇ ಹುದ್ದೆಯನ್ನು ಧಾರಣಮಾಡಲು ಅಥವಾ ಅದರಲ್ಲಿ ಪದವೀಧರ ನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಅಥವಾ ಚಲಾಯಿ ಸಲು ಹಕ್ಕುಳ್ಳವನಾಗಿರುವುದಕ್ಕೆ ಯಾವುದೇ ಧಾರ್ಮಿಕ ನಂಬಿಕೆ ಅಥವಾ ವೃತ್ತಿಯ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಯಾವುದೇ ಉಪಪರೀಕ್ಷೆಯನ್ನು ವಿಶ್ವವಿದ್ಯಾನಿಲಯವು ವಿಧಿಸುವುದು ಕಾನೂನು ಬದ್ಧವಾಗಿರತಕ್ಕದಲ್ಲ.

(೨) (೧)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ವಿಶೇಷ ಅಥವಾ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ, ಈ ಕೆಳಕಂಡ

ವ್ಯಕ್ತಿಗಳ ವರ್ಗಗಳಿಗಾಗಿ, ವಿಶ್ವವಿದ್ಯಾನಿಲಯವು [illegible] ಅಥವಾ [illegible] ಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಾಗಿ ಪ್ರವೇಶದ ಉದ್ದೇಶಗಳಿಗಾಗಿ ಸ್ಥಳಗಳನ್ನು ಕಾಯ್ದಿರಿಸತಕ್ಕದು. ಎಂದರೆ,—

(i) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು;

(ii) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರೆಂದು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಘೋಷಿಸಿದ ವರ್ಗಗಳು ;

(iii) ಕೇಂದ್ರ ಸರ್ಕಾರದ ನಾಮನಿರ್ದೇಶಿತರು ;

(iv) ರಕ್ಷಣಾ ಸಿಬ್ಬಂದಿ ಮತ್ತು ಮಾಜಿ ಸೈನಿಕರು ಮತ್ತು ಅವರ ಮಕ್ಕಳು ಅಥವಾ ಪ್ರತಿಪಾಲಿತರು ; ಮತ್ತು

(v) ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳು ;

(೩) ವಿಶ್ವವಿದ್ಯಾನಿಲಯವು, ಅಂಥವೇ ಆದೇಶಗಳಿಗೊಳಪಟ್ಟು (೨)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುದೇ ಪ್ರವರ್ಗಗಳಲ್ಲಿ ಬರುವ ವ್ಯಕ್ತಿಗಳಿಗೆ ಅಂಥ ಫೀಜು ಅಥವಾ ಊಟ, ವಸತಿ ಅಥವಾ ಇತರ ವೆಚ್ಚಗಳನ್ನು ಸಂದಾಯ ಮಾಡುವುದರಿಂದ ಅಥವಾ ಎಲ್ಲ ಫೀಜು ಮತ್ತು ವೆಚ್ಚಗಳಿಂದ ಯಾವುದೇ ವಿನಾಯಿತಿ ಕೊಡಬಹುದು ಅಥವಾ ವಿಶೇಷ ವಿದ್ಯಾರ್ಥಿ ವೇತನಗಳನ್ನು ಒದಗಿಸಬಹುದು.

<u>ವಿವರಣೆ</u> :— ಈ ಪ್ರಕರಣದ ಉದ್ದೇಶಗಳಿಗಾಗಿ,—

'ಸ್ವಾತಂತ್ರ್ಯ ಹೋರಾಟಗಾರ' ಎಂದರೆ ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿದ್ದ ಕಾರಣದಿಂದಾಗಿ,—

(ಕ) ಆರು ತಿಂಗಳಿಗೆ ಕಡಿಮೆಯಿಲ್ಲದ ಕಾರಾವಾಸ ಶಿಕ್ಷೆಗೆ ಗುರಿಯಾದ ; ಅಥವಾ

(ಖ) ಆರು ತಿಂಗಳಿಗೆ ಕಡಿಮೆಯಿಲ್ಲದಂತೆ (ವಿಚಾರಣಾ ಖೈದಿಯಾಗಿ ಬಂಧನವೂ ಒಳಗೊಂಡಂತೆ) ಬಂಧನದಲ್ಲಿ ಇಡಲಾಗಿದ್ದ ; ಅಥವಾ

(ಗ) ತನ್ನ ಕೆಲಸವನ್ನು ಅಥವಾ ಜೀವನೋಪಾಯವನ್ನು ಅಥವಾ ತನ್ನ ಇಡೀ ಸ್ವತ್ತನ್ನು ಅಥವಾ ಅದರ ಗಣನಾರ್ಹ ಭಾಗವನ್ನು ಕಳೆದುಕೊಂಡಿರುವ ; ಮತ್ತು

ವಿನಾಯಿತಿಗಾಗಿ ಅರ್ಜಿ ಮಾಡಿಕೊಂಡ ದಿನಾಂಕದ ನಿಕಟ ಪೂರ್ವದ ಐದು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಅಧಿವಾಸಿಯಾದ ಯಾವನೇ ವ್ಯಕ್ತಿ.

೭. <u>ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆ</u> :—(೧) ಅಕಡೆಮಿಕ್ ಕೌನ್ಸಿಲಿನ ನಿಯಂತ್ರಣಕ್ಕೊಳಪಟ್ಟು, ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಕ್ಕೆ ಸಂಬಂಧಪಟ್ಟ

ಎಲ್ಲಾ ಮನ್ನಣೆ ಪಡೆದ ಬೋಧನೆಯನ್ನು ವಿನಿಯಮನಗಳ ಮೂಲಕ ನಿಯಮಿಸಲಾದ ಯಾವುದೇ ಪಠ್ಯಕ್ರಮಕ್ಕನುಸಾರವಾಗಿ ವಿಶ್ವವಿದ್ಯಾನಿಲಯದ ಅಧ್ಯಾಪಕರು ನಡೆಸತಕ್ಕದ್ದು;

ಮತ್ತು ಅದು ಉಪನ್ಯಾಸ ಮಾಡುವುದನ್ನೂ ಪ್ರಯೋಗಶಾಲಾ ಕೆಲಸವನ್ನೂ ಮತ್ತು ಇತರ ಬೋಧನೆಯನ್ನು ಒಳಗೊಳ್ಳತಕ್ಕದ್ದು.

(೨) ಅಂಥ ಎಲ್ಲಾ ಬೋಧನೆಯನ್ನೂ ಪರಿನಿಯಮಗಳು ನಿಯಮಿಸಬಹುದಾದಂಥ ಪ್ರಾಧಿಕಾರಗಳು ಸಂಘಟನೆ ಮಾಡತಕ್ಕದ್ದು.

(೩) ವ್ಯಾಸಂಗ ಕ್ರಮಗಳು ಮತ್ತು ಪಠ್ಯವಿಷಯಗಳು ಅಧ್ಯಾದೇಶಗಳ ಮೂಲಕ ಮತ್ತು ಅವುಗಳಿಗೊಳಪಟ್ಟು ವಿನಿಯಮನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

೮. ಪರಿಶೀಲನೆ ಮತ್ತು ನಿಯಂತ್ರಣ.—(೧) ಕುಲಾಧಿಪತಿಯು, ರಾಜ್ಯ ಸರ್ಕಾರವು ಹಾಗೆ ಇಚ್ಛಿಸಿದರೆ, ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾನಿಲಯದ, ಅದರ ಕಟ್ಟಡಗಳ ಪ್ರಯೋಗ ಶಾಲೆಗಳ, ಗ್ರಂಥಾಲಯಗಳ ,ವಸ್ತು ಸಂಗ್ರಹಾಲಯಗಳ, ಕಾರ್ಯಾಗಾರಗಳ, ವಸ್ತು ಸಾಧನ ಸಾಮಗ್ರಿಗಳ ಮತ್ತು ವಿಶ್ವವಿದ್ಯಾನಿಲಯವು ನಿರ್ವಹಿಸುವ ಆಡಳಿತ ನಡೆಸುವ, ಮನ್ನಣೆ ಕೊಟ್ಟಿರುವ ಅಥವಾ ಅನುಮೋದಿಸಿರುವ ಯಾವುದೇ ಸಂಸ್ಥೆಯ ಮತ್ತು ವಿಶ್ವವಿದ್ಯಾನಿಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಪರಿಶೀಲನೆಯನ್ನು ಮಾಡಿಸತಕ್ಕದ್ದು, ಮತ್ತು ವಿಶ್ವವಿದ್ಯಾನಿಲಯದ ಬಗ್ಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅದೇ ರೀತಿಯಲ್ಲಿ ಪರಿಶೀಲನೆ ಅಥವಾ ವಿಚಾರಣೆಯನ್ನು ಮಾಡಿಸತಕ್ಕದ್ದು ಮತ್ತು ತಾನಾಗಿಯೇ ಹಾಗೆ ಮಾಡಿಸಬಹುದು.

(೨) (೧)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆ ಅಥವಾ ವಿಚಾರಣೆಯನ್ನು ಮಾಡಲು ನಿರ್ದೇಶಿತರಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ, ಸಂಬಂಧಪಟ್ಟ ಸಂಸ್ಥೆಗಳಿಗೆ ಮತ್ತು ಆವರಣ ಮತ್ತು ಅಗತ್ಯವಾಗಬಹುದಾದಂಥ ಲೆಕ್ಕಪತ್ರಗಳಿಗೆ ಅಥವಾ ಇತರ ದಾಖಲೆಗಳಿಗೆ ಪ್ರವೇಶಾವಕಾಶವಿರತಕ್ಕದ್ದು.

(೩) ಸದರಿ ವ್ಯಕ್ತಿಯು ಅಥವಾ ವ್ಯಕ್ತಿಗಳು ಪರಿಶೀಲನೆಯ ೧[ಅಥವಾ ವಿಚಾರಣೆಯ] ಫಲಿತಾಂಶದ ವರದಿಯನ್ನು ಕುಲಾಧಿಪತಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(೪) ರಾಜ್ಯ ಸರ್ಕಾರವು ಆ ವರದಿಯಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯೋಕ್ತಿಗಳನ್ನು ಸೂಚಿಸಿ, ಕುಲಪತಿಗೆ

ಸಂಬೋಧಿಸಬಹುದು, ಮತ್ತು ಕುಲಪತಿಯು, ಅವುಗಳನ್ನು ಅವಶ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಸಿಂಡಿಕೇಟಿಗೆ ತಿಳಿಸತಕ್ಕುದು.

(೫) ಸಿಂಡಿಕೇಟು, ತಾನು ಕೈಕೊಂಡ ಅಥವಾ ಕೈಕೊಳ್ಳಬೇಕೆಂದು ಉದ್ದೇಶಿಸಿರುವಂಥ ಕ್ರಮ ಯಾವುದಾದರೂ ಇದ್ದರೆ, ಅದನ್ನು ಕುಲಪತಿಯ ಮೂಲಕ ರಾಜ್ಯ ಸರ್ಕಾರಕ್ಕೆ ತಿಳಿಸತಕ್ಕುದು.

(೬) ಸಿಂಡಿಕೇಟು ಯುಕ್ತ ಕಾಲದೊಳಗಾಗಿ ರಾಜ್ಯ ಸರ್ಕಾರಕ್ಕೆ ಸಮಾಧಾನವಾಗುವಂತೆ ಕ್ರಮವನ್ನು ಕೈಗೊಳ್ಳದಿದ್ದಲ್ಲಿ ಅಥವಾ ಯಾವುದೇ ಕ್ರಮವನ್ನು ಕೈಗೊಳ್ಳಲು ವಿಫಲವಾದಲ್ಲಿ, ಅವಶ್ಯವಿರುವಂಥ ನಿರ್ದೇಶಗಳನ್ನು ಹೊರಡಿಸುವಂತೆ ರಾಜ್ಯ ಸರ್ಕಾರವು ಕುಲಪತಿಯನ್ನು ಆಗತ್ಯಪಡಿಸಬಹುದು ಮತ್ತು ಅದನ್ನು ಪಾಲಿಸುವುದಕ್ಕೆ ಸಿಂಡಿಕೇಟು ಬದ್ಧವಾಗಿರತಕ್ಕುದು.

(೭) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಆಗತ್ಯಪಡಿಸಬಹುದಾದ, ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಟ್ಟ ವಿವರ ಪಟ್ಟಿಕೆಗಳು, ವಿವರ ಪತ್ರಗಳು, ಲೆಕ್ಕಪತ್ರಗಳು ಅಥವಾ ಇತರ ವಿವರಗಳನ್ನು ಸಿಂಡಿಕೇಟು ಒದಗಿಸತಕ್ಕುದು.

(೮) ಈ ಹಿಂದಿನ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ ರಾಜ್ಯ ಸರ್ಕಾರವು, ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ, ತನ್ನ ಅಭಿಪ್ರಾಯದಲ್ಲಿ, ಈ ಅಧಿನಿಯಮ, ಪರಿನಿಯಮಗಳು ಅಥವಾ ಅಧ್ಯಾದೇಶಗಳಿಗೆ ಅನುಗುಣವಾಗಿಲ್ಲದ ವಿಶ್ವವಿದ್ಯಾನಿಲಯದ ಯಾವುದೇ ವ್ಯವಹರಣೆಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು, ರಾಜ್ಯ ಸರ್ಕಾರವು, ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ವಿಶ್ವವಿದ್ಯಾನಿಲಯವನ್ನು ಕೇಳತಕ್ಕುದು ಮತ್ತು ಯುಕ್ತ ಕಾಲದೊಳಗಾಗಿ, ಯಾವುದೇ ಕಾರಣವನ್ನು ತೋರಿಸಿದರೆ ಅದನ್ನು ಪರ್ಯಾಲೋಚಿಸತಕ್ಕುದು.

(೯) (೮)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು ಸಾಧ್ಯವಾಗಬಹುದಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ ಇಡತಕ್ಕುದು.

## ಅಧ್ಯಾಯ-III

### ವಿಶ್ವವಿದ್ಯಾನಿಲಯದ ಅಧಿಕಾರಿಗಳು

**೯. ವಿಶ್ವವಿದ್ಯಾನಿಲಯದ ಅಧಿಕಾರಿಗಳು.**—ಈ ಕೆಳಕಂಡವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರತಕ್ಕುದು. ಎಂದರೆ,—

(೧) ಕುಲಾಧಿಪತಿ

(ಖ) ಕುಲಪತಿ

(ಗ) ಕುಲಸಚಿವ

(ಘ) ಪರೀಕ್ಷೆಗಳ ನಿಯಂತ್ರಕ

(ಙ) ಹಣಕಾಸು ಅಧಿಕಾರಿ

(ಚ) ಡೀನ್‌ಗಳು

(ಛ) ಗ್ರಂಥಪಾಲಕ

(ಜ) ವಿದ್ಯಾರ್ಥಿ ಕಲ್ಯಾಣದ ಡೀನ್

(ಝ) ಕುಲಪತಿಯು ಶಿಫಾರಸಿನ ಮೇಲೆ ಕಾಲಕಾಲಕ್ಕೆ ಕುಲಾಧಿಪತಿಯು ಹೆಸರಿಸಬಹುದಾದಂಥ ವಿಶ್ವವಿದ್ಯಾನಿಲಯದ ಇತರ ಅಧಿಕಾರಿಗಳು.

೧೦. ಕುಲಾಧಿಪತಿ.—(೧) ಕರ್ನಾಟಕ ರಾಜ್ಯಪಾಲನು ತನ್ನ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿರತಕ್ಕದ್ದು.

(೨) ಆತನು ವಿಶ್ವವಿದ್ಯಾನಿಲಯದ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಹಾಜರಿದ್ದಾಗ, ಸೆನೆಟ್ ಸಭೆಗಳ ಮತ್ತು ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(೩) ಆತನು, ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ ಅಥವಾ ಬೇರೆಗೆ ತನಗೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಹೊಂದಿರತಕ್ಕದ್ದು.

೧೧. ಕುಲಪತಿ.—(೧) ಕುಲಪತಿಯು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(೨) ಆತನನ್ನು, ಕುಲಾಧಿಪತಿಯಿಂದ, ರಾಜ್ಯ ಸರ್ಕಾರದಿಂದ ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಮತ್ತು ಸಿಂಡಿಕೇಟಿನಿಂದ, ನಾಮ ನಿರ್ದೇಶಿತರಾದ ಒಬ್ಬೊಬ್ಬ ವ್ಯಕ್ತಿಯಿಂದ ಕೂಡಿದ ನಾಲ್ವರು ಸದಸ್ಯರ ಸಮಿತಿಯು ಶಿಫಾರಸು ಮಾಡಿದ ಮೂರು ಜನರಿಗೆ ಕಡಿಮೆಯಿಲ್ಲದ ಪಟ್ಟಿಯಿಂದ ಕುಲಾಧಿಪತಿಯು ನೇಮಕ ಮಾಡತಕ್ಕದ್ದು. ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿತವಾದ ಯಾವನೇ ವ್ಯಕ್ತಿಯು ವಿಶ್ವವಿದ್ಯಾನಿಲಯ ಅಥವಾ ವಿಶ್ವವಿದ್ಯಾನಿಲಯದೊಂದಿಗೆ ಸಂಲಗ್ನಗೊಂಡ ಯಾವುದೇ ಕಾಲೇಜಿನೊಂದಿಗೆ ಅಥವಾ ಸಂಸ್ಥೆಯೊಂದಿಗೆ ಸಂಬಂಧ ಹೊಂದಿರತಕ್ಕದ್ದಲ್ಲ. ಕುಲಪತಿಯು ಆ ನಾಲ್ವರು ಸದಸ್ಯರ ಪೈಕಿ ಒಬ್ಬನನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು.

ಪರಂತು, ಕುಲಾಧಿಪತಿಯು ಸಮಿತಿಯು ಶಿಫಾರಸು ಮಾಡಿದ ಯಾವುದೇ ವ್ಯಕ್ತಿಯನ್ನು ಅನುಮೋದಿಸದಿದ್ದರೆ, ಆತನು ಸಮಿತಿಯಿಂದ ಹೊಸ ಶಿಫಾರಸನ್ನು ತರಿಸಿಕೊಳ್ಳಬಹುದು.

(೩) ಯಾವನೇ ವ್ಯಕ್ತಿಯು ಅರವತ್ತೈದು ವಯಸ್ಸಿನವನಾಗಿದ್ದರೆ, ಆತನನ್ನು ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದಲ್ಲ ಮತ್ತು ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(೪) ಕುಲಪತಿಯು, ಕುಲಾಧಿಪತಿಯ ಇಷ್ಟ ಪರ್ಯಂತ ಮತ್ತು ೩ನೇ ಉಪ ಪ್ರಕರಣದ ಉಪಬಂಧಕ್ಕೊಳಪಟ್ಟು ಮೂರು ವರ್ಷಗಳ ಅವಧಿಯುವರೆಗೆ ಪದಧಾರಣ ಮಾಡತಕ್ಕದ್ದು. ಆದರೆ, ಆತನು ಪುನರ್ನೇಮಕಕ್ಕೆ ಅರ್ಹನಾಗಿರತಕ್ಕದ್ದು:

ಪರಂತು, ಯಾವನೇ ವ್ಯಕ್ತಿಯನ್ನು, ಎರಡು ಅವಧಿಗಳಿಗಿಂತ ಹೆಚ್ಚಾಗಿ ಕುಲಪತಿಯಾಗಿ ನೇಮಕ ಮಾಡತಕ್ಕದ್ದಲ್ಲ.

(೫) ಕುಲಪತಿಯ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವನ ನೇಮಕ ತರುವಾಯ ಅವನಿಗೆ ಅನನುಕೂಲವಾಗುವಂತೆ ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.

(೬) ರಾಜ್ಯದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಪ್ರಾಧ್ಯಾಪಕನು ಕುಲಪತಿಯಾಗಿ ನೇಮಕಗೊಂಡರೆ, ಪ್ರಾಧ್ಯಾಪಕನಾಗಿ ಅವನ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಅವನು ಕುಲಪತಿಯಾಗಿರುವ ಅಧಿಕಾರಾವಧಿಯಲ್ಲಿ ಅವನಿಗೆ ಅನಾನುಕೂಲವಾಗುವಂತೆ ಪರಿಷ್ಕರಿಸತಕ್ಕದ್ದಲ್ಲ ಮತ್ತು ಅವನು ತನ್ನ ಹಿಂದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು.

೧೨. ಕುಲಪತಿಯ ಅಧಿಕಾರಗಳು :—(೧) ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯ ನಿರ್ವಾಹಕ ಮತ್ತು ವಿದ್ಯಾ ವಿಷಯಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಚಲಾಯಿಸತಕ್ಕದ್ದು. ಅವನು ವಿಶ್ವವಿದ್ಯಾನಿಲಯದಲ್ಲಿ ಯಥೋಚಿತ ಶಿಸ್ತು ಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(೨) ಅವನು ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು. ಅವನು ಸೆನೆಟ್ಟಿನ ಮತ್ತು ಕುಲಾಧಿಪತಿಯ ಗೈರು ಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನೂ ವಹಿಸತಕ್ಕದ್ದು ಅವನು ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಸಭೆಯಲ್ಲಿ ಹಾಜರಿರಲು ಮತ್ತು ಅದನ್ನು ಸಂಬೋಧಿಸಲು ಹಕ್ಕುಳ್ಳವನಾಗಿರತಕ್ಕದ್ದು. ಆದರೆ, ಅವನು ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿದ್ದ ಹೊರತು, ಅದರಲ್ಲಿ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(೩) ಅವನು ಈ ಅಧಿನಿಯಮದ ಪರಿನಿಯಮಗಳ ಅಧ್ಯಾದೇಶಗಳ ಮತ್ತು ವಿನಿಯಮಗಳ ಮತ್ತು ನಿಯಮಗಳ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳ

ತಕ್ಕುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರ ತಕ್ಕುದು.

(೪) ಅವನು, ತಾನಾಗಿಯೇ ಆಗಲಿ ಅಥವಾ ತನ್ನಿಂದ ಬರಹದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವನೇ ಅಧಿಕಾರಿಯ ಮೂಲಕವೇ ಆಗಲಿ, ಸೆನೆಟ್ ಸಿಂಡಿಕೇಟ್ ಅಕಡೆಮಿಕ್ ಕೌನ್ಸಿಲ್ ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯಬಹುದು. ಮತ್ತು ಸದರಿ ಪ್ರಾಧಿಕಾರಗಳ ತೀರ್ಮಾನವನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕುದು.

(೫) ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಅವನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕುದು, ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರ ಅಥವಾ ನಿಕಾಯಕ್ಕೆ ತೆಗೆದುಕೊಂಡು ಕ್ರಮದ ಬಗ್ಗೆ ವರದಿ ಮಾಡ ತಕ್ಕುದು:

ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅದನ್ನು ಅನುಮೋದಿಸದಿದ್ದರೆ ಅದು ಆ ವಿಷಯವನ್ನು ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಗೆ ಒಪ್ಪಿಸಬಹುದು. ಅವನ ತೀರ್ಮಾನವೇ ಅಂತಿಮ ವಾಗಿರತಕ್ಕುದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಕುಲಪತಿಯ ವರದಿಯ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನವು ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವನೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದರೆ ಆ ವ್ಯಕ್ತಿಯು ಅವನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕುದು.

(೬) ಕುಲಪತಿಯು, ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು.

೧೩. <u>ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯ ವ್ಯವಸ್ಥೆ.</u> (೧) ರಜೆ, ಅನಾರೋಗ್ಯ ಅಥವಾ ಇತರ ಯಾವುದೇ ಕಾರಣದಿಂದಾಗಿ ಕುಲಪತಿಯ ತಾತ್ಕಾಲಿಕ ಗೈರು ಹಾಜರಿಯ ಕಾಲದಲ್ಲಿ ಕುಲಾಧಿಪತಿಯು ಕುಲಪತಿಯ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಗಳನ್ನು ಮಾಡಬಹುದು.

(೨) ಕುಲಪತಿಯ ಹುದ್ದೆಯು ಭರ್ತಿಯಾಗದೆ ಖಾಲೀ ಉಳಿದಿರುವ ಅವಧಿಯಲ್ಲಿ ಕುಲಾಧಿಪತಿಯು ನೇಮಕ ಮಾಡಬಹುದಾದಂಥ ವ್ಯಕ್ತಿಯು ಕುಲಪತಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಕುಲಪತಿಯ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಕುಲಪತಿಯ ವಿಶೇಷಾಧಿಕಾರಗಳಿಗೆ ಮತ್ತು ಕುಲಾಧಿಪತಿಯು ನಿರ್ಧರಿಸಬಹುದಾದಂಥ ಉಪಲಬ್ಧಿಗಳಿಗೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

೧೪. ಕುಲಸಚಿವ :—(೧) ಕುಲಾಧಿಪತಿಯು ಕುಲಪತಿಯೊಡನೆ ಮತ್ತು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ನೇಮಕ ಮಾಡಿದ ಕುಲಸಚಿವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಆತನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆ ಹಾಗೂ ಷರತ್ತುಗಳು, ಅದೇ ರೀತಿಯಲ್ಲಿ ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(೨) ಅವನು, ಸಿಂಡಿಕೇಟಿನ ಪದನಿಮಿತ್ತ ಕಾರ್ಯದರ್ಶಿ ಮತ್ತು ಸೆನೆಟ್ಟಿನ, ಅಕಡೆಮಿಕ್ ಕೌನ್ಸಿಲಿನ ಮತ್ತು ವ್ಯಾಸಂಗ ವಿಭಾಗಗಳ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

೩) (ಕ) ವಿಶ್ವವಿದ್ಯಾನಿಲಯದ ದಾಖಲೆಗಳು, ಸಾಮಾನ್ಯ ಮೊಹರು ಮತ್ತು ಕುಲಪತಿ ಅಥವಾ ಸಿಂಡಿಕೇಟ್ ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಧಿರಕ್ಷಕನಾಗಿರುವುದು.

(ಖ) ಸೆನೆಟ್, ಸಿಂಡಿಕೇಟ್, ವಿದ್ಯಾ ವಿಷಯಕ ಪರಿಷತ್ತು, ವ್ಯಾಸಂಗ ವಿಭಾಗಗಳು, ಅಧ್ಯಯನ ಮಂಡಲಿಗಳು ಮತ್ತು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ನೇಮಕ ಮಾಡಿದ ಯಾವುದೇ ಸಮಿತಿಯು ಸಭೆಗಳನ್ನು ಕರೆಯುವ ಎಲ್ಲ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಸಭೆಗಳ ನಡವಳಿಕೆಗಳನ್ನು ಇಡುವುದು ;

(ಗ) ಅವನು ಕಾರ್ಯದರ್ಶಿಯಾಗಿರುವ ಪ್ರಾಧಿಕಾರಗಳ ಅಧಿಕೃತ ಪತ್ರ ವ್ಯವಹಾರವನ್ನು ನಡೆಸುವುದು :

(ಘ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಸಾಮಾನ್ಯವಾಗಿ ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಕೆಯನ್ನು ಕುಲಾಧಿಪತಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಒದಗಿಸುವುದು —

—ಕುಲಸಚಿವನ ಕರ್ತವ್ಯವಾಗಿರತಕ್ಕದ್ದು.

(೪) ಅವನು, ಪರಿನಿಯಮಗಳು, ಅಧ್ಯಾದೇಶಗಳು ಅಥವಾ ವಿನಿಯಮಗಳು ನಿಯಮಿಸಬಹುದಾದಂಥ ಅಥವಾ ಕುಲಪತಿಯು ಕಾಲ ಕಾಲಕ್ಕೆ ಅಗತ್ಯಪಡಿಸುವಂಥ ಇತರ

ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರ ವೇರಿಸತಕ್ಕದು.

(೫) ಅವನ ಕರ್ತವ್ಯಗಳಲ್ಲಿ ಒಬ್ಬ ಅಥವಾ ಹೆಚ್ಚಿನ ಉಪಕುಲಸಚಿವರು ಅವನಿಗೆ ಸಹಾಯ ಮಾಡಬಹುದು.

೧೫. ಪರೀಕ್ಷೆಗಳ ನಿಯಂತ್ರಕ :—(೧) ಕುಲಾಧಿಪತಿಯು, ಕುಲಪತಿಯೊಡನೆ ಮತ್ತು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ನೇಮಕ ಮಾಡಿದ ಪರೀಕ್ಷೆಗಳ ನಿಯಂತ್ರಕನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಗಳಾಗಿರತಕ್ಕದು. ಅವನ ಸೇವಾ ಉಪಲಬ್ಧಿಗಳು ನಿಬಂಧನೆ ಮತ್ತು ಷರತ್ತುಗಳು ಅದೇ ರೀತಿಯಲ್ಲಿ ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದು.

(೨) ಅವನು ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಂಗಳ ಪ್ರಭಾರವನ್ನು ಹೊಂದಿರತಕ್ಕದು ಮತ್ತು ಪರಿನಿಯಮಗಳು ಅಥವಾ ಅಧ್ಯಾದೇಶಗಳು ನಿಯಮಿಸಬಹುದಾದಂಥ ಅಥವಾ ಕುಲಪತಿಯು ಅಗತ್ಯಪಡಿಸ ಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದು.

(೩) ಅವನ ಕರ್ತವ್ಯಗಳಲ್ಲಿ ಒಬ್ಬ ಅಥವಾ ಹೆಚ್ಚು ಉಪ ನಿಯಂತ್ರಕರು ಅವನಿಗೆ ಸಹಾಯ ಮಾಡಬಹುದು.

೧೬. ಹಣಕಾಸು ಅಧಿಕಾರಿ :—ಲೆಕ್ಕ ಪರಿಶೋಧನೆ, ಲೆಕ್ಕ ಮತ್ತು ಹಣಕಾಸಿನ ಆಡಳಿತದ ಅನುಭವವುಳ್ಳ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳ ಪೈಕಿ ಕುಲಾಧಿಪತಿಯು ನೇಮಕ ಮಾಡಿದ ಹಣಕಾಸಿನ ಅಧಿಕಾರಿ ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿ ಆಗಿರತಕ್ಕದು. ಅವನು ಕುಲಾಧಿಪತಿಯು ನಿರ್ಧರಿಸಬಹುದಾದಂಥ ಅವಧಿಯ ವರೆಗೆ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯಕ್ಕೆ ಪ್ರತಿ ನಿಯೋಜಿತನಾಗಿರತಕ್ಕದು.

(೨) ಅವನು ಹಣಕಾಸು ಸಮಿತಿಯ ನಿಯಂತ್ರಣಕ್ಕೆ ಒಳಪಟ್ಟಿದ್ದು ಪರಿನಿಯಮ ಗಳು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಪ್ರಕಾರ್ಯ ಗಳನ್ನು ನೆರವೇರಿಸತಕ್ಕದ್ದು.

೧೬. ಕ. 'ಕುಲಸಚಿವ', ಪರೀಕ್ಷೆಗಳ ನಿಯಂತ್ರಕ ಅಥವಾ ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು :—ಕುಲಸಚಿವ, ಪರೀಕ್ಷೆಗಳ ನಿಯಂತ್ರಕ ಅಥವಾ ಹಣಕಾಸು ಅಧಿಕಾರಿಯ ಮರಣ, ಅಮಾನತು ಅಥವಾ ತಾತ್ಕಾಲಿಕ ಗೈರು ಹಾಜರಿಯ ಸಂದರ್ಭದಲ್ಲಿ ಕುಲಾಧಿಪತಿಯು ಸಂದರ್ಭಾನುಸಾರ ಕುಲಸಚಿವ, ಪರೀಕ್ಷೆಗಳ ನಿಯಂತ್ರಕ ಅಥವಾ ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ವಿಶ್ವ ವಿದ್ಯಾನಿಲಯದ ಯಾರೇ ಇತರ ಅಧಿಕಾರಿಗಳಿಗೆ ಅಧಿಕಾರ ಕೊಡಬಹುದು.

೧೭. ಡೀನರು :—(೧) ಪ್ರಾಧ್ಯಾಪಕರಾಗಿರುವ, [illegible] ದ
ಪ್ರತಿಯೊಬ್ಬ ವ್ಯಕ್ತಿಯೂ ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ [illegible] ಗಳ ಅವಧಿಯವರೆಗೆ ವ್ಯಾಸಂಗ ವಿಭಾಗದ ಡೀನ್ ಆಗಿ ಕೆಲಸ ಮಾಡತಕ್ಕದ್ದು.

ಪರಂತು, ಯಾವುದೇ ವ್ಯಾಸಂಗ ವಿಭಾಗದಲ್ಲಿ ಯಾವನೇ ಪ್ರಾಧ್ಯಾಪಕನು ಇಲ್ಲದಿದ್ದರೆ ಅತಿ ಜ್ಯೇಷ್ಠ ರೀಡರು, ಡೀನ್ ಆಗಿ ಕೆಲಸ ಮಾಡತಕ್ಕದ್ದು ಮತ್ತು ಯಾವನೇ ರೀಡರು ಇಲ್ಲದಿದ್ದಲ್ಲಿ, ಕುಲಪತಿಯು ಹೆಸರಿಸಬಹುದಾದಂಥ ಅಧ್ಯಾಪಕರು ಡೀನ್ ಆಗಿ ಕೆಲಸ ಮಾಡತಕ್ಕದ್ದು.

ಮತ್ತೂ ಪರಂತು, ವ್ಯಾಸಂಗ ವಿಭಾಗದ ಡೀನ್ ಆಗಿ ಕೆಲಸ ಮಾಡಲು ಯಾವುದೇ ಅಧ್ಯಯನಗಳ ವಿಭಾಗದಲ್ಲಿ ಯಾವನೇ ವ್ಯಕ್ತಿಯು ದೊರೆಯದಿದ್ದಲ್ಲಿ ಅಥವಾ ಯಾವುದೇ ವ್ಯಾಸಂಗ ವಿಭಾಗಕ್ಕೆ ಅಧ್ಯಯನಗಳ ವಿಭಾಗವನ್ನು ವಿಶ್ವವಿದ್ಯಾನಿಲಯವು ಹೊಂದಿರದಿದ್ದಲ್ಲಿ, ಅಂಥ ಸಂಲಗ್ನಗೊಂಡ ಕಾಲೇಜಿನ ಅಧ್ಯಯನಗಳ ವಿಭಾಗದಲ್ಲಿನ, ಕುಲಪತಿಯು ನಾಮನಿರ್ದೇಶನ ಮಾಡಬಹುದಾದಂಥ ಪ್ರಾಧ್ಯಾಪಕ ಅಥವಾ ಅತಿ ಜ್ಯೇಷ್ಠ ರೀಡರು ಅಥವಾ ಅಧ್ಯಾಪಕನು, ವ್ಯಾಸಂಗ ವಿಭಾಗದ ಡೀನಾಗಿ ಕೆಲಸ ಮಾಡತಕ್ಕದ್ದು

(೨) ಪ್ರತಿಯೊಂದು ವ್ಯಾಸಂಗ ವಿಭಾಗದ ಡೀನನು, ಆ ವ್ಯಾಸಂಗ ವಿಭಾಗದ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕುದು ಮತ್ತು ಅದರ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(೩) ಡೀನನು ಪರಿನಿಯಮಗಳು ಮತ್ತು ಅಧ್ಯಾದೇಶಗಳು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

೧೮. ವಿದ್ಯಾರ್ಥಿ ಕಲ್ಯಾಣದ ಡೀನ್ :—(೧) ವಿದ್ಯಾರ್ಥಿ ಕಲ್ಯಾಣದ ಡೀನನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿ ಆಗಿರತಕ್ಕದ್ದು ಮತ್ತು ಸಿಂಡಿಕೇಟಿನ ಶಿಫಾರಸಿನ ಮೇಲೆ ಕುಲಪತಿಯಿಂದ ನೇಮಿತನಾಗತಕ್ಕದ್ದು.

(೨) ಅವನ ಪದಾವಧಿ ಮತ್ತು ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳ ಪರಿನಿಯಮಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(೩) ಅವನು, ಕುಲಾಧಿಪತಿಯು ಅವನ ಮೇಲೆ ಪ್ರದತ್ತ ಮಾಡಬಹುದಾದ ಅಥವಾ ವಿಧಿಸಬಹುದಾದಂಥ ಅಥವಾ ಪರಿನಿಯಮಗಳು, ಅಧ್ಯಾದೇಶಗಳು ಅಥವಾ ವಿನಿಯಮಗಳು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

೧೯. ಗ್ರಂಥಪಾಲ :—ಗ್ರಂಥಪಾಲನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿ ಆಗಿರತಕ್ಕದ್ದು ಮತ್ತು ೪೯ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇಲೆ, ಕುಲಾಧಿಪತಿಯಿಂದ ನೇಮಿತನಾಗತಕ್ಕದ್ದು. ಅವನು, ಪರಿನಿಯಮ

ಗಳು ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರತಕ್ಕದು ಮತ್ತು ಅವನು ಪರಿನಿಯಮಗಳು ಅಂಥ ಅಧಿಕಾರಗಳನ್ನು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದು. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆ ಮತ್ತು ಷರತ್ತುಗಳು, ಪರಿನಿಯಮಗಳು ನಿಯಮಿಸಬಹುದಾದಂತೆ ಇರತಕ್ಕದು.

## ಅಧ್ಯಾಯ—IV

### ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳು

೨೦. ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳು:—ಈ ಕೆಳಕಂಡ ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳಾಗಿರತಕ್ಕದು, ಎಂದರೆ,—

(ಕ) ಸೆನೆಟ್

(ಖ) ಸಿಂಡಿಕೇಟ್

(ಗ) ವಿದ್ಯಾವಿಷಯಕ ಪರಿಷತ್ತು

(ಘ) ಹಣಕಾಸು ಸಮಿತಿ

(ಙ) ಅಧ್ಯಯನಗಳ ಮಂಡಲಿ

(ಚ) ವ್ಯಾಸಂಗ ವಿಭಾಗಗಳು ಮತ್ತು

(ಛ) ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಇತರ ನಿಕಾಯಗಳು.

೨೧. ಸೆನೆಟ್:—ಸೆನೆಟ್ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದು.

(೧) ಕುಲಾಧಿಪತಿ

(೨) ಕುಲಪತಿ

(೩) ಎಲ್ಲ ವ್ಯಾಸಂಗ ವಿಭಾಗಗಳ ಡೀನರು

(೪) ಸಾರ್ವಜನಿಕ ಶಿಕ್ಷಣ ಕಮಿಷನರ್

(೫) ಕರ್ನಾಟಕ ಕಾಲೇಜು ಶಿಕ್ಷಣ ನಿರ್ದೇಶಕರು

(೬) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕರು

(೭) ಕರ್ನಾಟಕ ಪದವಿಪೂರ್ವ ಶಿಕ್ಷಣ ನಿರ್ದೇಶಕ

(೮) ಕರ್ನಾಟಕ ಯುವಜನ ಸೇವಾ ನಿರ್ದೇಶಕ

(೯) ಕರ್ನಾಟಕ ತಾಂತ್ರಿಕ ಶಿಕ್ಷಣ ನಿರ್ದೇಶಕ

(೧೦) ಕರ್ನಾಟಕ ಸಮಾಜ ಕಲ್ಯಾಣ ನಿರ್ದೇಶಕ

(೧೧) ಗ್ರಂಥಪಾಲ

(೧೨) ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣದ ನಿರ್ದೇಶಕ

(೧೩) ವಿಶ್ವವಿದ್ಯಾನಿಲಯದ ಪತ್ರವ್ಯವಹಾರ ವ್ಯಾಸಂಗ ಕ್ರಮಾ [illegible] ವ್ಯಾಸಂಗ ಕ್ರಮದ ನಿರ್ದೇಶಕ.

(೧೪) ಕರ್ನಾಟಕ ವಿಧಾನಸಭೆಯ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಐವರು ಸದಸ್ಯರು.

(೧೫) ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಇಬ್ಬರು ಸದಸ್ಯರು.

(೧೬) ವಿದ್ಯಾರ್ಥಿ ಕಲ್ಯಾಣ ಡೀನ್.

(೧೭) ಸರದಿಯ ಮೇಲೆ ಒಂದು ವರ್ಷದ ಅವಧಿಗೆ ಕುಲಪತಿಯವರೊಡನೆ ಸಮಾಲೋಚನೆ ನಡೆಸಿ ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಹತ್ತು ಪ್ರಾಂಶುಪಾಲರು.

(೧೮) ಸ್ನಾತಕೋತ್ತರ ಇಲಾಖೆಯಲ್ಲಿನ ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ನಿರ್ದೇಶಕರನ್ನು ಹೊರತುಪಡಿಸಿದ ಅಧ್ಯಾಪಕರು ತಮ್ಮಲ್ಲಿಯೇ ಚುನಾಯಿಸಿದ ಐವರು ಪ್ರತಿನಿಧಿಗಳು.

(೧೯) ಪ್ರತಿಯೊಂದು ವ್ಯಾಸಂಗ ವಿಭಾಗದ ಸ್ನಾತಕೋತ್ತರ ಪದವಿ ವಿಭಾಗಗಳು, ಆಯಾಯ ವ್ಯಾಸಂಗ ವಿಭಾಗದ ಸ್ನಾತಕೋತ್ತರ ವಿಭಾಗಗಳಲ್ಲಿನ ಪ್ರಾಧ್ಯಾಪಕರು ಮತ್ತು ನಿರ್ದೇಶಕರು, ಚುನಾಯಿಸಿದ ಒಬ್ಬ ಪ್ರಾಧ್ಯಾಪಕ ಅಥವಾ ನಿರ್ದೇಶಕ.

(೨೦) ಕೆಳಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನೋಂದಾಯಿತ ಪದವೀಧರರು ಚುನಾಯಿಸಿದ ಏಳು ವ್ಯಕ್ತಿಗಳು.

(ಕ) ನೋಂದಾಯಿತ ಕಾನೂನು ಪದವೀಧರರು ತಮ್ಮೊಳಗೇ ಚುನಾಯಿಸಿದ ಒಬ್ಬ.

(ಖ) ನೋಂದಾಯಿತ ಇಂಜಿನಿಯರಿಂಗ್ ಪದವೀಧರರು ತಮ್ಮೊಳಗೇ ಚುನಾಯಿಸಿದ ಒಬ್ಬ.

(ಗ) ನೋಂದಾಯಿತ ವಾಣಿಜ್ಯ ಪದವೀಧರರು ತಮ್ಮೊಳಗೆ ಚುನಾಯಿಸಿದ ಒಬ್ಬ.

(ಘ) ನೋಂದಾಯಿತ ವೈದ್ಯಕೀಯ ಪದವೀಧರರು ತಮ್ಮೊಳಗೆ ಚುನಾಯಿಸಿದ ಒಬ್ಬ

(ಙ) (ಕ) ಯಿಂದ (ಘ) ಖಂಡಗಳವರೆಗೆ ನಿರ್ದಿಷ್ಟಪಡಿಸಲಾದ ನೋಂದಾಯಿತ ಪದವೀಧರರನ್ನು ಹೊರತುಪಡಿಸಿ, ಇತರರು ತಮ್ಮೊಳಗೇ ಚುನಾಯಿಸಿದ ನೋಂದಾಯಿತ ಪದವೀಧರರಲ್ಲಿ ಮೂವರು:

ಪರಂತು, ನೋಂದಾಯಿತ ಪದವೀಧರರ ಪೈಕಿ ಸದಸ್ಯರನ್ನು ಚುನಾಯಿಸುವ ಉದ್ದೇಶಕ್ಕಾಗಿ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ಒಂದಕ್ಕಿಂತ ಹೆಚ್ಚಿನ ಚುನಾವಣಾ ಕ್ಷೇತ್ರಗಳಲ್ಲಿ ಮತ ಕೊಡಲು ಹಕ್ಕುಳ್ಳ ವ್ಯಕ್ತಿಯು, ಪರಿನಿಯಮಗಳ ಮೂಲಕ ಗೊತ್ತುಪಡಿಬಹುದಾದಂಥ ದಿನಾಂಕಕ್ಕೆ ಮುಂಚೆ, ತಾನು ಅಭ್ಯರ್ಥಿಯಾಗಿ ನಿಲ್ಲುವ, ಅಥವಾ ಚುನಾ

...ಮತ ಕೊಡುವ, ಚುನಾವಣಾ ಕ್ಷೇತ್ರವನ್ನು ಆಯ್ಕೆ ಮಾಡತಕ್ಕದು ಮತ್ತು ...ದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ನಿಲ್ಲಲು ಅಥವಾ ಮತ ಕೊಡಲು ಹಕ್ಕುಳ್ಳವ ...ಗಿರತಕ್ಕದಲ್ಲ.

(೨೧) ನೋಂದಾಯಿತ ಪದವೀಧರರ ಚುನಾಯಿಸಿದ ಒಬ್ಬ ನೋಂದಾಯಿತ ಮಹಿಳಾ ಪದವೀಧರೆ.

(೨೨) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಐವರು ಚುನಾಯಿತ ಪ್ರತಿನಿಧಿಗಳು ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಇಬ್ಬರು ಮತ್ತು ಸ್ನಾತಕ-ಪೂರ್ವ ವಿದ್ಯಾರ್ಥಿಗಳಿಂದ ಮೂವರು ಒಂದು ವರ್ಷದ ಅವಧಿಗಾಗಿ, ಅಂಥ ಪ್ರತಿನಿಧಿಗಳು (ನೇರ ಅಥವಾ ಪರೋಕ್ಷವಾ) ಪರಿನಿಯಮಗಳು ನಿಯಮಿಸಬಹುದಾದಂಥ ಚುನಾವಣೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಚುನಾಯಿತರಾಗತಕ್ಕದು.

ಪರಂತು, ಯಾವನೇ ವಿದ್ಯಾರ್ಥಿಯು,—

(ಕ) ವಿಶ್ವವಿದ್ಯಾನಿಲಯದ ಹೆಸರಿನ ಪಟ್ಟಿಯಲ್ಲಿ ಅವನ ಹೆಸರು ಇದ್ದ ಹೊರತು ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜಿನ;

(ಖ) ವಿಶ ವಿದ್ಯಾನಿಲಯದಲ್ಲಿ ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜಿನಲ್ಲಿ; ವಿಶ್ವವಿದ್ಯಾನಿಲಯದ ಪದವಿಗೆ ಅಥವಾ ಸ್ನಾತಕೋತ್ತರ ಪದವಿಗೆ ಅಥವಾ ಸ್ನಾತಕೋತ್ತರ ಡಿಪ್ಲೋಮಾಗೆ, ವ್ಯಾಸಂಗ ಕ್ರಮವನ್ನು ಅವನು ಅನುಸರಿಸುತ್ತಿದ್ದ ಹೊರತು ;

(ಗ) ಅವನ ಮುಂಜಾನೆ ಕಾಲೇಜು ಅಥವಾ ಸಂಜೆ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದರೆ ಅಥವಾ ಬಾಹ್ಯ ಅಭ್ಯರ್ಥಿಯಾಗಿ ಅಥವಾ ಪತ್ರವ್ಯವಹಾರದ ಮೂಲಕ ವ್ಯಾಸಂಗ ಕ್ರಮದ ಪರೀಕ್ಷೆಯನ್ನು ತೆಗೆದುಕೊಳ್ಳುವುದರಲ್ಲಿದ್ದರೆ;

(ಘ) ಆರು ವರ್ಷಗಳಲ್ಲಿ ವ್ಯಾ ಸಂಗ ಕ್ರಮವನ್ನು ಮುಗಿಸದೇ, ಅವನು ವಿಫಲನಾಗಿದ್ದರೆ; ಚುನಾವಣೆಗೆ ಅರ್ಹನಾಗಿರತಕ್ಕದಲ್ಲ.

೩ (ಪರಂತು, ಗೊತ್ತುಪಡಿಸಲಾದ ದಿನಾಂಕದ ತರುವಾಯ ಮೊದಲ ಬಾರಿಗೆ ರಚಿತವಾಗಬೇಕಾದ ಸೆನೆಟಿನಲ್ಲಿ, ವಿದ್ಯಾರ್ಥಿಗಳ ಐವರು ಪ್ರತಿನಿಧಿಗಳನ್ನು ಪ್ರತಿಸಲ ಒಂದು ವರ್ಷದ ಅವಧಿಗೆ ಕುಲಾಧಿಪತಿಯು ಕುಲಪತಿಯವರೊಡನೆ ಸಮಾಲೋಚಿಸಿ ನಡೆಸಿ ನಾಮನಿರ್ದೇಶನ ಮಾಡತಕ್ಕದು.

೪ (ಮತ್ತು ಅಲ್ಲದೆ. ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಚುನಾಯಿಸಿದಾಗ ಈ ಹಿಂದಿನ ಪರಂತುಕದ ಮೇರೆಗೆ ನಾಮನಿರ್ದೇಶಿತರಾದ ವಿದ್ಯಾರ್ಥಿಗಳ ಪದಾವಧಿಯು, ಕೊನೆಗೊಳ್ಳತಕ್ಕದು;)

[illegible] [illegible], ಕಲೆ, ಸಹಕಾರ ಮತ್ತು ಸಮಾಜ [illegible]
[illegible] ಕುಲಪತಿಯೊಡನೆ ಸಮಾಲೋಚಿಸಿ ಕುಲಾಧಿಪತಿಯು
[illegible] ವ್ಯಕ್ತಿಗಳು, ಅವರಲ್ಲಿ,—

(i) ಅನುಸೂಚಿತ ಜಾತಿಗಳಿಗೆ ಸೇರಿದವರು ಐವರು ಇರತಕ್ಕದ್ದು ;

(ii) ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವನು ಒಬ್ಬನಿರತಕ್ಕದ್ದು

(iii) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರೆಂದು ಘೋಷಿಸಿದ ಯಾವುದೇ ವರ್ಗಕ್ಕೆ ಸೇರಿದ ಐವರು ಅವರಲ್ಲಿ [illegible] ಒಬ್ಬ ಮಹಿಳೆಯಾಗಿರಬೇಕು ;

(iv) ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಇಬ್ಬರು ವ್ಯಕ್ತಿಗಳು ಇರತಕ್ಕದ್ದು ;

(v) ಕರ್ನಾಟಕ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘದಿಂದ, ಶಿಫಾರಸು ಮಾಡಿದ ಐದು ಜನರ ಪಟ್ಟಿಯಿಂದ ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ ಇರತಕ್ಕದ್ದು ;

(vi) ವ್ಯಾಪಾರ ಮತ್ತು ವಾಣಿಜ್ಯಗಳನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ ಇರತಕ್ಕದ್ದು.

(೨೪) (೧) ವೈದ್ಯಕೀಯ ಶಿಕ್ಷಣದ ನಿರ್ದೇಶಕ.

(೨) ವಿಶ್ವವಿದ್ಯಾನಿಲಯದ ಅಥವಾ ಸಂಲಗ್ನಗೊಂಡ ಕಾಲೇಜಿನ, ಬೋಧಕೇತರ ಯಾವನೇ ನಿಯೋಜಿತನು ಸೆನೆಟಿಗೆ ಚುನಾಯಿತನಾಗಲು ಅಥವಾ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದಲ್ಲ.

(೩) ಪರೀಕ್ಷೆಗಳ ನಿಯಂತ್ರಕ ಮತ್ತು ಹಣಕಾಸು ಅಧಿಕಾರಿಗಳು ಸೆನೆಟಿನ ಎಲ್ಲ ಸಭೆಗಳಿಗೆ ಖಾಯಂ ಆಹ್ವಾನಿತರಾಗಿರತಕ್ಕದ್ದು.

೨೨. ಸೆನೆಟಿನ ಸಭೆಗಳು :—(೧) ಸೆನೆಟಿನ ಸಭೆಯನ್ನು ಕುಲಪತಿಯು ಗೊತ್ತು ಮಾಡಬಹುದಾದ ದಿನಾಂಕಗಳಂದು, ಪ್ರತಿ ವರ್ಷ ಕನಿಷ್ಠ ಪಕ್ಷ ಎರಡು ಸಲ ನಡಸತಕ್ಕದ್ದು. ಅಂಥ ಸಭೆಗಳಲ್ಲಿ ಒಂದು ವಾರ್ಷಿಕ ಸಭೆಯಾಗಿರತಕ್ಕದ್ದು.

(೨) ವಾರ್ಷಿಕ ಸಭೆಯಲ್ಲಿ ಸಿಂಡಿಕೇಟು ಹಿಂದಿನ ವರ್ಷದ ವಿಶ್ವವಿದ್ಯಾನಿಲಯದ ಕಾರ್ಯ ನಿರ್ವಹಣೆ ವರದಿಯನ್ನು ಜಮೆಗಳ ಮತ್ತು ವೆಚ್ಚಗಳ ವಿವರಣೆಗಳು. ಹಣಕಾಸಿನ ಅಂದಾಜುಗಳನ್ನು ಮತ್ತು ಕೊನೆಯ ಲೆಕ್ಕ ಪರಿಶೋಧನೆಯ ವರದಿಯೊಡನೆ ಮಂಡಿಸತಕ್ಕದ್ದು.

(೩) ಕುಲಪತಿಯವರು ತಾನು ಸೂಕ್ತವೆಂದು ಭಾವಿಸುವಾಗಲೆಲ್ಲಾ, ಸೆನೆಟಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸೆನೆಟಿನ ಇಪ್ಪತ್ತೈದು ಸದಸ್ಯರಿಗೆ ಕಡಿಮೆ ಇಲ್ಲದ,

ಸದಸ್ಯರು ಠರಾವು ಮಾಡಿ ಬರಹದಲ್ಲಿ ಕಡ್ಡಾಯವಾಗಿ ಕೋರಿದಾಗ ಅದರ ವಿಶೇಷ ಸಭೆಯನ್ನು ಕರೆಯತಕ್ಕದ್ದು.

೨೩. <u>ಸೆನೆಟ್ಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು :</u>—(೧) ಸೆನೆಟು ವಿಶ್ವವಿದ್ಯಾನಿಲಯದ ಧೋರಣೆಗಳನ್ನು ಕಾಲಕಾಲಕ್ಕೆ ಪುನರಾವಲೋಕನ ಮಾಡಲು ಮತ್ತು ವಿಶ್ವವಿದ್ಯಾನಿಲಯದ ಮೇಲ್ಪಾಟು ಮತ್ತು ಅಭಿವೃದ್ಧಿಗಾಗಿ ಕ್ರಮಗಳನ್ನು ಸೂಚಿಸಲು, ಮತ್ತು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಲೆಕ್ಕಪರಿಶೋಧನೆಯ ವರದಿಗಳನ್ನು ಪರಿಗಣಿಸಲು ಅಧಿಕಾರ ಹೊಂದಿರತಕ್ಕದ್ದು.

(೨) ಈ ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧೆ ಬಾರದಂತೆ, ಸೆನೆಟ್ಟು ಈ ಕೆಳಗೆ ಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು,—

(ಕ) ಸಂಶೋಧನೆಗಾಗಿ ಮತ್ತು ಜ್ಞಾನದ ಅಭಿವೃದ್ಧಿ ಮತ್ತು ಪ್ರಸಾರಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಾಸಂಗದ ಶಾಲೆಗಳಲ್ಲಿ ಮತ್ತು ಅಧ್ಯಯನದ ಕ್ರಮಗಳಲ್ಲಿ ಶಿಕ್ಷಣ ಬೋಧನೆ ಮತ್ತು ತರಬೇತಿಯನ್ನು ಒದಗಿಸುವುದು ;

(ಖ) ಸಂಲಗ್ನಗೊಂಡ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳು, ಅಧ್ಯಯನಗಳ ತಜ್ಞತೆಯನ್ನು ಕೈಕೊಳ್ಳಲು ಸಾಧ್ಯಗೊಳಿಸುವಂತೆ ಅವಕಾಶ ಮಾಡಿ ಕೊಡುವುದು ;

(ಗ) ಸಂಶೋಧನೆ ಮತ್ತು ತಜ್ಞತಾ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು ;

(ಘ) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ಪ್ರಾಧ್ಯಾಪಕರು, ರೀಡರು, ಉಪನ್ಯಾಸಕರ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಸ್ಥಾಪಿಸಲು ಕುಲಾಧಿಪತಿಗೆ, ರಾಜ್ಯ ಸರ್ಕಾರದ ಮೂಲಕ, ಶಿಫಾರಸು ಮಾಡುವುದು;

(ಙ) ಅಧಿಸದಸ್ಯತ್ವಗಳು, ಸಂಚಾರಿ ಅಧಿಸದಸ್ಯತ್ವಗಳು, ವಿದ್ಯಾರ್ಥಿ ವೇತನಗಳು, ಪ್ರದರ್ಶನಗಳು, ಪದಕಗಳು, ಪಾರಿತೋಷಕಗಳನ್ನು ಸ್ಥಾಪಿಸುವುದು ;

(ಚ) ಪದವಿಗಳು, ಬಿರುದುಗಳು, ಡಿಪ್ಲೊಮೊಗಳು ಮತ್ತು ಇತರ ವಿದ್ಯಾ ವಿಷಯಕ ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಪ್ರದಾನ ಮಾಡುವುದು ;

(ಛ) ಸಿಂಡಿಕೇಟಿನ ಶಿಫಾರಸಿನ ಮೇಲೆ ಗೌರವ ಪದವಿಗಳು, ಬಿರುದುಗಳು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ;

(ಜ) ಪರಿನಿಯಮಗಳನ್ನು ರಚಿಸುವುದು, ತಿದ್ದುಪಡಿ ಮಾಡುವುದು, ಅಥವಾ ನಿರಸನಗೊಳಿಸುವುದು ;

(ಝ) ಸಿಂಡಿಕೇಟು ತಯಾರಿಸಿದ ವಾರ್ಷಿಕ ಹಣಕಾಸು ಅಂದಾಜುಗಳನ್ನು ಪರ್ಯಾಲೋಚಿಸುವುದು ;

(ಞ) ಈ ಅಧಿನಿಯಮದಲ್ಲಿ ಅಥವಾ ಪರಿನಿಯಮಗಳಲ್ಲಿ ... ಅಂಥ ಪ್ರಾಧಿಕಾರಗಳಿಗೆ ಸದಸ್ಯರನ್ನು ಚುನಾಯಿಸುವುದು ;

(ಟ) ಸಿಂಡಿಕೇಟಿನ ಶಿಫಾರಸಿನ ಮೇಲೆ ಪ್ರೊಫೆಸರ್ ಇಮೆರಿಟಸ್ (... ಮಹೋಪಾಧ್ಯಾಯ) ಬಿರುದನ್ನು ಪ್ರದಾನ ಮಾಡುವುದು ;

(ಠ) ಈ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು ಮತ್ತು ... ಮಗಳಿಂದ ಅದರ ಮೇಲೆ ಪ್ರದತ್ತವಾದ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು.

ಪರಂತು, (ಕ) ಯಿಂದ (ಛ) ವರೆಗಿನ ಖಂಡಗಳಲ್ಲಿನ ಅಧಿಕಾರಗಳನ್ನು ಸಿಂಡಿಕೇಟು ಮತ್ತು ವಿದ್ಯಾ ವಿಷಯಕ ಪರಿಷತ್ತು ಮಾಡಿದ ಶಿಫಾರಸ್ಸಿನ ಮೇರೆಗೆ ಹೊರತು ಚಲಾಯಿಸ ತಕ್ಕುದಲ್ಲ.

೨೪. ಸಿಂಡಿಕೇಟ್:—ಸಿಂಡಿಕೇಟು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ,—

(i) ಕುಲಪತಿ ;

(ii) ಕರ್ನಾಟಕ ಕಾಲೇಜು ಶಿಕ್ಷಣ ನಿರ್ದೇಶಕ;

(iii) ಕರ್ನಾಟಕ ತಾಂತ್ರಿಕ ಶಿಕ್ಷಣ ನಿರ್ದೇಶಕ;

(iv) ಕಾಲೇಜುಗಳ ಪ್ರಿನ್ಸಿಪಾಲರುಗಳು ಆಗಿಲ್ಲದವರಲ್ಲಿ, ಕುಲಾಧಿಪತಿಯು ಜ್ಯೇಷ್ಠತೆಗನುಸಾರವಾಗಿ ಸರದಿ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡುವ ಒಬ್ಬ ಡೀನ್ ;

(v) ಕನಿಷ್ಠ ಪಕ್ಷ ಮಹಿಳಾ ಕಾಲೇಜಿನ ಒಬ್ಬ ಪ್ರಾಂಶುಪಾಲರನ್ನು ಒಳಗೊಂಡು ಕುಲಾಧಿಪತಿಯು ಜ್ಯೇಷ್ಠತೆಗನುಸಾರವಾಗಿ ಸರದಿ ಮೇಲೆ ಒಂದು ವರ್ಷದ ಅವಧಿಗೆ ನಾಮ ನಿರ್ದೇಶನ ಮಾಡುವ ಮೂರು ಕಾಲೇಜುಗಳ ಪ್ರಿನ್ಸಿಪಾಲರುಗಳು ;

(vi) ಸೆನೆಟು, ತನ್ನ ಸದಸ್ಯರಲ್ಲಿ ವಿಶ್ವವಿದ್ಯಾನಿಲಯದ ಅಥವಾ ಸಂಲಗ್ನಗೊಂಡ ಕಾಲೇಜಿನ ನಿಯೋಜಿತನಲ್ಲದ ಅಥವಾ ವಿದ್ಯಾರ್ಥಿಗಳ ಪ್ರತಿನಿಧಿ ಚುನಾಯಿಸಿದ ಮೂರು ವ್ಯಕ್ತಿಗಳು ;

(vii) ಕುಲಾಧಿಪತಿಯು ಜ್ಯೇಷ್ಠತೆಗನುಸಾರವಾಗಿ ಸರದಿ ಮೇಲೆ ಒಂದು ವರ್ಷದ ಅವಧಿಗೆ ನಾಮ ನಿರ್ದೇಶನ ಮಾಡಿದ ಸ್ನಾತಕೋತ್ತರ ಅಧ್ಯಯನದ ಒಬ್ಬ ಪ್ರಾಧ್ಯಾಪಕ ;

(viii) ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಮೂರು ವ್ಯಕ್ತಿಗಳು ಅವರ ಪೈಕಿ, ಒಬ್ಬ ಅನುಸೂಚಿತ ಜಾತಿಗಳಿಗೆ ಸೇರಿದವನಾಗಿರತಕ್ಕದ್ದು. ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಾಗರೀಕರಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ

ವರ್ಗಗಳಿಂದು ನಿರ್ದಿಷ್ಟಪಡಿಸಬಹುದಾದಂತ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿಯಾಗಿರತಕ್ಕದು.

(ix) ವಿದ್ಯಾ ವಿಷಯಕ ಪರಿಷತ್ತಿನ, ಸದಸ್ಯರು ಚುನಾಯಿಸಿದ ಅದರ ಒಬ್ಬ ಸದಸ್ಯ

(x) ವೈದ್ಯಕೀಯ ಶಿಕ್ಷಣದ ನಿರ್ದೇಶಕ ;

(xi) ಸಾರ್ವಜನಿಕ ಶಿಕ್ಷಣ ಕಮಿಷನರು.

ವಿವರಣೆ :—(IV), (V) ಮತ್ತು (VII)ನೇ ಖಂಡಗಳ ಉದ್ದೇಶಗಳಿಗಾಗಿ ಸಂದರ್ಭಾನುಸಾರ, ಡೀನರ್ ಪ್ರಾಂಶುಪಾಲ ಮತ್ತು ಪ್ರಾಧ್ಯಾಪಕರ ಜ್ಯೇಷ್ಠತೆಯನ್ನು ಸಂದರ್ಭಾನುಸಾರ ಡೀನ್ ಅಥವಾ ಪ್ರಾಂಶುಪಾಲ ಅಥವಾ ಪ್ರಾಧ್ಯಾಪಕನಾಗಿದ್ದ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸತಕ್ಕದು ;

೨೫. ಸಿಂಡಿಕೇಟಿನ ಅಧಿಕಾರಗಳು :—(೧) ಸೆನೆಟಿನ ಸಾಮಾನ್ಯ ನಿರ್ದೇಶನಗಳಿಗೆ ಒಳಪಟ್ಟು ಸಿಂಡಿಕೇಟು ವಿಶ್ವವಿದ್ಯಾನಿಲಯದ ರಾಜಸ್ವಗಳ ಮತ್ತು ಸ್ವತ್ತುಗಳ ನಿರ್ವಹಣೆ ಹಾಗೂ ಆಡಳಿತದ ಅಧಿಕಾರವನ್ನು ; ಮತ್ತು ವಿಶ್ವವಿದ್ಯಾಲಯದ ಎಲ್ಲಾ ಆಡಳಿತ ವ್ಯವಹಾರಗಳ ನಿಯಂತ್ರಣವನ್ನು ಹೊಂದಿರತಕ್ಕದು.

(೨) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಸಿಂಡಿಕೇಟ್ ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದು. ಎಂದರೆ,—

(ಕ) ವಿಶ್ವವಿದ್ಯಾನಿಲಯದ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ವಿನಿಯಮಿಸುವುದು ಮತ್ತು ಆ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ಏಜೆಂಟರನ್ನು ನೇಮಕ ಮಾಡುವುದು ;

(ಖ) ವಿಶ್ವವಿದ್ಯಾನಿಲಯದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವುದು, ವ್ಯತ್ಯಸ್ತಗೊಳಿಸುವುದು, ಕಾರ್ಯಗತಗೊಳಿಸುವುದು ಮತ್ತು ರದ್ದುಗೊಳಿಸುವುದು.

(ಗ) ೩೧ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕ ಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದು ಹಾಕುವುದು ಹಾಗೂ, ಅವರ ಫೀಜುಗಳು ಉಪಲಬ್ಧಿಗಳು, ಮತ್ತು ಪ್ರವಾಸ ಮತ್ತು ಇತರ ಭತ್ಯಗಳನ್ನು ಸಹ ನಿಗದಿಪಡಿಸುವುದು

(ಘ) ನಿಯಮಿಸಲಾದ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು.

(ಙ) ವಿಶ್ವವಿದ್ಯಾನಿಲಯದ, ಚರ ಮತ್ತು ಸ್ಥಿರ ಸ್ವತ್ತುಗಳನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು ಹಾಗೂ ವಿಶ್ವವಿದ್ಯಾನಿಲಯದ ನಿಧಿಗಳನ್ನು ತೊಡಗಿಸುವುದು.

(iii) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಇಡುವಂತೆ ಮಾಡುವುದು ;

(ಛ) (i) ಪಾಠ ಮತ್ತು ಸಂಶೋಧನೆ ;

(ii) ಪರೀಕ್ಷೆಗಳು ಮತ್ತು ಪದವಿ ಪ್ರದಾನಗಳಿಗೆ ಪ್ರವೇಶ ;

(iii) ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದಂಥ ಇತರ ಸೇವೆಗಳು ;

(iv) ಕಾಲೇಜುಗಳ ಸಂಲಗ್ನತೆ ಮತ್ತು ಪರಿಶೀಲನೆ ಮತ್ತು ಪದವೀಧರರ ನೋಂದಣಿ ; ಮತ್ತು

(v) ಪರಿನಿಯಮಗಳ ಮೂಲಕ ನಿಗದಿಪಡಿಸಬಹುದಾದಂಥ ಇತರ ಉದ್ದೇಶಗಳು, ಇವುಗಳಿಗಾಗಿ ಫೀಜುಗಳನ್ನು ನಿಯಮಿಸುವುದು, ವಿಧಿಸುವುದು ಮತ್ತು ವಸೂಲಿ ಮಾಡುವುದು.

(ಜ) ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು ಮತ್ತು ಅದನ್ನು ಸೆನೆಟ್‌ಗೆ ಒಪ್ಪಿಸುವುದು;

(ಝ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ;

(ಞ) ಕಾಲೇಜುಗಳನ್ನು ಸಂಲಗ್ನಗೊಂಡ ಕಾಲೇಜುಗಳಾಗಿ ಅಂಗೀಕರಿಸುವುದಕ್ಕೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಮಾಡುವುದು;

(ಟ) ವಿಶ್ವವಿದ್ಯಾನಿಲಯಗಳು ಆಡಳಿತದಲ್ಲಿ ಇಲ್ಲದಿರುವ ವಿದ್ಯಾರ್ಥಿನಿಲಯಗಳನ್ನು ಮನ್ನಣೆ ಮಾಡುವುದು ಮತ್ತು ಅಂಥ ಮನ್ನಣೆಯನ್ನು ಅಮಾನತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;

(ಠ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಸ್ಥಾನ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಅವರ ಆರೋಗ್ಯ ಮತ್ತು ಯೋಗ ಕ್ಷೇಮವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;

(ಡ) ಉದ್ಯೋಗ ವಿಭಾಗ ಮತ್ತು ವಾರ್ತಾ ವಿಭಾಗವನ್ನು ರಚಿಸುವುದು. ಅವುಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮತ್ತು ನಿಯಂತ್ರಣ;

(ಢ) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಅವರ ಪ್ರಕಾರ್ಯಗಳನ್ನು ಕುಲಪತಿಗೆ ಪ್ರತ್ಯಾಯೋಜಿಸುವುದು ;

(ಣ) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು, ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧಿಸುವುದು ;

(ತ) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು.

(ಥ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದರ ಮೇಲೆ ಪ್ರದತ್ತ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು ಅಥವಾ ವಿಧಿಸಬಹುದಾದ ಇತರ ಕರ್ತವ್ಯಗಳನ್ನು ನೆರವೇರಿಸಬಹುದು.

೨೬. ವಿದ್ಯಾ ವಿಷಯಕ ಪರಿಷತ್ತು—ವಿದ್ಯಾವಿಷಯಕ ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದು. ಎಂದರೆ.—

(i) ಕುಲಪತಿ;

(ii) ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಸಿಂಡಿಕೇಟಿನ ಮೂವರು ಸದಸ್ಯರು;

(iii) ಸೆನೆಟಿನ ಸದಸ್ಯರು ಚುನಾಯಿಸಿದ ಅದರ ಒಬ್ಬ ಸದಸ್ಯ ;

(iv) ವ್ಯಾಸಂಗ ವಿಭಾಗಗಳ ಡೀನರು;

(v) ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪ್ರಾಧ್ಯಾಪಕರು;

ಅಂಥ ಯಾವನೇ ಪ್ರಾಧ್ಯಾಪಕನು ಲಭ್ಯವಾಗದಿದ್ದಲ್ಲಿ, ಆಗ ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥನು ಸದಸ್ಯನಾಗಿರತಕ್ಕದು.

(vi) ಒಂದು ವರ್ಷದ ಅವಧಿಗೆ, ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಕುಲಪತಿಯು ನಾಮನಿರ್ದೇಶನ ಮಾಡಿದ ಶೇಕಡಾ ಇಪ್ಪತ್ತೈದರಷ್ಟು.

(vii) ವ್ಯಾಸಂಗ ವಿಭಾಗಗಳ ಡೀನರು ಅಥವಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಅಥವಾ ಕಾಲೇಜುಗಳ ಪ್ರಾಂಶುಪಾಲರು ಆಗಿರದ ಅಧ್ಯಾಪಕರಿಂದ ಚುನಾಯಿತರಾದ ಎಂಟು ಉಪನ್ಯಾಸಕರು ಮತ್ತು ಇಬ ರು ರೀಡರುಗಳು;

(viii) ಸುಪ್ರಸಿದ್ಧ ಶಿಕ್ಷಣ ತಜ್ಞರಲ್ಲಿ ಕುಲಾಧಿಪತಿಯು ನಾಮ ನಿರ್ದೇಶನ ಮಾಡಿದ ಆರು ವ್ಯಕ್ತಿಗಳು. ಅವರಲ್ಲಿ ಇಬ್ಬರಿಗೆ ಕಡಿಮೆಯಿಲ್ಲದಂತೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಾಗಿರತಕ್ಕದು ಮತ್ತು ಇಬ್ಬರಿಗೆ ಕಡಿಮೆಯಿಲ್ಲದಂತೆ. ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಾಗರಿಕರಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳೆಂದು ನಿರ್ದಿಷ್ಟಪಡಿಸಿದ ವರ್ಗಗಳಿಗೆ ಸೇರಿದವರಾಗಿರತಕ್ಕದು.

(ix) ಸಾರ್ವಜನಿಕ ಶಿಕ್ಷಣ ಕಮಿಷನರ್.

(x) ಕರ್ನಾಟಕ ಕಾಲೇಜು ಶಿಕ್ಷಣ ನಿರ್ದೇಶಕ.

(x) ವಯಸ್ಕರ ಶಿಕ್ಷಣ ಪರಿಷತ್ತಿನ ಅಧ್ಯಕ್ಷ.

(xii) ವಿಶ್ವವಿದ್ಯಾನಿಲಯದಲ್ಲಿ ದೈಹಿಕ ಶಿಕ್ಷಣದ ನಿರ್ದೇಶಕ.

(xiii) ಕರ್ನಾಟಕ ತಾಂತ್ರಿಕ ಶಿಕ್ಷಣ ನಿರ್ದೇಶಕ.

(xiv) ಪರೀಕ್ಷಾ ನಿಯಂತ್ರಕ.

(xv) ವೈದ್ಯಕೀಯ ಶಿಕ್ಷಣ ನಿರ್ದೇಶಕ.

೩೨. <u>ವಿದ್ಯಾ ವಿಷಯಕ ಪರಿಷತ್ತಿನ ಅಧಿಕಾರಗಳು</u> :—(೧) ವಿದ್ಯಾ ವಿಷಯಕ ಪರಿಷತ್ತು ವಿಶ್ವವಿದ್ಯಾನಿಲಯದ ವಿದ್ಯಾ ವಿಷಯಕ ನಿಕಾಯವಾಗಿರತಕ್ಕದು ಮತ್ತು ಈ ಅಧಿನಿಯಮದ, ಪರಿನಿಯಮಗಳ ಅಧ್ಯಾದೇಶಗಳ ಉಪಬಂಧಗಳಿಗೊಳಪಟ್ಟು, ವಿಶ್ವ ವಿದ್ಯಾನಿಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ, ನಿಯಂತ್ರಣ ಹಾಗೂ ಸಾಮಾನ್ಯ ವಿನಿಯಮವನ್ನು ಹೊಂದಿರತಕ್ಕದು. ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡಲು ಜವಾಬ್ದಾರಿಯಾಗಿರತಕ್ಕದು.

(೨) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ವಿಧಿಸಲಾಗುವಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸತಕ್ಕದು ಎಂದರೆ,—

(ಕ) ವಿದ್ಯಾವಿಷಯಕ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಾದೇಶಗಳಿಗಾಗಿ ಪ್ರಸ್ತಾವನೆಗಳನ್ನು ಮಾಡುವುದು.

(ಖ) ಅಧ್ಯಾದೇಶಗಳಲ್ಲಿ ಒಳಗೊಂಡಿರದಷ್ಟರ ಮಟ್ಟಿಗೆ ಅಧ್ಯಯನ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು ;

(ಗ) ಪರೀಕ್ಷೆಗಳ ಪರಿಯೋಜನೆಗಳಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳು, ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು, ಅಥವಾ ಇತರ ವಿದ್ಯಾ ವಿಷಯಕ ಪ್ರಶಸ್ತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದೋ, ಅಂಥ ಷರತ್ತುಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(ಘ) ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು.

(ಙ) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(ಚ) ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ವೃದ್ಧಿಪಡಿಸುವುದಕ್ಕಾಗಿ ಅಥವಾ ಇತರ ವಿಶೇಷ ಅಧ್ಯಯನಗಳನ್ನು ವೃದ್ಧಿಪಡಿಸುವುದಕ್ಕಾಗಿ ಪರಿಯೋಜನೆಗಳನ್ನು ರೂಪಿಸುವುದು;

(ಛ) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಲು, ಮತ್ತು ವ್ಯಾಸಂಗ ವಿಭಾಗಗಳಿಗೆ ಅವರ ಸ್ವಂತ ಸಂಖ್ಯೆಗಳನ್ನು ವಹಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು

(ಜ) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ಯಾವ ಷರತ್ತುಗಳಿಗೊಳಪಟ್ಟು ವಿನಾಯಿತಿಗಳನ್ನು ಕೊಡಬಹುದೋ, ಆ ಯಾವುದೇ ಷರತ್ತುಗಳನ್ನು ನಿಗದಿಪಡಿಸುವುದು;

(ಝ) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ರೀಡರುಗಳ, ಉಪನ್ಯಾಸಕರ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಞ) ಅಧಿ ಸದಸ್ಯತ್ವಗಳು ಸಂಚಾರಿ ಅಧಿ ಸದಸ್ಯತ್ವಗಳು ವಿದ್ಯಾರ್ಥಿವೇತನ, ಶಿಷ್ಯವೇತನಗಳು ಪ್ರದರ್ಶನಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅವುಗಳನ್ನು ಕೊಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು.

(ಟ) ಪರೀಕ್ಷೆಗಳ ಸಮಾನತೆಯನ್ನು ನಿಯಮಿಸಲು, ವಿನಿಯಮಗಳನ್ನು ರಚಿಸುವುದು

(ಠ) ಪದವಿಗಳು, ಡಿಪ್ಲೊಮೋಗಳು ಮತ್ತು ಇತರ ವಿದ್ಯಾ ವಿಷಯಕ ಪ್ರಶಸ್ತಿಗಳಿಗೆ. ಅರ್ಹತೆ ಪಡೆಯಲು, ವಿಶ್ವವಿದ್ಯಾನಿಲಯದಲ್ಲಿ ಅಥವಾ ಸಂಲಗ್ನಗೊಂಡ ಕಾಲೇಜುಗಳಲ್ಲಿ ನಡೆಯುವ ಅನುಮೋದಿತ ಅಧ್ಯಯನ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದಕ್ಕಾಗಿ ವಿನಿಯಮನಗಳನ್ನು ರಚಿಸುವುದು;

(ಡ) ಈ ಅಧಿನಿಯಮ ಪರಿನಿಯಮಗಳು, ಅಧ್ಯಾದೇಶಗಳು ಅಥವಾ ವಿನಿಯಮನಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಿಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು, ಮತ್ತು

(ಣ) ಸಾಮಾನ್ಯವಾಗಿ ವಿದ್ಯೆಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಸಲಹೆ ನೀಡುವುದು.

೨೮. ವ್ಯಾಸಂಗ ವಿಭಾಗಗಳು—ವಿಶ್ವವಿದ್ಯಾನಿಲಯವು, ಕಲೆಗಳು, ವಾಣಿಜ್ಯ, ಶಿಕ್ಷಣ ಇಂಜಿನಿಯರಿಂಗ್, ವೈದ್ಯಕೀಯ, ಕಾನೂನು, ವಿಜ್ಞಾನ ಮತ್ತು ತಾಂತ್ರಿಕ ಮತ್ತು ಕಾಲ ಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ವ್ಯಾಸಂಗ ವಿಭಾಗಗಳನ್ನು ಹೊಂದಿರತಕ್ಕದು.

(೨) (ಕ) ಪ್ರತಿಯೊಂದು ವ್ಯಾಸಂಗ ವಿಭಾಗವು, ಅಧ್ಯಾದೇಶಗಳ ಮೂಲಕ ಅದಕ್ಕೆ ವಹಿಸಿಕೊಡಬಹುದಾದಂಥ ಅಧ್ಯಯನ ವಿಭಾಗಗಳನ್ನು ಒಳಗೊಂಡಿರತಕ್ಕದು.

(ಖ) ಪರಿನಿಯಮಗಳಿಂದ ಅಲ್ಲದೆ ಯಾವುದೇ ಅಧ್ಯಯನ ವಿಭಾಗವನ್ನು ಸ್ಥಾಪಿಸತಕ್ಕದಲ್ಲ ಅಥವಾ ರದ್ದುಗೊಳಿಸತಕ್ಕದಲ್ಲ.

(ಗ) ಪ್ರತಿಯೊಂದು [illegible]

[illegible]. ಎಂದರೆ,

(i) ವಿಭಾಗದ ಅಧ್ಯಾಪಕರು;

(ii) ವಿಭಾಗದಲ್ಲಿ ಸಂಶೋಧನೆ ನಡೆಸುವ [illegible]

(iii) ವ್ಯಾಸಂಗ ವಿಭಾಗದ ಡೀನ್;

(iv) ಇಲಾಖೆಗೆ ಲಗತ್ತಾಗಿರುವ ಗೌರವ ಪ್ರಾಧ್ಯಾಪಕರು [illegible]

(v) ಅಧ್ಯಾದೇಶಗಳ ಉಪಬಂಧಗಳಿಗನುಸಾರವಾಗಿ, ವಿಭಾಗದ [illegible] ಇತರ ವ್ಯಕ್ತಿಗಳು;

(ಘ) ಪ್ರತಿಯೊಂದು ಅಧ್ಯಯನ ವಿಭಾಗವು ಪ್ರಾಧ್ಯಾಪಕನಾಗಿರುವ [illegible] ಮುಖ್ಯಸ್ಥರನ್ನು ಹೊಂದಿರತಕ್ಕದ್ದು ಅಥವಾ ಪ್ರಾಧ್ಯಾಪಕನು [illegible] ಮುಖ್ಯಸ್ಥನನ್ನಾಗಿ ಹೊಂದಿರತಕ್ಕದ್ದು ಮತ್ತು ಅವನ ಕರ್ತವ್ಯಗಳು ಮತ್ತು [illegible] ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥವುಗಳು ಆಗಿರತಕ್ಕದ್ದು:

ಪರಂತು, ಯಾವುದೇ ವಿಭಾಗದಲ್ಲಿ ಒಬ್ಬನಿಗಿಂತ ಹೆಚ್ಚು ಪ್ರಾಧ್ಯಾಪಕರು [illegible] ಸಂದರ್ಭಾನುಸಾರ ರೀಡರುಗಳು ಇದ್ದರೆ, ಅಧ್ಯಾದೇಶಗಳ ಮೂಲಕ, ಈ ಬಗ್ಗೆ [illegible] ಉಪಬಂಧಗಳಿಗನುಸಾರವಾಗಿ ಅಲ್ಲದೆ, ಯಾವುದೇ ವ್ಯಕ್ತಿಯನ್ನು ವಿಭಾಗದ ಮುಖ್ಯಸ್ಥನನ್ನಾಗಿ ನೇಮಕ ಮಾಡತಕ್ಕದಲ್ಲ.

ಮತ್ತೂ ಪರಂತು ವಿಭಾಗದಲ್ಲಿ ಯಾವನೇ ಪ್ರಾಧ್ಯಾಪಕನು ಅಥವಾ ರೀಡರ್ ಇಲ್ಲದಿದ್ದಲ್ಲಿ ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನರು ಆ ವಿಭಾಗದ ಮುಖ್ಯಸ್ಥನಾಗಿರತಕ್ಕದ್ದು.

(ಙ) ಪ್ರತಿಯೊಂದು ವ್ಯಾಸಂಗ ವಿಭಾಗವು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು. ಎಂದರೆ,

(i) ವ್ಯಾಸಂಗ ವಿಭಾಗದ ಡೀನ್;

(ii) ವ್ಯಾಸಂಗ ವಿಭಾಗದಲ್ಲಿನ ಅಧ್ಯಯನ ವಿಭಾಗಗಳ ಮುಖ್ಯಸ್ಥರು;

(iii) ವ್ಯಾಸಂಗ ವಿಭಾಗದಲ್ಲಿನ ಪ್ರತಿಯೊಂದು ವಿಭಾಗದ ವ್ಯಾಸಂಗ ವಿಭಾಗದ ಪ್ರಾಧ್ಯಾಪಕರು;

(iv) ಎರಡು ವರ್ಷಗಳ ಅವಧಿಗಾಗಿ, ಸೇವಾ ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಕುಲಪತಿಯು, ಪ್ರತಿಯೊಂದು ಅಧ್ಯಯನ ವಿಭಾಗದಿಂದ ನಾಮ ನಿರ್ದೇಶನ ಮಾಡಿದ ಒಬ್ಬ ರೀಡರು ಮತ್ತು ಉಪನ್ಯಾಸಕ;

(v) ಎರಡು ವರ್ಷಗಳ ಅವಧಿಗಾಗಿ, ಕುಲಪತಿಯು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಇನ್ನೊಂದು ವಿಶ್ವವಿದ್ಯಾನಿಲಯದ ಕಾಲೇಜಿನ ಐವರು ಅಧ್ಯಾಪಕರು, ಇಬ್ಬರು ತಜ್ಞರು;

(vi) ಪರಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಇತರ ವ್ಯಕ್ತಿಗಳು.

(೪) ವ್ಯಾಸಂಗ ವಿಭಾಗಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದು.

೨೯. ಅಧ್ಯಯನ ಮಂಡಲಿ.—(೧) ಅಧ್ಯಾದೇಶಗಳಿಂದ ನಿಯಮಿಸಬಹುದಾದಂತಹ ಪ್ರತಿಯೊಂದು ವಿಷಯಕ್ಕೆ ಅಥವಾ ವಿಷಯಗಳ ಸಮೂಹಕ್ಕೆ ಒಂದು ಅಧ್ಯಯನ ಮಂಡಲಿ ಇರತಕ್ಕದು.

(೨) ಅಧ್ಯಯನ ಮಂಡಲಿಯ ರಚನೆ, ಪ್ರಕಾರ್ಯಗಳು, ಮತ್ತು ಅಧಿಕಾರಗಳು ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದು.

೩೦. ಹಣಕಾಸು ಸಮಿತಿ.—(೧) ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಹಣಕಾಸು ಸಮಿತಿಯೊಂದು ಇರತಕ್ಕದು. ಎಂದರೆ,

(i) ಕುಲಪತಿ—ಪದನಿಮಿತ್ತ ಅಧ್ಯಕ್ಷ;

(ii) ಅದರ ಸದಸ್ಯರಿಂದ ಚುನಾಯಿತನಾದ ಸಿಂಡಿಕೇಟಿನ ಒಬ್ಬ ಸದಸ್ಯ;

(iii) ಅದರ ಸದಸ್ಯರಿಂದ ಚುನಾಯಿತರಾದ ಸೆನೆಟಿನ ಒಬ್ಬ ಸದಸ್ಯ;

(iv) ರಾಜ್ಯ ಸರ್ಕಾರದ ನಾಮನಿರ್ದೇಶಿತರಾದ ಇಬ್ಬರು ಅಧಿಕಾರಿಗಳು;

(v) ಹಣಕಾಸು ಅಧಿಕಾರಿ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ

(೨) ಹಣಕಾಸು ಸಮಿತಿಗೆ ಕುಲಸಚಿವರು ಖಾಯಂ ಆಹ್ವಾನಿತರಾಗಿರತಕ್ಕದು.

(೩) ಹಣಕಾಸು ಸಮಿತಿಯು ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸತಕ್ಕದು ಎಂದರೆ—

(i) ವಾರ್ಷಿಕ ಬಜೆಟ್ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ಸಿಂಡಿಕೇಟಿಗೆ ಅದರ ಶಿಫಾರಸ್ಸುಗಳನ್ನು ಮಾಡುವುದು.

(ii) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರೀಕ್ಷೆಗಳನ್ನು ನಡೆಸುವುದು ವಾರ್ಷಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಪುನರಾವಲೋಕಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು.

(iii) ಬಜೆಟ್ಟಿನಲ್ಲಿ ಒದಗಿಸಿಲ್ಲದ ವೆಚ್ಚವನ್ನು ಒಳಗೊಂಡ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರೀಕ್ಷಿಸುವುದು.

(iv) ಪರಿನಿಯಮಗಳ ಮೂಲಕ, ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

(೪) ಈ ಹಿಂದಿನ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಕುಲಪತಿಯು ಜರೂರು ಸಂದರ್ಭದಲ್ಲಿ ಮತ್ತು ಬರಹದಲ್ಲಿ ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಹಣಕಾಸು ಸಮಿತಿಗೆ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಯಾವುದೇ ವೆಚ್ಚವನ್ನು ವಹಿಸಬಹುದು, ಆದರೆ ಅಂಥ ವೆಚ್ಚವನ್ನು ಹಣಕಾಸು ಸಮಿತಿಯು, ಮುಂದಿನ ಅತಿ ಶೀಘ್ರ ಸಭೆಯಲ್ಲಿ ವರದಿ ಮಾಡತಕ್ಕದು.

(೫) ಹಣಕಾಸು ಸಮಿತಿಯು ಪರಿಗಣಿಸಿದ್ದಲ್ಲಿ ಯಾವುದೇ ವಿಷಯದ ಬಗ್ಗೆ ಮತಗಳು ಸಮಾನವಾಗಿ ವಿಭಾಗವಾಗಿರುವಲ್ಲಿ ಕುಲಪತಿಗಳು ನಿರ್ಣಾಯಕ ಮತವನ್ನು ಹೊಂದಿರತಕ್ಕದು.

೩೧. <u>ಪರೀಕ್ಷಕರ ನೇಮಕಾತಿಗಾಗಿ ಮಂಡಲಿ.</u>—(೧) ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ ಪ್ರತಿವರ್ಷ ವಿಶ್ವವಿದ್ಯಾನಿಲಯದ ಪರೀಕ್ಷಕರಾಗಿ ನೇಮಕಾತಿಗಾಗಿ, ವ್ಯಕ್ತಿಗಳ ಪಟ್ಟಿಗಳನ್ನು ತಯಾರಿಸುವ ಉದ್ದೇಶಕ್ಕಾಗಿ, ಒಂದು ಮಂಡಲಿಯನ್ನು ರಚಿಸತಕ್ಕದು ಮತ್ತು ಮಂಡಲಿಯು,—

(i) ಕುಲಪತಿ ಪದನಿಮಿತ್ತ ಅಧ್ಯಕ್ಷ ;

(ii) ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್;

(iii) ಸಿಂಡಿಕೇಟಿನಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರು;

(iv) ವಿದ್ಯಾ ವಿಷಯಕ ಪರಿಷತ್ತಿನಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರು;

(v) ನಿರ್ದಿಷ್ಟ ವಿಷಯದಲ್ಲಿನ ಅಧ್ಯಯನ ಮಂಡಲಿಯ ಅಧ್ಯಕ್ಷ ; ಮತ್ತು

(vi) ಪರೀಕ್ಷಾ ನಿಯಂತ್ರಕ, ಪದನಿಮಿತ್ತ ಸದಸ್ಯ-ಕಾರ್ಯದರ್ಶಿ ಇವರನ್ನು ಒಳಗೊಂಡಿರತಕ್ಕದು.

(೨) ಮಂಡಲಿಯು, ಅಧ್ಯಯನ ಮಂಡಲಿಯಿಂದ ತಯಾರಿಸಬೇಕಾದ ಪಟ್ಟಿಗಳಲ್ಲಿ ಒಳಗೊಂಡ ವ್ಯಕ್ತಿಗಳಿಂದ ಪಟ್ಟಿಗಳನ್ನು ಸಿದ್ಧಪಡಿಸತಕ್ಕದು, ಮತ್ತು ಅವುಗಳನ್ನು ಸಿಂಡಿಕೇಟಿನ ಅನುಮೋದನೆಗೆ ಒಪ್ಪಿಸತಕ್ಕದು. ಅದು ಅನಂತರ ಪರೀಕ್ಷಕರನ್ನು ನೇಮಕ ಮಾಡತಕ್ಕದು

ಪರಂತು, ಯಾವ ಕಾರಣದ ಮೇಲೆ ಪ್ರತಿಯೊಂದು ಬದಲಾವಣೆಯನ್ನು ಸೂಚಿಸಲಾಗಿದೆಯೋ ಅಥವಾ ಮಾಡಲಾಗಿದೆಯೋ, ಆ ನಿರ್ದಿಷ್ಟ ಕಾರಣವನ್ನು ನಿರೂಪಿಸುವ ಠರಾವನ್ನು ಅಂಗೀಕರಿಸಿದ ಹೊರತು, ಸಿಂಡಿಕೇಟು ಆ ಪಟ್ಟಿಯಲ್ಲಿ ಯಾವುದೇ ಬದಲಾವಣೆಯನ್ನು ಸೂಚಿಸತಕ್ಕದ್ದಲ್ಲ ಅಥವಾ ಮಾಡತಕ್ಕದ್ದಲ್ಲ.

(೩) ಯಾವುದೇ ಕಾರಣಕ್ಕಾಗಿ, ಯಾವನೇ ಪರೀಕ್ಷಕನು, ಪರೀಕ್ಷಕನ ಕೆಲಸವನ್ನು ಅಂಗೀಕರಿಸಲು ಅಸಮರ್ಥನಾದಲ್ಲಿ ಮತ್ತು ಸಿಂಡಿಕೇಟು ಸಕಾಲದಲ್ಲಿ ಹೊಸ ನೇಮಕಾತಿಯನ್ನು ಮಾಡಲಾಗದಿದ್ದಲ್ಲಿ, ಕುಲಪತಿಯು ಬೇರೊಬ್ಬ ಪರೀಕ್ಷಕರನ್ನು ನೇಮಕ ಮಾಡತಕ್ಕುದು ಮತ್ತು ಅಂತಹ ನೇಮಕಾತಿಯನ್ನು ಸಿಂಡಿಕೇಟಿಗೆ ವರದಿ ಮಾಡತಕ್ಕದ್ದು.

(೪) ಹಾಜರಿದ್ದ ಮೂರನೇ ಎರಡರಷ್ಟು ಸದಸ್ಯರು ಸಿಂಡಿಕೇಟಿನ ಠರಾವನ್ನು ಅಂಗೀಕರಿಸಿದ ಹೊರತು; ಸಿಂಡಿಕೇಟಿನ ಅಥವಾ ಮಂಡಲಿಯ ಯಾವನೇ ಸದಸ್ಯನನ್ನು ಪರೀಕ್ಷಕನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

೩೨. ಇತರ ಮಂಡಲಿಗಳು.—(1) ವಿಶ್ವವಿದ್ಯಾನಿಲಯವು,—

(i) ವಿಶ್ವವಿದ್ಯಾನಿಲಯದ ಹೊರಗಿನ ಅಧ್ಯಯನ ಮಂಡಲಿ;

(ii) ವಿದ್ಯಾರ್ಥಿ ಕಲ್ಯಾಣ ಮಂಡಲಿ; ಮತ್ತು

(iii) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತಹ ಇತರ ಮಂಡಲಿಗಳನ್ನು ;

—ಸ್ಥಾಪಿಸಬಹುದು.

(೨) (೧)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಮಂಡಲಿಗಳ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಅಧ್ಯಾದೇಶಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

೩೩. ಸೆನೆಟು, ಸಿಂಡಿಕೇಟು ಮತ್ತು ವಿದ್ಯಾ ವಿಷಯ ಪರಿಷತ್ತುಗಳ ಸದಸ್ಯರ ಪದಾವಧಿಯು :—(೧) ಅನ್ಯಥಾ ಉಪಬಂಧಿಸಿದ್ದ ಹೊರತು, ಸೆನೆಟು, ಸಿಂಡಿಕೇಟು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಉಳಿದ ಸದಸ್ಯರ ಪದಾವಧಿಯು ಮೂರು ವರ್ಷಗಳಾಗಿರತಕ್ಕುದು.

(೨) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಸೆನೆಟು, ಸಿಂಡಿಕೇಟು ಮತ್ತು ವಿದ್ಯಾವಿಷಯದ ಪರಿಷತ್ತುಗಳನ್ನು ಅದೇ ಕಾಲದಲ್ಲಿ ಅಥವಾ ಅದೇ ಸಮಯದಲ್ಲಿ ಪುನರ್ರಚಿತವಾಗತಕ್ಕುದು ಮತ್ತು ಸದರಿ ಪ್ರಾಧಿಕಾರಗಳ ಸದಸ್ಯರು, ಪದನಿಮಿತ್ತ ಸದಸ್ಯರ ಸಂದರ್ಭದಲ್ಲಿ ಹೊರತು ಮುಂದಿನ ಪುನಾರಚನೆಯ ದಿನಾಂಕದವರೆಗೆ, ಅವುಗಳ ಸದಸ್ಯರಾಗಿ ಪದಧಾರಣ ಮಾಡತಕ್ಕದ್ದು.

(೩) ೨೧,೨೪ ಮತ್ತು ೨೬ನೇ ಪ್ರಕರಣಗಳಲ್ಲಿ ಅಥವಾ ಯಾವುದೇ ಕಾನೂನಿನಲ್ಲಿ ಅಥವಾ ತೀರ್ಪು ಅಥವಾ ಡಿಕ್ರಿ ಅಥವಾ ಆದೇಶದಲ್ಲಿ ಏನೇ ಅಡಕವಾಗಿದ್ದಾಗ್ಯೂ ಸೆನೆಟು ಅಥವಾ ಸಿಂಡಿಕೇಟು ಅಥವಾ ವಿದ್ಯಾವಿಷಯಕ ಪರಿಷತ್ತು, ಅದರ ಒಟ್ಟು ಸದಸ್ಯರ ನಾಲ್ಕನೆಯ ಮೂರು ಭಾಗಕ್ಕಿಂತ ಕಡಿಮೆ ಇಲ್ಲದಷ್ಟು, ಸಂಖ್ಯೆಯ ಸದಸ್ಯರಿಂದ ರಚಿತವಾಗಿ

ದ ರೆ ಅಥವಾ ಪುನರ್‌ರಚಿತವಾಗಿದ್ದರೆ, ಅದನ್ನು ಕ್ರಮಬದ್ಧವಾಗಿ ರಚಿತವಾಗಿದೆ ಅಥವಾ ಪುನಾರಚಿತವಾಗಿದೆ ಎಂದು ಭಾವಿಸತಕ್ಕದ್ದು.

ಪರಂತು, ಒಂದು ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನೇಮಿತನಾದ ಸದಸ್ಯನ ಪದಾವಧಿಯು ಅವನ ಪೂರ್ವಾಧಿಕಾರಿಯ ಉಳಿಕೆ ಅವಧಿಯಾಗಿರತಕ್ಕದ್ದು.

೩೪. ಸೆನೆಟು, ಸಿಂಡಿಕೇಟು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರ ಚುನಾವಣೆಯ ವಿಧಾನ :—ಸೆನೆಟು, ಸಿಂಡಿಕೇಟು ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರ ಚುನಾವಣಾ ವಿಧಾನವು, ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

೩೪. ಸೆನೆಟು ಇತ್ಯಾದಿಗಳ ಸಭೆಗಳಿಗೆ ಹಾಜರಾಗಲು ಅಧಿಕಾರಿಯನ್ನು ನಾಮ ನಿರ್ದೇಶಿಸಲು ಕೆಲವು ಪದನಿಮಿತ್ತ ಸದಸ್ಯರ ಅಧಿಕಾರ.—೨೧ನೇ ಪ್ರಕರಣದ (೧) ನೇ ಉಪಪ್ರಕರಣದ (೬) ರಿಂದ (೧೦) ರ ವರೆಗಿನ ಬಾಬುಗಳಲ್ಲಿ ಅಥವಾ ೨೪ನೇ ಪ್ರಕರಣದ (ii) (iii) (x) ಮತ್ತು (xi) ನೇ ಬಾಬುಗಳಲ್ಲಿ ಅಥವಾ ೨೬ನೇ ಪ್ರಕರಣದ (ix) (xiii) ಮತ್ತು (xv) ನೇ ಬಾಬುಗಳಲ್ಲಿ ನಿರ್ದಿಷ್ಟಪಡಿಸಿದ ಪದನಿಮಿತ್ತ ಸದಸ್ಯನು ಸಂದರ್ಭಾನುಸಾರ, ಸೆನೆಟು, ಸಿಂಡಿಕೇಟ್ ಅಥವಾ ವಿದ್ಯಾ ವಿಷಯಕ ಪರಿಷತ್ತಿನ ಯಾವುದೇ ಸಭೆಗೆ ಹಾಜರಾಗಲು, ಅಸಮರ್ಥನಾಗಿರುವಲ್ಲಿ, ಅವನು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಬರಹದ ಮೂಲಕ ಯಾವನೇ ಅಧಿಕಾರಿಯನ್ನು ಅಂಥ ಸಭೆಗಳಿಗೆ, ಹಾಜರಾಗಲು ಅಧಿಕೃತಗೊಳಿಸಬಹುದು ಮತ್ತು ಹಾಗೆ ಹಾಜರಾಗುವ ವ್ಯಕ್ತಿಯು ಸಭೆಯಲ್ಲಿ ಪದನಿಮಿತ್ತ ಸದಸ್ಯನಿಗೆ ಇರುವ ಹಕ್ಕುಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ V

## ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳು

೩೫. ಪರಿನಿಯಮಗಳು :—ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು. ಎಂದರೆ,—

(ಕ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದಂತಹ ಇತರ ನಿಕಾಯಗಳ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು;

(ಖ) ಮೊದಲಿನ ಸದಸ್ಯರನ್ನು ಪದವಿಯಲ್ಲಿ ಮುಂದುವರಿಸುವುದನ್ನು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ಚುನಾವಣೆ ಮತ್ತು ಅವರು ಪದದಲ್ಲಿ

ಮುಂದುವರೆಯುಂವುದು ಹಾಗೂ ಪ್ರಾಧಿಕಾರಗಳಿಗೆ ಅಥವಾ ನಿಕಾಯುಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯುಗಳಿಗೆ ಉಪಬಂಧಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯು ವಾಗಬಹುದೋ ಆ ಎಲ್ಲಾ ಇತರ ವಿಷಯುಗಳ ಬಗ್ಗೆ ಉಪಬಂಧಿಸುಂವುದು;

(ಗ) ಗೌರವ ಪದವಿಗಳನ್ನು ಪ್ರಧಾನ ಮಾಡುವುದು;

(ಘ) ಪದವಿ ಮತ್ತು ಡಿಪ್ಲೊಮೋಗಳನ್ನು ಕೊಡಲು ಘಟಿಕೋತ್ಸವಗಳನ್ನು ನಡೆಸುವುದು;

(ಙ) ಪದವಿ, ಡಿಪ್ಲೊಮೋ ಸರ್ಟಿಫಿಕೇಟ್‌ಗಳ ಹಾಗೂ ಇತರ ವಿದ್ಯಾ ವಿಷಯಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು.

(ಚ) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳು, ಕಾಲೇಜು ಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ರದ್ದಿಯಾತಿ;

(ಛ) ಕಾಲೇಜುಗಳನ್ನು ಸಂಲಗ್ನಗೊಳಿಸುವ ಅಥವಾ ಅಂತಹ ಸಂಲಗ್ನತೆಯುನ್ನು ಹಿಂತೆಗೆದುಕೊಳ್ಳಬಹುದಾದ ಬಗೆಗಿನ ಷರತ್ತುಗಳು.

(ಜ) ಅಧಿ ಸದಸ್ಯತ್ವಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರದರ್ಶನ ಳು, ಪದಕಗಳು. ಮತ್ತು ಪಾರಿತೋಷಕಗಳ ಸ್ಥಾಪನೆ;

(ಝ) ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ ಲಿಪಿಕ ಮತ್ತು ಬೋಧಕೇತರ ಹುದ್ದೆಗಳ ಸ್ಥಾಪನೆ, ಅಮಾನತು ಮತ್ತು ರದ್ದಿಯಾತಿ.

(ಝಕ) ಒಂದು ವರ್ಷಕ್ಕೆ ಮೀರದ ಯಾವುದೇ ನಿರ್ದಿಷ್ಟಅವಧಿಗೆ ಉಪನ್ಯಾಸಕರ ತಾತ್ಕಾಲಿಕ ಹುದ್ದೆಗಳು, ಉಪನ್ಯಾಸಕರ ಅಂಶಕಾಲಿಕ ಹುದ್ದೆಗಳಿಗೆ ಸಹಾಯಕ ಪ್ರಾಧ್ಯಾಪಕರ ರೀಡರುಗಳ ಮತ್ತು ಪ್ರಾಧ್ಯಾಪಕರ ಅಥವಾ ಬೋಧನೇತರ ಸಿಬ್ಬಂದಿಯು ಯಾವುದೇ ವರ್ಗ ಅಥವಾ ವರ್ಗಗಳ ತಾತ್ಕಾಲಿಕ ಹುದ್ದೆಗಳ ಸ್ಥಾಪನೆ.

(ಞ) ಪ್ರಾಧಿಕಾರಗಳ ಅಥವಾ ನಿಕಾಯುಗಳ ಸಭೆಗಳಲ್ಲಿ ಅಂಥವುಗಳಿಂದ ವ್ಯವಹಾರ ನಡೆಸುವುದಕ್ಕಾಗಿ ಬೇಕಾಗುವ ಕೋರಂಅನ್ನು ಒಳಗೊಂಡು ಅನುಸರಿಸಬೇಕಾದ ಪ್ರಕ್ರಿಯೆ;

(ಟ) ವಿಶ್ವವಿದ್ಯಾನಿಲಯದ ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ಅಧ್ಯಾಪಕರ ವರ್ಗೀಕರಣ ;

(ಠ) ಅಧ್ಯಾಪಕರ ನೌಕರಿ ಭರ್ತಿ ವಿಧಾನ;

(ಡ) ವಿಶ್ವವಿದ್ಯಾನಿಲಯದ ನಿಯೋಜಿತರ ಉಪಲಬ್ಧಿಗಳನ್ನೂ ಒಳಗೊಂಡಂತೆ ಸೇವಾ ಷರತ್ತುಗಳು;

(ಥ) ಮರಣ ಶಾಸನ ದಾನ. ದೇಣಿಗೆಗಳು ಮತ್ತು ದತ್ತಿಗಳ ಅಂಗೀಕಾರ ವ್ಯವಸ್ಥಾಪನೆ.

(ಣ) ಪದವೀಧರರ ನೊಂದಣಿ ಮತ್ತು ನೋಂದಾಯಿತ ಪದವೀಧರರ ರಿಜಿಸ್ಟರಿನ ನಿರ್ವಹಣೆ ; ಮತ್ತು

(ತ) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧಿಸ ಬೇಕಾದ ಅಥವಾ ಉಪಬಂಧಿಸಬಹುದಾದ ಎಲ್ಲಾ ಇತರ ವಿಷಯಗಳು.

೩೬. ಪರಿನಿಯಮಗಳು ಅವುಗಳ ರಚನೆ :—(೧) ಸೆನೆಟು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ, ಪರಿನಿಯಮಗಳನ್ನು ರಚಿಸಬಹುದು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(೨) ಸೆನೆಟು ತಾನಾಗಿಯೇ ಆಗಲಿ ಅಥವಾ ಸಿಂಡಿಕೇಟು ಮಾಡಿದ ಪ್ರಸ್ತಾವನೆಯ ಮೇಲಾಗಲಿ ಪರಿನಿಯಮದ ಕರಡನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು. ಸಿಂಡಿಕೇಟು ಕರಡನ್ನು ಪ್ರಸ್ತಾವನೆ ಮಾಡದೆ ಇದ್ದಲ್ಲಿ ಸೆನೆಟು ಅದನ್ನು ಪರ್ಯಾಲೋಚಿಸು ವುದಕ್ಕೆ ಮುಂಚೆ ಸಿಂಡಿಕೇಟಿನ ಅಭಿಪ್ರಾಯವನ್ನು ಪಡೆಯತಕ್ಕದು:

ಪರಂತು, ಸಿಂಡಿಕೇಟು ಕರಡನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಅದರ ಅಭಿಪ್ರಾಯವನ್ನು ಒಪ್ಪಿಸಲು ವಿಫಲವಾದರೆ ಸೆನೆಟು, ಕರಡನ್ನು ಪರ್ಯಾ ಲೋಚಿಸಲು ಮುಂದುವರೆಯಬಹುದು.

(೩) ಸೆನೆಟು ತನಗೆ ಅವಶ್ಯವೆಂದ ಭಾವಿಸಿದರೆ ಕರಡು ಪರಿನಿಯಮಗಳ ಬಗೆ, ಅದ ಅವುಗಳನ್ನು ಪರ್ಯಾಲೋಚಿಸುವುದಕ್ಕೆ ಮುಂಚೆ ವಿಶ್ವವಿದ್ಯಾನಿಲಯದ ಯಾವನೇ ಅಧಿಕಾರಿ ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

ಪರಂತು, ಅಂಥ ಕರಡು ಪರಿನಿಯಮಗಳು ವಿದ್ಯಾ ವಿಷಯಕ ವಿಷಯಗಳಿಗೆ ಸಂಬಂಧ ಪಟ್ಟರೆ ಸೆನೆಟು ಅದನ್ನು ಪರ್ಯಾಲೋಚಿಸುವುದಕ್ಕೆ ಮುಂಚೆ ವಿದ್ಯಾ ವಿಷಯಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದು.

(೪) ಸೆನೆಟು ಅಂಗೀಕರಿಸಿದ ಪ್ರತಿಯೊಂದು ಪರಿನಿಯಮವನ್ನು ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಯ ಅನುಮತಿಗಾಗಿ ಒಪ್ಪಿಸತಕ್ಕದು. ಕುಲಾಧಿಪತಿಯು ಅದಕ್ಕೆ ತನ್ನ ಅನುಮತಿಯನ್ನು ಕೊಡಬಹುದು ಅಥವಾ ತಡೆಹಿಡಿಯಬಹುದು ಅಥವಾ ಹೆಚ್ಚಿನ ಪರ್ಯಾ ಲೋಚನೆಗೆ ಅದನ್ನು ಸೆನೆಟಿಗೆ ವಾಪಸ್ಸು ಕಳುಹಿಸಬಹುದು.

(೫) ಸೆನೆಟ್ಟಿನಿಂದ ಅಂಗೀಕೃತವಾದ ಯಾವ ಪರಿನಿಯಮವೂ ಕುಲಾಧಿಪತಿಯ ಅನುಮತಿಯನ್ನು ಪಡೆಯುವವರೆಗೆ ಸಿಂಧುತ್ವವನ್ನು ಹೊಂದಿರತಕ್ಕದಲ್ಲ.

೩೭. ಅಧ್ಯಾದೇಶಗಳು :—ಈ ಅಧಿನಿಯಮ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಅಧ್ಯಾದೇಶಗಳೂ ಈ ಕೆಳಗೆ ಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು. ಎಂದರೆ,—

(ಕ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ಹಾಗೆ ಅವರನ್ನು ;

(ಖ) ವಿಶ್ವವಿದ್ಯಾನಿಲಯದ ಎಲ್ಲ ಪದವಿಗಳ, ಡಿಪ್ಲೊಮೋಗಳ ಮತ್ತು ಪ್ರಮಾಣ ಪತ್ರಗಳ ಬಗ್ಗೆ ಅಧ್ಯಯನ ಕ್ರಮಗಳು ;

(ಗ) ಪದವಿಗಳು, ಡಿಪ್ಲೊಮೋಗಳು ಮತ್ತು ಪ್ರಮಾಣ ಪತ್ರಗಳ ಮತ್ತು ಅವುಗಳಿಗಾಗಿ ಇತರ ಅರ್ಹತೆಗಳು ಮತ್ತು ಅವುಗಳನ್ನು ಕೊಡುವುದಕ್ಕೆ, ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಕೊಳ್ಳಬೇಕಾದ ಕ್ರಮಗಳು ;

(ಘ) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿ ಅಧ್ಯಯನ ಕ್ರಮಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗೆ, ಪದವಿಗೆ ಮತ್ತು ಡಿಪ್ಲೊಮೋಗಳಿಗೆ ಪ್ರವೇಶದ ಬಗ್ಗೆ ವಿಧಿಸಬೇಕಾದ ಫೀಜುಗಳು ;

(ಙ) ಅಧಿಸದಸ್ಯತ್ವ, ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಪ್ರದರ್ಶನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಕೊಡುವುದಕ್ಕೆ ಸಂಬಂಧಿಸಿದ ಷರತ್ತುಗಳು ;

(ಚ) ಪರೀಕ್ಷಾ ನಿಕಾಯಗಳು, ಪರೀಕ್ಷಕರು, ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳೂ ಸೇರಿದಂತೆ, ಪರೀಕ್ಷೆಗಳನ್ನು, ನಡೆಸುವುದು ;

(ಛ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು.

(ಜ) ವಿದ್ಯಾರ್ಥಿನಿಲಯ ವಸತಿ, ಶಿಸ್ತು ಹಾಗೂ ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳೇನಾದರೂ ಇದ್ದಲ್ಲಿ, ಅವುಗಳನ್ನು ಮತ್ತು ಅವಶ್ಯವಿರುವ ಅವರಿಗಾಗಿ ವಿಶೇಷ ಅಧ್ಯಯನ ಕ್ರಮಗಳನ್ನು ನಿಯಮಿಸುವುದು ;

(ಝ) ಧಾರ್ಮಿಕ ಶಿಕ್ಷಣ ಕೊಡುವುದನ್ನು ವಿನಿಯಮಿಸುವುದು ;

(ಞ) ವಿಶ್ವವಿದ್ಯಾನಿಲಯದಿಂದ ಸ್ಥಾಪಿತವಾದ ಅಥವಾ ಅದು ನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಇತರ ಸಂಸ್ಥೆಗಳ ವ್ಯವಸ್ಥಾಪನೆ.

(ಟ) ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜುಗಳ ಹಾಗೂ ಇತರ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಪರಿಶೀಲನೆ ;

(ಠ) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಫೀಜು ;

(ಡ) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು ;

(ಢ) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿ ಹಾಗೂ

ಇತರ ಸಂಸ್ಥೆಗಳಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಮತ್ತು ಅವರ ವಿರುದ್ಧ ಶಿಸ್ತುಪಾಲನಾ ವ್ಯವಹರಣೆಗಳು;

(ಣ) ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳು ಅನುಸರಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ನಿಯಮಗಳು ; ಮತ್ತು

(ತ) ಅಧಿನಿಯಮ ಅಥವಾ ಪರಿನಿಯಮಗಳ ಮೂಲಕ, ಅಧ್ಯಾದೇಶಗಳಿಂದ ಉಪಬಂಧಿಸಬೇಕಾದ ಅಥವಾ ಬಹುದಾದ ಇತರ ಎಲ್ಲಾ ವಿಷಯಗಳು.

೩೮. **ಅಧ್ಯಾದೇಶಗಳು—ಅವುಗಳ ರಚನೆ:**—(೧) ಸಿಂಡಿಕೇಟು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಅಧ್ಯಾದೇಶಗಳನ್ನು ರಚಿಸಬಹುದು.

(೨) ಅಧ್ಯಾದೇಶಗಳನ್ನು ರಚಿಸುವಲ್ಲಿ ಸಿಂಡಿಕೇಟು,—

(ಕ) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಅಧ್ಯಾದೇಶಗಳು ಪರಿಣಾಮ ಬೀರುವಾಗ, ಸಂಬಂಧಪಟ್ಟ ಅಧ್ಯಯನ ಮಂಡಲಿ ಅಥವಾ ಮಂಡಲಿಗಳೊಡನೆ ; ಮತ್ತು

(ಖ) ಅಧ್ಯಯನ ವ್ಯಾಸಂಗ ಕ್ರಮಗಳು ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಅಧ್ಯಾದೇಶಗಳು ಪರಿಣಾಮ ಬೀರುವಾಗ ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸತಕ್ಕದ್ದು.

(೩) ವಿದ್ಯಾ ವಿಷಯ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಅಧ್ಯಾದೇಶದ ಕರಡನ್ನು ತಿದ್ದುಪಡಿ ಮಾಡಲು ಸಿಂಡಿಕೇಟಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವನೆಯನ್ನು ತಿರಸ್ಕರಿಸಬಹುದು ಅಥವಾ ಸಿಂಡಿಕೇಟು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶಃ ಮರುಪರಿಶೀಲನೆಗಾಗಿ ಕರಡನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(೪) ಸಿಂಡಿಕೇಟು ರಚಿಸಿದ ಎಲ್ಲಾ ಅಧ್ಯಾದೇಶಗಳು, ಅದು ನಿರ್ದೇಶಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು. ಆದರೆ ಅದನ್ನು ರಚಿಸಿದಂದಿನಿಂದ ಎರಡು ವಾರಗಳೊಳಗಾಗಿ, ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಗೆ ಪ್ರತಿಯೊಂದು ಅಧ್ಯಾದೇಶವನ್ನು ಒಪ್ಪಿಸತಕ್ಕದ್ದು. ಕುಲಾಧಿಪತಿಯು, ಅಧ್ಯಾದೇಶವನ್ನು ಸ್ವೀಕರಿಸಿದ ನಾಲ್ಕು ವಾರಗಳೊಳಗಾಗಿ, ಯಾವುದೇ ಅಧ್ಯಾದೇಶದ ಪ್ರವರ್ತನೆಯು ಅಮಾನತ್ತಿನಲ್ಲಿರತಕ್ಕದ್ದೆಂದು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಅದಕ್ಕೆ ಅವನ ಆಕ್ಷೇಪಣೆಯನ್ನು ಸಾಧ್ಯವಾದಷ್ಟು ಬೇಗನೆ ಸಿಂಡಿಕೇಟಿಗೆ ತಿಳಿಸತಕ್ಕದ್ದು. ಸಿಂಡಿಕೇಟಿನ ಟೀಕೆಗಳನ್ನು ರಾಜ್ಯ ಸರ್ಕಾರದ ಮೂಲಕ ಅವನು ಸ್ವೀಕರಿಸಿದ ತರುವಾಯ, ಅಮಾನತಿನ ಆದೇಶವನು

ಹಿಂತೆಗೆದುಕೊಳ್ಳಬಹುದು, ಅಥವಾ ಅಧ್ಯಾದೇಶವನ್ನು ತಿರಸ್ಕರಿಸಬಹುದು. ಅವನ ನಿರ್ಣಯವು ಅಂತಿಮವಾಗಿರತಕ್ಕದ್ದು.

(೫) ವಿದ್ಯಾ ವಿಷಯಕ ಪರಿಷತ್ತು ಪ್ರಸ್ತಾವಿಸಿದ ಅಧ್ಯಾದೇಶದ ಕರಡನ್ನು ಸಿಂಡಿಕೇಟು ತಿರಸ್ಕರಿಸಿದಲ್ಲಿ, ವಿದ್ಯಾವಿಷಯಕ ಪರಿಷತ್ತು ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಗೆ ಅಪೀಲು ಹೂಡಬಹುದು.

(೬) ಕುಲಾಧಿಪತಿಯು, ರಾಜ್ಯಸರ್ಕಾರದ ಮೂಲಕ, ಸಿಂಡಿಕೇಟಿನ ಟೀಕೆಗಳನ್ನು ಪಡೆದ ತರುವಾಯ ಅಪೀಲನ್ನು ತಿರಸ್ಕರಿಸಬಹುದು ಇಲ್ಲವೇ ವಿದ್ಯಾ ವಿಷಯಕ ಪರಿಷತ್ತು ಪ್ರಸ್ತಾವಿಸಿದಂತೆ ಅಧ್ಯಾದೇಶವನ್ನು ಅನುಮೋದಿಸಬಹುದು. ಅನಂತರ, ಅಧ್ಯಾದೇಶವು ಸಿಂಡಿಕೇಟು ರಚಿಸಿದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

೩೯. ವಿನಿಯಮನಗಳು :— (೧) ವಿದ್ಯಾ ವಿಷಯಕ ಪರಿಷತ್ತು ರಾಜ್ಯಸರ್ಕಾರದ ಮೂಲಕ ಕೋರಲಾದ ಮತ್ತು ಪಡೆಯಲಾದ, ಕುಲಾಧಿಪತಿಯ ಅನುಮೋದನೆಗೆ, ಒಳಪಟ್ಟು, ಈ ಅಧಿನಿಯಮ, ಪರಿನಿಯಮಗಳಿಗೆ ಮತ್ತು ಅಧ್ಯಾದೇಶಗಳಿಗೆ ಸುಸಂಗತವಾಗಿರುವ ವಿನಿಯಮನಗಳನ್ನು ರಚಿಸಬಹುದು.

(೨) ೨೭ನೇ ಪ್ರಕರಣದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುದೇ ಅಧಿಕಾರ ಗಳನ್ನು ಚಲಾಯಿಸಲು ಮತ್ತು ವಿಶೇಷವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಉಪಬಂಧಿಸ ಬಹುದು. ಎಂದರೆ,—

(ಕ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ಖ) ಇತರ ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾ ನಿಲಯದ ಪರೀಕ್ಷೆ ಮತ್ತು ಪದವಿಗಳಿಗೆ, ಸಮನಾದುವೆಂದು ಮನ್ನಣೆ ಕೊಡುವುದು;

(ಗ) ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾನಿಲಯದ ಅಥವಾ ಸಂಲಗ್ನಗೊಂಡ ಕಾಲೇಜುಗಳ ಅಥವಾ ಇತರ ವಿಶ್ವವಿದ್ಯಾ ನಿಲಯದ ಸಂಸ್ಥೆಗಳ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಅಥವಾ ಪದವಿ ಗಳು ಡಿಪ್ಲೊಮೋಗಳು ಮತ್ತು ಸರ್ಟಿಫಿಕೇಟುಗಳಿಗೆ, ಸೇರಿಸಿಕೊಳ್ಳುವ ಬಗೆಗಿನ ಷರತ್ತುಗಳು;

(ಘ) ವಿನಾಯಿತಿಗಳನ್ನು ಕೊಡುವುದು;

(೩) ಪ್ರತಿಯೊಂದು ವಿನಿಯಮನವು ಅದು ಕುಲಾಧಿಪತಿಯ ಅನುಮೋದನೆಯನ್ನು ಪಡೆದ ದಿನಾಂಕದಂದು ಅಥವಾ ಕುಲಾಧಿಪತಿಯು ನಿರ್ದೇಶಿಸಬಹುದಾದಂಥ ಇತರ ದಿನಾಂಕ ದಂದು ಜಾರಿಗೆ ಬರತಕ್ಕದ್ದು. ವಿನಿಯಮನಗಳನ್ನು ಸರ್ಕಾರಿ ರಾಜಪತ್ರದಲ್ಲಿಯೂ ಸಹ ಪ್ರಕಟಿಸತಕ್ಕದ್ದು.

೪೨. ನಿಯಮಗಳು:—(೧) ೨೦ನೇ ಪ್ರಕರಣದ (ಫ) ದಿಂದ (ಥ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು ಮತ್ತು ವಿಶ್ವವಿದ್ಯಾನಿಲಯದ ಯಾವುದೇ ಮಂಡಲಿಯು, ಸಿಂಡಿಕೇಟಿನ ಅನುಮೋದನೆಗೆ ಒಳಪಟ್ಟು, ಈ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮಗಳಿಗೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

(೨) ನಿಯಮಗಳು,—

(ಕ) ಪ್ರತಿಯೊಂದು ಪ್ರಾಧಿಕಾರದ ಅಥವಾ ಮಂಡಲಿಯ ಸದಸ್ಯರಿಗೆ ಸಭೆಗಳ ದಿನಾಂಕಗಳ ಮತ್ತು ಆ ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರದ ನೋಟೀಸನ್ನು ಕೊಡುವುದಕ್ಕಾಗಿ ಮತ್ತು ಆ ಸಭೆಗಳು ವ್ಯವಹರಣೆಗಳ ದಾಖಲೆಯನ್ನು ಇಡುವುದಕ್ಕಾಗಿ ;

(ಖ) ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಸಭೆಗಳಿಗಾಗಿ ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆಗಾಗಿ : ಮತ್ತು

(ಗ) ಅಂಥ ಪ್ರಾಧಿಕಾರ ಅಥವಾ ಮಂಡಲಿಗೆ ಮಾತ್ರವೇ ಸಂಬಂಧಿಸಿದಂತೆ ಮತ್ತು ಈ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು ಅಥವಾ ವಿನಿಯಮಗಳಿಂದ ಉಪಬಂಧಿಸದೆ ಇರುವ ಎಲ್ಲಾ ವಿಷಯಗಳಿಗಾಗಿ ;

—ಉಪಬಂಧಿಸಬಹುದು.

(೩) ಸಿಂಡಿಕೇಟು, ತನಗೆ ಒಪ್ಪಿಸಿದ ನಿಯಮಗಳಿಗೆ ಅನುಮೋದನೆ ಕೊಡಲು ನಿರಾಕರಿಸಬಹುದು ಅಥವಾ ಹೆಚ್ಚಿನ ಪರ್ಯಾಲೋಚನೆಗಾಗಿ, ಸಂಬಂಧಪಟ್ಟ ಪ್ರಾಧಿಕಾರ ಅಥವಾ ಮಂಡಲಿಗೆ ಅವುಗಳನ್ನು ವಾಪಸ್ಸು ಮಾಡಬಹುದು ಅಥವಾ ಮಾರ್ಪಾಟು ಮಾಡತಕ್ಕ ಅಥವಾ ಸಿಂಡಿಕೇಟು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟಿಗೊಳಪಟ್ಟು, ಆ ನಿಯಮಗಳನ್ನು ಅನುಮೋದಿಸಬಹುದು.

(೪) ಈ ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವು, ಸಿಂಡಿಕೇಟಿನ ಅನುಮೋದನೆ ಪಡೆದ ದಿನಾಂಕದಂದು, ಜಾರಿಗೆ ಬರತಕ್ಕದ್ದು, ಅದನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಸಹಾ ಪ್ರಕಟಿಸತಕ್ಕದ್ದು.

## ಅಧ್ಯಾಯ—VI

## ಹಣಕಾಸು ಮತ್ತು ಲೆಕ್ಕಪತ್ರಗಳು

೪೧. ವಿಶ್ವವಿದ್ಯಾನಿಲಯದ ನಿಧಿಗಳು :—(೧) ಈ ಕೆಳಕಂಡ ಯಾವುದೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು, ವಿಶ್ವವಿದ್ಯಾನಿಲಯದ ನಿಧಿಯ ಭಾಗವಾಗಿರತಕ್ಕದ್ದು ;

(ಕ) ರಾಜ್ಯ ಸರ್ಕಾರವು ಮಾಡಿದ ಯಾವುದೇ ವಂತಿಗೆ ಅಥವಾ ಅನುದಾನ ;

(ಖ) ವಿಶ್ವವಿದ್ಯಾನಿಲಯದ ಅನುದಾನ ಆಯೋಗವು ಅಥವಾ ಕೇಂದ್ರ ಸರ್ಕಾರವು ಕೊಟ್ಟ ಯಾವುದೇ ವಂತಿಗೆ ಅಥವಾ ಅನುದಾನ ;

(ಗ) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ಕೊಟ್ಟ ಯಾವುದೇ ಮರಣ ಶಾಸನ ದಾನ, ದೇಣಿಗೆ ಅಥವಾ ವ್ಯಕ್ತಿಗಳು ಅಥವಾ ಇತರ ಅನುದಾನಗಳು .

(ಘ) ಫೀಜು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾನಿಲಯವು ಸ್ವೀಕರಿಸುವ ಆದಾಯ ; ಮತ್ತು

(ಙ) ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(೨) ಸದರಿ ನಿಧಿಯನ್ನು ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, ೧೯೩೪ರ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಗೆ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, ೧೯೭೦ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದು ಅಥವಾ ಸಿಂಡಿಕೇಟು ತೀರ್ಮಾನಿಸಬಹುದಾದಂಥ, ಭಾರತ ನ್ಯಾಸ ಅಧಿನಿಯಮ, ೧೮೮೨ ಅಧಿಕೃತವಾದ ಭದ್ರತೆಗಳಲ್ಲಿ ಹೂಡಬಹುದು.

(೩) ಪರಿನಿಯಮಗಳು ನಿಯಮಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

**೪೨. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ**

(೧) ಸಿಂಡಿಕೇಟಿನ ನಿರ್ದೇಶನದ ಮೇರೆಗೆ, ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದು.

(೨) ಕನಿಷ್ಠಪಕ್ಷ ವರ್ಷಕ್ಕೊಮ್ಮೆ, ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ನಿಯಂತ್ರಕ ಪರಿಶೋಧಿಸತಕ್ಕದು.

(೩) ಲೆಕ್ಕ ಪತ್ರಗಳ ಪರಿಶೋಧನೆಯಾದಾಗ, ಅವುಗಳನ್ನು ಸಿಂಡಿಕೇಟು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದು ಮತ್ತು ಲೆಕ್ಕಪರಿಶೋಧನಾ ವರದಿಯೊಂದಿಗೆ, ಲೆಕ್ಕ ಪತ್ರಗಳ ಒಂದು ಪ್ರತಿಯನ್ನು ಸೆನೆಟಿನ ಮುಂದಿಡತಕ್ಕದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೂ ಸಹ ಒಪ್ಪಿಸತಕ್ಕದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮುಂಬರುವ ಅತಿ ಶೀಘ್ರ ಅಧಿವೇಶನದಲ್ಲಿ ಇಡ ತಕ್ಕದು.

(೪) ತನ್ನ ವಾರ್ಷಿಕ ಸಭೆಯಲ್ಲಿ ಸೆನೆಟು ವಾರ್ಷಿಕ ಲೆಕ್ಕಪತ್ರಗಳನ್ನು ಪರ್ಯಾಲೋಚಿಸತಕ್ಕದು. ಅದಕ್ಕೆ ಸಂಬಂಧಿಸಿದಂತೆ ನಿರ್ಣಯಗಳನ್ನು ಸೆನೆಟು ಅಂಗೀಕರಿಸ ಬಹುದು ಮತ್ತು ಅವುಗಳನ್ನು ಸಿಂಡಿಕೇಟಿಗೆ ತಿಳಿಸಬಹುದು. ಸಿಂಡಿಕೇಟು ಸೆನೆಟು ಸೂಚನೆ ಗಳನ್ನು ಪರ್ಯಾಲೋಚಿಸತಕ್ಕದು. ಮತ್ತು ಅವುಗಳ ಬಗ್ಗೆ ಅದು ಸೂಕ್ತವೆಂದ ಭಾವಿಸುವಂಥ ಕ್ರಮವನ್ನು ಕೈಕೊಳ್ಳತಕ್ಕದು. ಸಿಂಡಿಕೇಟು ತಾನು ಕೈಕೊಂಡ ಎಲ್ಲ ಕ್ರಮ ವನ್ನು ಅಥವಾ ಕ್ರಮವನ್ನು ಕೈಕೊಳ್ಳದಿರಲು ಕಾರಣಗಳನ್ನು, ಸೆನೆಟಿಗೆ ಅದರ ಮುಂದಿನ ಸಭೆಯಲ್ಲಿ ತಿಳಿಸತಕ್ಕದು.

೪೩. ಹಣಕಾಸಿನ ಅಂದಾಜುಗಳು :—ಸಿಂಡಿಕೇಟು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು ಮುಂಬರುವ ವರ್ಷದ ಹಣಕಾಸು ಅಂದಾಜುಗಳನ್ನು ತಯಾರಿಸತಕ್ಕುದು ಮತ್ತು ಅವುಗಳನ್ನು ಸೆನೆಟಿನ ಮುಂದೆ ಇಡತಕ್ಕುದು.

(೨) ಸಿಂಡಿಕೇಟು ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಬರಹದ ಮೂಲಕ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥ ಪರಿಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚ ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಸೆನೆಟಿಗೆ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕುದು.

೪೪. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ :—ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಸಂಸ್ಥೆಗಳೂ ಒಳಗೊಂಡಂತೆ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲ ಅದು ನಿರ್ದಿಷ್ಟಪಡಿಸಬಹುದಾದಂಥ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ಸರ್ಕಾರಕ್ಕೆ ಅಧಿಕಾರವಿರತಕ್ಕುದು.

೪೫. ವಾರ್ಷಿಕ ವರದಿ :—(೧) ಸಿಂಡಿಕೇಟು ಪ್ರತಿ ಹಣಕಾಸು ವರ್ಷಕ್ಕೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ತಯಾರಿಸತಕ್ಕುದು ಮತ್ತು ಪರಿನಿಯಮಗಳು ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮೊದಲು ಅದನ್ನು ಸೆನೆಟಿಗೆ ಒಪ್ಪಿಸತಕ್ಕುದು. ಸೆನೆಟ್ಟು ಅದರ ಮೇಲೆ ನಿರ್ಣಯಗಳನ್ನು ಅಂಗೀಕರಿಸಬಹುದು ಮತ್ತು ಅದಕ್ಕನುಸಾರವಾಗಿ ಸಿಂಡಿಕೇಟು ಕ್ರಮ ಕೈಗೊಳ್ಳತಕ್ಕುದು. ಕೈಕೊಂಡ ಕ್ರಮವನ್ನು ಸೆನೆಟ್ಟಿಗೆ ತಿಳಿಸತಕ್ಕುದು.

(೨) ವಾರ್ಷಿಕ ವರದಿಯ ಪ್ರತಿಗಳನ್ನು ಅದರ ಮೇಲಿನ ಸೆನೆಟಿನ ನಿರ್ಣಯದೊಡನೆ, ಸರ್ಕಾರಕ್ಕೆ ಒಪ್ಪಿಸತಕ್ಕದು. ರಾಜ್ಯ ಸರ್ಕಾರವು ಅದನ್ನು ರಾಜ್ಯವಿಧಾನ ಮಂಡಲದ ಎರಡೂ ಸದನಗಳ ಮುಂದೆ, ಅವುಗಳ ಮುಂದಿನ ಅತಿಶೀಘ್ರ ಅಧಿವೇಶನದಲ್ಲಿ ಇಡತಕ್ಕುದು.

## ಅಧ್ಯಾಯ–VII

### ಪ್ರಾಧಿಕಾರಗಳಲ್ಲಿ ಖಾಲೀ ಸ್ಥಾನಗಳು ಮತ್ತು ಚುನಾವಣೆಗಳು

೪೬. ಹುದ್ದೆಯನ್ನು ತೆರವು ಮಾಡುವುದು :—(೧) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ, ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಯಾವನೇ ಸದಸ್ಯನು ಕುಲಸಚಿವನಿಗೆ ಪತ್ರ ಬರೆಯುವ ಮೂಲಕ ತನ್ನ ಹುದ್ದೆಗೆ ರಾಜೀ

ನಾಮೆಂ ಕೊಡಬಹುದು ಮತ್ತು ಕುಲಸಚಿವರು ಅಂಥ ಪತ್ರವನ್ನು ಸ್ವೀಕರಿಸಿದ ಮೇಲೆ ರಾಜೀನಾಮೆ ಜಾರಿಗೆ ಬರತಕ್ಕದು.

(೨) ಒಂದು ವಿಶಿಷ್ಟ ಮತದಾರರ ಮಂಡಲಿಯ ಅಥವಾ ನಿಕಾಯದ ಸದಸ್ಯನಾಗಿ ಅಥವಾ ಅಧ್ಯಾಪಕನಾಗಿ ಅಥವಾ ಸ್ಪಷ್ಟವಾಗಿ ಹಾಗೆ ಹೇಳಿರುವಲ್ಲಿ, ಯಾವುದೇ ವಿಶಿಷ್ಟ ನೇಮಕಾತಿಯ ಧಾರಕನಾಗಿ, ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯಕ್ಕೆ ತನ್ನ ಆ ನಾತೆಯಿಂದ ಚುನಾಯಿತನಾದ, ನೇಮಿತನಾದ ಅಥವಾ ನಾಮ ನಿರ್ದೇಶಿತನಾದ, ಯಾವನೇ ಸದಸ್ಯನು, ಅವನು ವಿಶಿಷ್ಟ ಮತದಾರರ ಮಂಡಲಿಯ ಅಥವಾ ನಿಕಾಯದ ಸದಸ್ಯನಾಗಿರುವುದು ಅಥವಾ ಅಧ್ಯಾಪಕನಾಗಿರುವುದು ಅಥವಾ ಆ ವಿಶಿಷ್ಟ ನೇಮಕಾತಿಯ ಧಾರಕನಾಗಿರುವುದು ಮುಕ್ತಾಯವಾದ ಮೇಲೆ, ಅಂಥ ಪ್ರಾಧಿ ಕಾರದ ಅಥವಾ ನಿಕಾಯದ ಸದಸ್ಯನಾಗಿ ಮುಂದುವರಿಯತಕ್ಕದಲ್ಲ.

(೩) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನು ನೈತಿಕ ಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ನಿರ್ಣೀತ ಅಪರಾಧಿಯಾದರೆ, ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದು.

೪೭. ಖಾಲೀ ಸ್ಥಾನಗಳನ್ನು ಭರ್ತಿ ಮಾಡುವುದು :—ಮರಣ, ರಾಜಿನಾಮೆ ಅಥವಾ ಇತರ ರೀತಿಯ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯರಲ್ಲಿ (ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ) ಉದ್ಭವಿಸುವ ಎಲ್ಲಾ ಖಾಲೀ ಸ್ಥಾನಗಳನ್ನು, ಅನುಕೂಲವಾಗಬಹುದಾದಷ್ಟು ಬೇಗ, ಯಾರ ಸದಸ್ಯನ ಸ್ಥಳವು ಖಾಲಿಯಾಗಿದೆಯೋ, ಆ ಸದಸ್ಯನನ್ನು ನೇಮಕ ಮಾಡಿದ, ನಾಮ ನಿರ್ದೇಶನ ಮಾಡಿದ, ಚುನಾಯಿಸಿದ ಅಥವಾ ಸಹ ಸದಸ್ಯನನ್ನಾಗಿ ಸೇರಿಸಿಕೊಂಡ ವ್ಯಕ್ತಿ ಅಥವಾ ನಿಕಾಯವು, ಭರ್ತಿಮಾಡತಕ್ಕದು ಮತ್ತು ಹಾಗೆ ನೇಮಕಗೊಂಡ ನಾಮನಿರ್ದೇಶಿತ ನಾದ, ಚುನಾಯಿತನಾದ ಅಥವಾ ಸಹ ಸದಸ್ಯನನ್ನಾಗಿ ಸೇರಿಸಿಕೊಂಡ ವ್ಯಕ್ತಿಯು ಯಾವ ಸದಸ್ಯನ ಸ್ಥಳದಲ್ಲಿ ಅಂಥ ವ್ಯಕ್ತಿಯನ್ನು ನೇಮಿಸಲಾಗಿದೆಯೋ, ನಾಮನಿರ್ದೇಶಿಸ ಲಾಗಿದೆಯೋ, ಚುನಾಯಿಸಲಾಗಿದೆಯೋ ಅಥವಾ ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳ ಲಾಗಿದೆಯೋ ಆ ವ್ಯಕ್ತಿಯು ಅನ್ಯಥಾ ಪದದಲ್ಲಿ ಮುಂದುವರಿಯಬಹುದಾದಂಥ ಪದಾವಧಿಯು ಮುಕ್ತಾಯವಾಗದಿರುವ ಭಾಗದ ಅವಧಿಯವರೆಗೆ ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿ ಇರತಕ್ಕದು:

ಪರಂತು, ಹಿಂದೇ ಹೇಳಲಾದ ರೀತಿಯಲ್ಲಿ, ಯಾವುದೇ ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಯಾವನೇ ವ್ಯಕ್ತಿಯ ನೇಮಕಾತಿ, ನಾಮನಿರ್ದೇಶನ ಅಥವಾ ಚುನಾ ವಣೆಯು, ಇತ್ಯರ್ಥ ಆಗುವವರೆಗೆ ಆ ಖಾಲಿಸ್ಥಾನವನ್ನು (ಸೆನೆಟಿನ ಖಾಲಿ ಸ್ಥಾನವನ್ನು ಹೊರತುಪಡಿಸಿ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ಖಾಲೀಸ್ಥಾನವನ್ನು

ಭರ್ತಿ ಮಾಡಲು ಅರ್ಹನಾದ ವ್ಯಕ್ತಿಯನ್ನು ನೇಮಕ ಮಾಡಿದ, ನಾಮ ನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯವು ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ಯಾವನೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಅಂಥ ವ್ಯಕ್ತಿಯನ್ನು, ನೇಮಕ ಮಾಡುವ, ನಾಮನಿರ್ದೇಶಿಸುವ, ಚುನಾಯಿಸುವ ಅಥವಾ ಸಹ ಸದಸ್ಯನಾಗಿ ಸೇರಿಸಿಕೊಳ್ಳುವವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದು.

೪೮. ಸದಸ್ಯತ್ವಕ್ಕೆ ಸಂಬಂಧಿಸಿದ ವಿವಾದಗಳು:—(೧) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನಾಗಿ ಯಾವನೇ ವ್ಯಕ್ತಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಯೇ ಅಥವಾ ನೇಮಕಗೊಂಡಿದ್ದಾನೆಯೇ ಅಥವಾ ಹಾಗೆ ಸದಸ್ಯನಾಗಿರಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಪ್ರಶ್ನೆ ಉದ್ಭವಿಸಿದರೆ ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸತಕ್ಕದ್ದು.

(೨) ಆ ಪ್ರಶ್ನೆಯ ಮೇಲೆ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ—VIII

### ವಿಶ್ವವಿದ್ಯಾನಿಲಯದ ಅಧ್ಯಾಪಕರ ಮತ್ತು ಇತರ ನೌಕರರ ನೇಮಕಾತಿ

೪೯. ಅಧ್ಯಾಪಕರು ಮೊದಲಾದವರ ನೇಮಕಾತಿ :—(೧) ಪ್ರಾಧ್ಯಾಪಕರು, ಗ್ರಂಥಪಾಲಕ, ರೀಡರುಗಳು ಮತ್ತು ಉಪನ್ಯಾಸಕರಾಗಿ ವ್ಯಕ್ತಿಗಳನ್ನು ನೇಮಕಾತಿಗಾಗಿ ಆಯ್ಕೆ ಮಾಡಲು ವಿಶ್ವವಿದ್ಯಾನಿಲಯದಲ್ಲಿ ಒಂದು ನೇಮಕಾತಿ ಮಂಡಲಿ ಇರತಕ್ಕದ್ದು.

(೨) ಅಂಥ ಪ್ರತಿಯೊಂದು ಮಂಡಲಿಯು,

(ಕ) ಪ್ರಾಧ್ಯಾಪಕರ ಮತ್ತು ಗ್ರಂಥಪಾಲಕನ ಹುದ್ದೆಗಳಿಗಾಗಿ ಆಯ್ಕೆ ಮಾಡಲು,—

(i) ಕುಲಪತಿ ಪದನಿಮಿತ್ತ ಅಧ್ಯಕ್ಷ;

(ii) ಪ್ರಾಧ್ಯಾಪಕನಾಗಿದ್ದರೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥ ಮತ್ತು ಅವನು ಪ್ರಾಧ್ಯಾಪಕನಾಗಿರದಿದ್ದರೆ, ಕುಲಾಧಿಪತಿಯು ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕ, ಮತ್ತು ರಾಜ್ಯದೊಳಗಿನ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಂಥ ಪ್ರಾಧ್ಯಾಪಕನು ಲಭ್ಯವಾಗದೇ ಇದ್ದರೆ ರಾಜ್ಯದೊಳಗಿನ ಕೇಂದ್ರ ಸಂಸ್ಥೆಯ ಅಥವಾ ಯಾವುದೇ ಇತರ ರಾಜ್ಯದ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಇಲಾಖೆಯಿಂದ ಕುಲಾಧಿಪತಿಯು ನಾಮನಿರ್ದೇಶಿಸಿದಂಥ ಪ್ರಾಧ್ಯಾಪಕ.

---

೧. ೧೯೭೮ರ ೯ನೇ ಅಧಿನಿಯಮದ ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

(iii) ಕುಲಾಧಿಪತಿಯು ನಾಮನಿರ್ದೇಶಿಸಿದ ಮೂವರು ತಜ್ಞರು, ಅವರ ಪೈಕಿ, ವಿಶ್ವವಿದ್ಯಾನಿಲಯ ಅನುದಾನ ಆಯೋಗವು ಒದಗಿಸಿದ ಪಟ್ಟಿಯಿಂದ ಇಬ್ಬರು ಮತ್ತು ಭಾರತದಲ್ಲಿ ಕಾನೂನು ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾನಿಲಯ ಅಥವಾ ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಯಾವುದೇ ಇತರ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಲ್ಲಿ ಇನ್ನೊಬ್ಬನು.

(ಖ) ರೀಡರಂಗಳ ಮತ್ತು ಉಪನ್ಯಾಸಕರ ಹುದ್ದೆಗಳಿಗೆ ಆಯ್ಕೆ ಮಾಡಲು.—

(i) ಕುಲಪತಿ ಪದನಿಮಿತ್ತ ಅಧ್ಯಕ್ಷ,

(ii) ಕುಲಾಧಿಪತಿಯು ನಾಮನಿರ್ದೇಶಿಸಿದ ಇಬ್ಬರು ತಜ್ಞರು,

೨ [(iii) ಪ್ರಾಧ್ಯಾಪಕನಾಗಿದ್ದರೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥ ಮತ್ತು ಅವನು ಪ್ರಾಧ್ಯಾಪಕನಾಗಿರದಿದ್ದರೆ, ಕುಲಾಧಿಪತಿಯು ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕ ಮತ್ತು ರಾಜ್ಯದೊಳಗಿನ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಂಥ ಪ್ರಾಧ್ಯಾಪಕನು ಲಭ್ಯವಾಗದೇ ಇದ್ದರೆ, ರಾಜ್ಯದೊಳಗಿನ ಕೇಂದ್ರ ಸಂಸ್ಥೆಯ ಅಥವಾ ಯಾವುದೇ ಇತರ ರಾಜ್ಯದ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಇಲಾಖೆಯಿಂದ ಕುಲಾಧಿಪತಿಯು ನಾಮನಿರ್ದೇಶಿಸಿದಂಥ ಪ್ರಾಧ್ಯಾಪಕ

(iv) ಸಂಬಂಧಪಟ್ಟ ವಿಭಾಗದ ಮುಖ್ಯಸ್ಥನು ಪ್ರಾಧ್ಯಾಪಕನಾಗಿಲ್ಲದಿದ್ದರೆ ಕುಲಾಧಿಪತಿಯು ನಾಮನಿರ್ದೇಶಿಸಿದ ರಾಜ್ಯದ ಯಾವುದೇ ಇತರ ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕ ;

—ಇವರನ್ನು ಒಳಗೊಂಡಿರತಕ್ಕುದು.

(೩) ಕುಲಸಚಿವನು ನೇಮಕಾತಿ ಮಂಡಲಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕುದು.

(೪) ಆಯ್ಕೆಯ ಮೂಲಕ ಭರ್ತಿ ಮಾಡಬೇಕಾದ ಪ್ರಾಧ್ಯಾಪಕ, ಗ್ರಂಥಪಾಲಕ ರೀಡರ್ ಅಥವಾ ಉಪನ್ಯಾಸಕರ ಪ್ರತಿಯೊಂದು ಹುದ್ದೆಯನ್ನು, ಅಗತ್ಯವಿರುವ ಕನಿಷ್ಠ ಮತ್ತು ಇತರ ವಿದ್ಯಾರ್ಹತೆಗಳು, ಯಾವುದಾದರೂ ಇದ್ದರೆ, ಉಪಲಬ್ಧಿಗಳು ಮತ್ತು ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ, ಇವುಗಳೊಂದಿಗೆ ಕ್ರಮಬದ್ಧವಾಗಿ ಮತ್ತು ವ್ಯಾಪಕವಾಗಿ ಜಾಹೀರಾತು ಮಾಡತಕ್ಕುದು ಮತ್ತು ಅರ್ಜಿದಾರರು ಯಾವ ಕಾಲದೊಳಗೆ ಅರ್ಜಿಯನ್ನು ಹಾಕಿಕೊಳ್ಳಬಹುದೋ, ಆ ಯುಕ್ತ ಕಾಲಾವಕಾಶವನ್ನು ಕೊಡತಕ್ಕುದು.

(೫) ನೇಮಕಾತಿ ಮಂಡಲಿಯ ಸಭೆಗೆ ಕೋರಂ ನಾಲ್ಕು ಆಗಿರತಕ್ಕುದು, ಅವರ ಪೈಕಿ, ಪ್ರಾಧ್ಯಾಪಕರುಗಳ ಮತ್ತು ಗ್ರಂಥಪಾಲಕನ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ

ಕನಿಷ್ಠ ಪಕ್ಷ ಇಬ್ಬರು ತಜ್ಞರಿರತಕ್ಕದ್ದು ಮತ್ತು ಇತರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕನಿಷ್ಠ ಪಕ್ಷ ಒಬ್ಬ ತಜ್ಞ ಇರತಕ್ಕದ್ದು.

(೬) ಮಂಡಲಿಯು ಸಂದರ್ಶನವನ್ನು ನಡೆಸತಕ್ಕದ್ದು, ಜಾಹೀರಾತು ಮಾಡಿದ ಅರ್ಹತೆಗಳಿಗೆ ಅನುಸಾರವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಯೋಗ್ಯತೆಯನ್ನು ನಿರ್ಣಯಿಸತಕ್ಕದ್ದು ಮತ್ತು ಯೋಗ್ಯತೆಯ ಕ್ರಮದಲ್ಲಿ ಏರ್ಪಡಿಸಿದ ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು. ಅದು ಆ ಪಟ್ಟಿಯನ್ನು ಕುಲಾಧಿಪತಿಗೆ ಕಳುಹಿಸತಕ್ಕದ್ದು, ಅವನು ಅದಕ್ಕನುಸಾರವಾಗಿ ನೇಮಕಾತಿಗಳನ್ನು ಮಾಡತಕ್ಕದ್ದು.

ವಿವರಣೆ.—ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಕುಲಾಧಿಪತಿಯು, ಆ ಪಟ್ಟಿಯು ಅಂಥ ನೇಮಕಾತಿಗಳಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮ ಅಥವಾ ಪರಿನಿಯಮಗಳ ಉಪಬಂಧಗಳನ್ನು ಸಮಾಧಾನಪಡಿಸುವುದಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು ಅದಕ್ಕನುಸಾರವಾಗಿ ನೇಮಕಾತಿಗಳನ್ನು ಮಾಡಲು ಆಗತ್ಯಪಡಿಸುವುದೆಂದು ಅರ್ಥೈಸತಕ್ಕದಲ್ಲ.

(೭) (೬)ನೇ ಉಪ-ಪ್ರಕರಣದ ಮೇರೆಗೆ ಪಟ್ಟಿಯನ್ನು ತಯಾರಿಸುವಾಗ ಮಂಡಲಿಯು, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ನಾಗರೀಕರ ಇತರ ಹಿಂದುಳಿದ ವರ್ಗಗಳಿಗೆ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಹುದ್ದೆಗಳನ್ನು ಮೀಸಲಿರಿಸುವ ವಿಷಯದಲ್ಲಿ, ಹೊರಡಿಸಿದ ಆದೇಶಗಳನ್ನು ಅನುಸರಿಸತಕ್ಕದ್ದು.

(೮) (೭)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಯಾವುದೇ ಆಯ್ಕೆಯಲ್ಲಿ, ಮಂಡಲಿಯ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಗಳು ನಿಯಮಿಸಲಾದ ಕನಿಷ್ಠ ಅರ್ಹತೆಗಿಂತ ಸ್ವಲ್ಪ ಹೆಚ್ಚಿನ ಯೋಗ್ಯತೆಯನ್ನು ಪಡೆದಿದ್ದರೆ ಮತ್ತು ತಕ್ಕವರಾಗಿದ್ದರೆ ಅವರಿಗೆ ಪ್ರಾಶಸ್ತ್ಯ ಕೊಡತಕ್ಕದ್ದು.

(೯) ಈ ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಸ್ನಾತಕಪೂರ್ವ ಕಾಲೇಜುಗಳ ಪ್ರಾಧ್ಯಾಪಕರುಗಳ ಮತ್ತು ರೀಡರುಗಳ ಹುದ್ದೆಗಳಿಗೆ ನೇಮಕಾತಿಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಪ್ರಾಧಿಕಾರವು ಅನುಕ್ರಮವಾಗಿ ರೀಡರುಗಳು ಮತ್ತು ಉಪನ್ಯಾಸಕರುಗಳಿಂದ ಜೇಷ್ಠತೆ ಹಾಗೂ ಯೋಗ್ಯತೆಯ ಆಧಾರದ ಮೇಲೆ ಬಡ್ತಿಯ ಮೂಲಕ ಮಾಡತಕ್ಕದ್ದು:

ಪರಂತು, ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗಲೆಲ್ಲಾ ಅಂಥ ಹೊಸ ವಿಷಯದಲ್ಲಿ ಪ್ರಾಧ್ಯಾಪಕರು, ರೀಡರು, ಮತ್ತು ಉಪನ್ಯಾಸಕರುಗಳ ನೇಮಕಾತಿಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮಾಡತಕ್ಕದ್ದು.

೫೦. ಇತರ ಅಲಿಪಿಕ ಸಿಬ್ಬಂದಿ ನೇಮಕಾತಿ :- (೧) ವಿಶ್ವವಿದ್ಯಾಲಯದಲ್ಲಿ, ಲಿಪಿಕ ಹುದ್ದೆಯನ್ನು ಹೊರತುಪಡಿಸಿ, ಉಳಿದ ಬೋಧನೇತರ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಒಂದು ನೇಮಕಾತಿ ಮಂಡಲಿಯು ರಚಿತವಾಗತಕ್ಕದ್ದು.

(೨) ಮಂಡಲಿಯು ಇವರನ್ನು ಒಳಗೊಂಡಿರತಕ್ಕದು.

(i) ಕುಲಪತಿ ಪದನಿಮಿತ್ತ ಅಧ್ಯಕ್ಷ;

(ii) ಕುಲಸಚಿವ ;

(iii) ಯಾವ ವಿಭಾಗಕ್ಕೆ ನೌಕರಿ ಭರ್ತಿ ಮಾಡಲಾಗಿತ್ತೋ, ಆ ವಿಭಾಗದ ಕೆಲಸದ ಮೇಲ್ವಿಚಾರಣೆ ಮಾಡುತ್ತಿರುವ, ನಾಮನಿರ್ದೇಶಿತವಾದ, ಒಬ್ಬ ವ್ಯಕ್ತಿ ಮತ್ತು ಅಲ್ಲಿ ಅಂಥ ವ್ಯಕ್ತಿಯು ಇಲ್ಲದಿದ್ದಲ್ಲಿ, ಸಂಬಂಧಪಟ್ಟ ವಿಭಾಗದ ಮುಖ್ಯಸ್ಥ;

(iv) ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು, ಅವರ ಪೈಕಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ವ್ಯಕ್ತಿಯಾಗಿರತಕ್ಕದು ಮತ್ತು ಇನ್ನೊಬ್ಬನು, ರಾಜ್ಯಸರ್ಕಾರವು ಯಾವುದೇ ಸಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನಾಗರೀಕರ ವರ್ಗಗಳಿಗೆ ಸೇರಿದಂಥಾದೆಂದು ಘೋಷಿಸಿದ್ದ ವರ್ಗಗಳಿಗೆ ಅಥವಾ ಭಾಷಾವಾರು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿಯಾಗಿರತಕ್ಕದು.

(೨ಕ) ಮಂಡಲಿಯು ಸಭೆಗೆ ಕೋರಂ ನಾಲ್ಕು ಇರತಕ್ಕದು.

(೩) ಪರಿನಿಯಮಗಳಿಗನುಸಾರವಾಗಿ ನೇರ ನೌಕರಿ ಭರ್ತಿ ಮೂಲಕ ತುಂಬತಕ್ಕಂಥ ಹುದ್ದೆಗಳನ್ನು ಮಂಡಲಿಯು ಆಯ್ಕೆ ಮಾಡಿದವರಿಂದ, ಮಂಡಲಿಯು ತಯಾರಿಸಿದ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಯಾವ ಕ್ರಮದಲ್ಲಿ ಏರ್ಪಡಿಸಿದೆಯೋ, ಆ ಹುದ್ದೆಗಳಿಗೆ ಭರ್ತಿ ಮಾಡತಕ್ಕದು. ಹುದ್ದೆಗಳಿಗೆ ಬಡ್ತಿಯ ಮೂಲಕ ನೇಮಕಾತಿಯನ್ನು ಮಂಡಲಿಯೊಡನೆ ಸಮಾಲೋಚಿಸಿದ ತರುವಾಯ ಮಾಡತಕ್ಕದು.

(೪) ನೇರ ನೌಕರಿ ಭರ್ತಿ ಖಾಲಿ ಸ್ಥಾನಗಳಿಗೆ ನೇಮಕಾತಿಗಾಗಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ, ಮಂಡಲಿಯು ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳ ಮತ್ತು ನಾಗರೀಕರ ಇತರ ಹಿಂದುಳಿದ ವರ್ಗಗಳಿಗೆ ಹುದ್ದೆಗಳನ್ನು ಮೀಸಲಿರಿಸುವುದಕ್ಕಾಗಿ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದು.

(೫) ಎಲ್ಲಾ ನೇಮಕಾತಿಗಳನ್ನು ಕುಲಾಧಿಪತಿಯು ಮಾಡತಕ್ಕದು:

ಪರಂತು, ಯಾವ ಹುದ್ದೆಗಳ ಗರಿಷ್ಠ ವೇತನ ಶ್ರೇಣಿಯು ಒಂದು ಸಾವಿರದ ಐದುನೂರು ತೊಂಬತ್ತೊಂಬತ್ತು ರೂಪಾಯಿಗಳನ್ನು ಮೀರುವುದಿಲ್ಲವೋ, ಆ ಹುದ್ದೆಗಳ ನೇಮಕಾತಿಯನ್ನು ಕುಲಪತಿ ಮಾಡತಕ್ಕದು.

೫೧. **ಲಿಪಿಕ ಸಿಬ್ಬಂದಿಯ ನೇಮಕಾತಿ** :—(೧) ವಿಶ್ವವಿದ್ಯಾನಿಲಯದ ಕೋರಿಕೆಯ ಮೇಲೆ, ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯಿಂದ, ಕುಲಪತಿಯು ವಿಶ್ವವಿದ್ಯಾನಿಲಯದಲ್ಲಿನ ಲಿಪಿಕ ಹುದ್ದೆಗಳಿಗೆ ನೇಮಕಾತಿ ಮಾಡತಕ್ಕದು.

(೨) ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಲೋಕಸೇವಾ ಆಯೋಗವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಮತ್ತು ನಾಗರೀಕರು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಇತರ ಹಿಂದುಳಿದ ವರ್ಗಗಳಿಗೆ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(೩) ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಡೆವಳಿಕೆ ಮತ್ತು ಹೆಚ್ಚಿನ ಪ್ರಕಾರ್ಯಗಳ) ಅಧಿನಿಯಮ, ೧೯೫೯ (ಕರ್ನಾಟಕ ಅಧಿನಿಯಮ, ೧೯೫೯ರ ಸಂಖ್ಯೆ ೨೦)ರಲ್ಲಿ ಏನೇ ಇದ್ದಾಗ್ಯೂ, ಅಭ್ಯರ್ಥಿಗಳ ಆಯ್ಕೆ ಮತ್ತು ಪಟ್ಟಿಯನ್ನು ತಯಾರಿಸುವುದು ಹಾಗೂ ಕಳುಹಿಸಿ ಕೊಡುವುದು, ಕರ್ನಾಟಕ ಲೋಕಸೇವಾ ಆಯೋಗಕ್ಕೆ ವಹಿಸಲಾದ ಒಂದು ಹೆಚ್ಚಿನ ಪ್ರಕಾರ್ಯವಾಗಿರತಕ್ಕದ್ದು.

(೪) ಈ ಹಿಂದಿನ ಉಪಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ರಾಜ್ಯ ಸಿವಿಲ್ ಸೇವೆಗಳ ೪ನೇ ದರ್ಜೆಗೆ ಸಮನಾದ ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳಿಗೆ ನೇಮಕಾತಿಗಳನ್ನು ಈ ಉದ್ದೇಶಕ್ಕಾಗಿ ರಚಿಸಲಾದ ಪರಿನಿಯಮಗಳಿಗೆ ಅನುಸಾರವಾಗಿ, ಕುಲಪತಿಯು ಮಾಡತಕ್ಕದ್ದು.

**೫೧ಕ. ಅಂಶಕಾಲಿಕ ಹುದ್ದೆಗಳಿಗೆ ನೇಮಕಾತಿ:**—(೧) ವಿಶ್ವವಿದ್ಯಾನಿಲಯಕ್ಕೆ ಅಂಶಕಾಲಿಕ ಉಪನ್ಯಾಸಕರು, ಸಹಾಯಕ ಪ್ರಾಧ್ಯಾಪಕರು, ರೀಡರು ಮತ್ತು ಪ್ರಾಧ್ಯಾಪಕರುಗಳ ನೇಮಕಾತಿಗೆ ಆಯ್ಕೆ ಮಾಡಲು ಒಂದು ನೇಮಕಾತಿ ಮಂಡಲಿಯು ಇರತಕ್ಕದ್ದು.

(೨) ಈ ಮಂಡಲಿಯು,—

(i) ಕುಲಪತಿ ಪದನಿಮಿತ್ತ ಅಧ್ಯಕ್ಷ ;

(ii) ಕುಲಾಧಿಪತಿಯು ನಾಮನಿರ್ದೇಶನ ಮಾಡಿದ ಇಬ್ಬರು ತಜ್ಞರು ;

(iii) ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥ ;

(iv) ಶಿಕ್ಷಣ ಇಲಾಖೆಯಲ್ಲಿನ ಕರ್ನಾಟಕ ಸರ್ಕಾರದ ಕಾರ್ಯದರ್ಶಿ ಅಥವಾ ಅವನಿಂದ ನಾಮನಿರ್ದೇಶಿತನಾದ ವ್ಯಕ್ತಿ ;

—ಇವರನ್ನು ಒಳಗೊಂಡಿರುತ್ತದೆ:

ಪರಂತು, ಕಾನೂನು ಕಾಲೇಜಿನಲ್ಲಿ ಯಾವುದೇ ಹುದ್ದೆಗೆ, ನೇಮಕಾತಿಗಾಗಿ ಇಬ್ಬರು ತಜ್ಞರು ಕರ್ನಾಟಕದ ಅಡ್ವೊಕೇಟ್ ಜನರಲ್ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿನ ಕರ್ನಾಟಕ ಸರ್ಕಾರದ ಕಾರ್ಯದರ್ಶಿ ಇವರುಗಳಾಗಿರತಕ್ಕದ್ದು.

(೩) ಕುಲಸಚಿವನು ಮಂಡಲಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು

(೪) ಪ್ರತಿಯೊಂದು ಅಂಶಕಾಲಿಕ ಹುದ್ದೆಯನ್ನು ಕ್ರಮಬದ್ಧವಾಗಿ ಮತ್ತು ವ್ಯಾಪಕವಾಗಿ ಅಗತ್ಯ ವಿವರಗಳೊಂದಿಗೆ ಜಾಹೀರಾತು ಮಾಡತಕ್ಕದ್ದು ಮತ್ತು ಅಭ್ಯರ್ಥಿಗಳನ್ನು ಸಂದರ್ಶಿಸಿದ ತರುವಾಯ ಆಯ್ಕೆಯ ಮೂಲಕ ಭರ್ತಿ ಮಾಡತಕ್ಕದ್ದು:

ಪರಂತು, ಮಂಡಲಿಯು ಅಂಥ ಜಾಹೀರಾತು ಮತ್ತು ಸಂದರ್ಶನವಿಲ್ಲದೆ ಯಾವುದೇ ಹುದ್ದೆಯನ್ನು ಭರ್ತಿ ಮಾಡಲು ಆ ಕ್ಷೇತ್ರದಲ್ಲಿನ ಸುಪ್ರಸಿದ್ಧ ವ್ಯಕ್ತಿಯನ್ನು ಆಹ್ವಾನಿಸಬಹುದು. ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಅಂಶಕಾಲಿಕ ನೇಮಕಾತಿಯನ್ನು ಮಾಡತಕ್ಕುದಲ್ಲ.

(೫) ಮಂಡಲಿಯ ಸಭೆಗಾಗಿ ಕೋರಂ ಮೂರು ಆಗಿರತಕ್ಕುದು.

(೬) ಮಂಡಲಿಯು ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಪಟ್ಟಿಯನ್ನು ಸಿಂಡಿಕೇಟಿಗೆ ಕಳುಹಿಸತಕ್ಕುದು. ಅದು ನೇಮಕಾತಿ ಮಾಡತಕ್ಕುದು.

೫೧ಖ. ತಾತ್ಕಾಲಿಕ ನೇಮಕಾತಿ.—(೧) ೪೯, ೫೦, ೫೧ ಮತ್ತು ೫೧-ಕ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ಕುಲಪತಿಯು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬೋಧನೇತರ ಸಿಬ್ಬಂದಿ ಮತ್ತು ಉಪನ್ಯಾಸಕರ ಹುದ್ದೆಗಳಿಗೆ ಆರು ತಿಂಗಳಿಗೆ ಹೆಚ್ಚಾಗದಂತೆ ಅವಧಿಗೆ ತಾತ್ಕಾಲಿಕ ನೇಮಕಾತಿಗಳನ್ನು ಮಾಡಬಹುದು :

ಪರಂತು, ಅಂಥ ಹುದ್ದೆಗಳು ತಾತ್ಕಾಲಿಕವಾಗಿರಬೇಕು ಅಥವಾ ಅಂಥ ಹುದ್ದೆಗಳಿಗೆ ೪೯, ೫೦, ೫೧ ಮತ್ತು ೫೧ಕ ಪ್ರಕರಣಗಳಿಗನುಸಾರವಾಗಿ ವಿಳಂಬವಿಲ್ಲದೆ ನೇಮಕಾತಿ ಮಾಡಲಾಗದಂತಿರಬೇಕು.

(೨) ಪರಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ (೧)ನೇ ಉಪಪ್ರಕರಣದ ಮೇರೆಗೆ ನೇಮಕಾತಿಗಳನ್ನು ಮಾಡತಕ್ಕುದು.

೫೧ಗ. ಅನುಸೂಚಿತ ಜಾತಿ ಮೊದಲಾದವರಿಗೆ ಬಡ್ತಿಗಾಗಿ ಖಾಲಿ ಸ್ಥಾನಗಳ ಮೀಸಲಿಡುವಿಕೆ :—ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಹುದ್ದೆಗೆ ಬಡ್ತಿಯ ಮೂಲಕ ನೇಮಕಾತಿ ಮಾಡುವಲ್ಲಿ, ಅಂಥ ನೇಮಕಾತಿಯನ್ನು ಮಾಡಲು ಅಧಿಕಾರವನ್ನು ಹೊಂದಿದ ಪ್ರಾಧಿಕಾರವು, ಅನುಸೂಚಿತ ಜಾತಿಗಳು, ಮತ್ತು ಅನುಸೂಚಿತ ಬುಡಕಟ್ಟುಗಳು ಮತ್ತು ನಾಗರೀಕರಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಇತರ ಹಿಂದುಳಿದ ವರ್ಗಗಳಿಗೆ ಬಡ್ತಿಯ ಖಾಲಿ ಸ್ಥಾನಗಳಲ್ಲಿ ಹುದ್ದೆಗಳ ಮೀಸಲಾತಿಗಾಗಿ ಕಾಲಕಾಲಕ್ಕೆ, ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕುದು.

೫೨. ನಿಯೋಜಿತರ ವರ್ಗಾವಣೆಗಳು :—ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕರಾರು, ಒಪ್ಪಂದ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದಾಗ್ಯೂ ಕುಲಾಧಿಪತಿಯು, ಆಡಳಿತಾತ್ಮಕ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ಯಾವುದೇ ಇತರ ವಿಶ್ವವಿದ್ಯಾನಿಲಯಕ್ಕೆ, ವರ್ಗಾಯಿಸಬಹುದು ಮತ್ತು ಹಾಗೆ ವರ್ಗಾಯಿತನಾದ ವ್ಯಕ್ತಿಯು ಯಾವ ವಿಶ್ವವಿದ್ಯಾನಿಲಯಕ್ಕೆ ಅವನನ್ನು ವರ್ಗಾಯಿಸಲಾಗಿದೆಯೋ ಆ

ವಿಶ್ವವಿದ್ಯಾನಿಲಯಕ್ಕೆ, ವರ್ಗಾವಣೆಯು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳನ್ನು ತನ್ನೊಡನೆಯೇ ಒಯ್ಯತಕ್ಕದ್ದು. ವರ್ಗಾವಣೆಯಾದ ಮೇಲೆ ಅಂಥ ವ್ಯಕ್ತಿಯು ಆ ಬೇರೆ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡಿದ್ದು ವುದಾಗಿ ಭಾವಿಸತಕ್ಕದ್ದು. ಈ ಪ್ರಕರಣದ ಮೇರೆಗೆ ವರ್ಗಾವಣೆಗಳ ಆದೇಶವನ್ನು ಕೊಡುವ ಉದ್ದೇಶಗಳಿಗಾಗಿ ಕುಲಾಧಿಪತಿಯು ವರ್ಗಾವಣೆಯಾದ ವ್ಯಕ್ತಿಗಳು ಧಾರಣೆ ಮಾಡಿದ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರ ಎಂದು ಭಾವಿಸತಕ್ಕದ್ದು.

## ಅಧ್ಯಾಯ IX

### ಕಾಲೇಜುಗಳ ಸಂಲಗ್ನತೆ ಮತ್ತು ಸಂಸ್ಥೆಗಳಿಗೆ ಮನ್ನಣೆ

೫೩. ಕಾಲೇಜುಗಳ ಸಂಲಗ್ನತೆ :—(೧) ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ಮೇಲೆ, ಸಂಲಗ್ನಗೊಂಡ ಕಾಲೇಜುಗಳಾಗಿ, ರಾಜ್ಯ ಸರ್ಕಾರವು ವಿಶ್ವವಿದ್ಯಾನಿಲಯಕ್ಕೆ ಸಂಲಗ್ನ ಗೊಳಿಸಬಹುದು.

(೨) ವಿಶ್ವವಿದ್ಯಾನಿಲಯಕ್ಕೆ ಸಂಲಗ್ನತೆಗಾಗಿ ಅರ್ಜಿ ಸಲ್ಲಿಸುವ ಕಾಲೇಜು, ಕುಲಸಚಿವರಿಗೆ, ಅರ್ಜಿ ಅಧ್ಯಾದೇಶಗಳ ಮೂಲಕ ನಿಗದಿಪಡಿಸಿದ ಕಾಲ ಪರಿಮಿತಿಯೊಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು ಮತ್ತು ಈ ಮುಂದಿನ ಸಿಂಡಿಕೇಟ್ ಮತ್ತು ವಿದ್ಯಾ ವಿಷಯಕ ಪರಿಷತ್ತುಗಳಿಗೆ—

(ಕ) ಆ ಕಾಲೇಜು, ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆ ಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ, ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯನ್ನೂ, ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆಂದು;

(ಖ) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಲಿಯ ನಿರ್ವಹಣೆಗೆ ಒಳಪಟ್ಟಿರಬೇಕೆಂದು ;

(ಗ) ಬೋಧಕ ಸಿಬ್ಬಂದಿಯ ಸಂಖ್ಯಾಬಲ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವುದು ಷರತ್ತುಗಳು ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥಾದ್ದಾಗಿದೆ ಎಂದು;

(ಘ) ಯಾವ ಕಟ್ಟಡಗಳಲ್ಲಿ ಆ ಕಾಲೇಜು ಇರಬೇಕಾಗಿದೆಯೋ ಆ ಕಟ್ಟಡಗಳು ಸೂಕ್ತವಾಗಿವೆ ಎಂದು ಮತ್ತು ಅವರ ತಂದೆ ತಾಯಿಗಳ ಅಥವಾ ಪಾಲಕರೊಡನೆ ವಾಸವಾಗಿರದ

ಇರುವ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಮತ್ತು ಮೇಲ್ವಿಚಾರಣೆ ಮತ್ತು ಕಲ್ಯಾಣಕ್ಕಾಗಿ, ಅಧ್ಯಾದೇಶಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದೆಂದು ;

(ಙ) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿದೆ ಅಥವಾ ಮಾಡಲಾಗುವುದೆಂದು ;

(ಚ) ಪ್ರಾಯೋಗಿಕ ವಿಜ್ಞಾನದ, ಯಾವುದೇ ಶಾಖೆಯಲ್ಲಿ ಸಂಲಗ್ನತೆಯನ್ನು ಕೋರಿರುವಲ್ಲಿ, ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯಂದಲ್ಲಿ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮನಗಳಿಗೆ ಅನುಗುಣವಾಗಿ ವ್ಯವಸ್ಥೆಗಳನ್ನು ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಮಾಡಲಾಗಿದೆ ಅಥವಾ ಮಾಡಲಾಗುವುದೆಂದು ;

(ಛ) ಪ್ರಾಂಶುಪಾಲನ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ನಿವಾಸಕ್ಕಾಗಿ ಕಾಲೇಜಿನಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಅಥವಾ ಅದರ ಹತ್ತಿರ, ಸಂದರ್ಭಗಳು ಅನುಮತಿಸುವಷ್ಟರ ಮಟ್ಟಿಗೆ ತಕ್ಕ ವಸತಿಗಾಗಿ ಏರ್ಪಾಟು ಮಾಡಲಾಗುವುದೆಂದು ;

(ಜ) ಆ ಕಾಲೇಜಿನ ಹಣಕಾಸು ಸಂಪನ್ಮೂಲಗಳು ಅದರ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಂಥಹುದು ಆಗಿವೆ ಎಂದು; ಮತ್ತು

(ಝ) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು (ಏನಾದರೂ ಇದ್ದರೆ) ಅದನ್ನು ನಿಗದಿ ಮಾಡುವ ನಿಯಮಗಳನ್ನು ರಚಿಸಲಾಗಿದೆ ಅಥವಾ ರಚಿಸಲಾಗುತ್ತದೆ ಎಂದು ಮನದಟ್ಟು ಮಾಡಿಕೊಡತಕ್ಕದು.

(3) ಕಾಲೇಜು ಸಂಲಗ್ನಗೊಂಡ ತರುವಾಯ ವ್ಯವಸ್ಥಾಪನೆಯ ಯಾವುದೇ ವರ್ಗಾವಣೆ ಮತ್ತು ಬೋಧಕ ಸಿಬ್ಬಂದಿಯಲ್ಲಿನ ಎಲ್ಲ ಬದಲಾವಣೆಗಳು ಮತ್ತು ಈ ಹಿಂದೆ ಹೇಳಿದ ಯಾವುದೇ ಅಗತ್ಯತೆಗಳನ್ನು ಪೂರೈಸದಿರುವಾಗ ಅಥವಾ ಪೂರೈಸಂತಿರುವುದು ಮುಂದುವರೆಯುತ್ತಿರುವ ಕಾರಣದಿಂದಾಗಿನ ಎಲ್ಲಾ ಇತರ ಬದಲಾವಣೆಗಳನ್ನೂ ಸಿಂಡಿಕೇಟಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿರಬಹುದಾದಂಥ ಪ್ರಾಧಿಕಾರಕ್ಕೆ ತತ್‌ಕ್ಷಣ ವರದಿ ಮಾಡುವುದಾಗಿ ಭರವಸೆಯನ್ನು ಸಹ ಅರ್ಜಿಯು ಒಳಗೊಂಡಿರತಕ್ಕದು.

(4) (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯ ಪತ್ರವನ್ನು ಸ್ವೀಕರಿಸಿದ ಮೇಲೆ, ಸಿಂಡಿಕೇಟು.—

(ಕ) ಅವಶ್ಯ ಮತ್ತು ಸಂಸಂಗತವೆಂದು ಅದು ಭಾವಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿದಂತೆ, ಈ ಬಗ್ಗೆ ಸಿಂಡಿಕೇಟಿನಿಂದ ಅಧಿಕೃತನಾದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಳೀಯ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸತಕ್ಕದು.

(ಖ) ಅದಕ್ಕೆ ಅವಶ್ಯವೆಂದು ತೋರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡ ತಕ್ಕದ್ದು; ಮತ್ತು

(ಗ) (ಕ) ಮತ್ತು (ಖ) ಖಂಡಗಳ ಮೇರೆಗೆ ಯಾವುದೇ ವಿಚಾರಣೆಯ ಫಲಿತಾಂಶ ವನ್ನು ನಿರೂಪಿಸಿ, ಅರ್ಜಿಯನ್ನು ಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃ ವಾಗಿಯೆ ಆಗಲಿ ಮಂಜೂರು ಮಾಡಬೇಕೆ ಅಥವಾ ತಿರಸ್ಕರಿಸಬೇಕೆ ಎಂಬ ಪ್ರಶ್ನೆಯ ಮೇಲೆ ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ ತನ್ನ ಅಭಿಪ್ರಾಯವನ್ನು ಅಭಿಲೇಖಿಸ ತಕ್ಕದ್ದು.

(೫) ಕುಲಸಚಿವರು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಕಾಲ ದೊಳಗೆ ಅರ್ಜಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯಾ ವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ವ್ಯವಹರಣೆಗಳು ಏನಾದರೂ ಇದ್ದರೆ, ಅವುಗಳೆಲ್ಲವನ್ನೂ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು, ಅದು ತನಗೆ ಅವಶ್ಯವೆಂದು ತೋರಬಹುದಾದಂಥ ವಿಚಾರಣೆಯ ತರುವಾಯ ಆ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡ ತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು.

(೬) ಅರ್ಜಿ ಅಥವಾ ಅದರ ಯಾವುದೇ ಭಾಗವು ಮಂಜೂರಾದಲ್ಲಿ ರಾಜ್ಯ ಸರ್ಕಾರದ ಆದೇಶವು, ಯಾವ ಶಿಕ್ಷಣದ ವ್ಯಾಸಂಗ ಕ್ರಮಗಳನ್ನು ಮತ್ತು ಯಾವ ಅವಧಿಗೆ ಕಾಲೇಜು ಸಂಲಗ್ನಗೊಂಡಿದೆಯೋ, ಅವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅರ್ಜಿ ಅಥವಾ ಅದರ ಯಾವುದೇ ಭಾಗವನ್ನು ತಿರಸ್ಕರಿಸಿದಲ್ಲಿ ಅಂಥ ತಿರಸ್ಕಾರದ ಬಗ್ಗೆ ಕಾರಣಗಳನ್ನು ನಿರೂಪಿಸತಕ್ಕದ್ದು :

1 ಪರಂತು, ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಲಗ್ನಗೊಂಡಿ ರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿಯಮಿಸಿದ ಸಂಲಗ್ನತೆಯ ಎಲ್ಲ ಷರತ್ತು ಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯಕ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜಿಗೆ ವಿಶ್ವವಿದ್ಯಾನಿಲಯದ ಶಿಫಾರಸಿನ ಮೇಲೆ ಖಾಯಂ ಸಂಲಗ್ನತೆ ಯನ್ನು ಮಂಜೂರು ಮಾಡಬಹುದು.

(೭) ರಾಜ್ಯ ಸರ್ಕಾರವು ತನ್ನ ಆದೇಶವನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಕುಲ ಸಚಿವನು ಅರ್ಜಿಗೆ ಸಂಬಂಧಿಸಿದಂತೆ ಪೂರ್ಣ ವರದಿ (೪) ಮತ್ತು (೬)ನೇ ಉಪಪ್ರಕರಣಗಳ ಮೇರೆಗೆ ಅದರ ಮೇಲೆ ತೆಗೆದುಕೊಂಡ ಕ್ರಮ ಮತ್ತು ಅವಕ್ಕೆ ಸಂಬಂಧ ಪಟ್ಟ ಎಲ್ಲ ವ್ಯವಹರಣೆಗಳನ್ನು ಸನೆಟಿಗೆ ಒಪ್ಪಿಸತಕ್ಕದ್ದು.

(೮) (೧)ನೆಯ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು (೫)ನೆಯ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮೊದಲು, ಯಾವುದೇ ಕಾಲದಲ್ಲಿ ಹಿಂತೆಗೆದುಕೊಳ್ಳ ಬಹುದು.

(೯) ಯಾವ ಶಿಕ್ಷಣದ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದಂತೆ ಕಾಲೇಜು ಸಂಲಗ್ನತೆ ಗೊಂಡಿದೆಯೋ ಆ ವ್ಯಾಸಂಗ ಕ್ರಮಗಳಿಗೆ ಹೆಚ್ಚಾಗಿ ಸೇರಿಸಲು ಇಚ್ಛಿಸಿದಲ್ಲಿ, (೨) ರಿಂದ (೮) ನೆಯ ಉಪಪ್ರಕರಣಗಳಲ್ಲಿ ನಿಯಮಿಸಲಾದ ಪ್ರಕ್ರಿಯೆಯನ್ನು ಸಾಧ್ಯವಾಗಬಹು ದಾದಷ್ಟು ಮಟ್ಟಿಗೆ ಅನುಸರಿತಕ್ಕದು.

೩೪. ಕೆಲವು ಸಂಸ್ಥೆಗಳಿಗೆ ಮನ್ನಣೆ :—(೧) ಸಂಶೋಧನೆ ಅಥವಾ ನಿರ್ದಿಷ್ಟಪಡಿ ಸಿದ ಅಧ್ಯಯನಗಳನ್ನು ನಡೆಸುವ ಕಾಲೇಜನ್ನು ಹೊರತಂಪಡಿಸಿ ವಿಶ್ವವಿದ್ಯಾನಿಲಯ ಪ್ರದೇಶದ 2 ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಸಿಂಡಿಕೇಟು ಮನ್ನಣೆ ಪಡೆದ ಸಂಸ್ಥೆಯೆಂದು ಮನ್ನಣೆ ಕೊಡಬಹುದು.

(೨) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾರಣಗಳಿಗಾಗಿ, ಅಂಥ ಮನ್ನಣೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃ ವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

೩೫. ಕಾಲೇಜುಗಳ ಪರಿಶೀಲನೆ ಮತ್ತು ವರದಿಗಳು :—(೧) ಸಂಲಗ್ನಗೊಂಡ ಪ್ರತಿಯೊಂದು ಕಾಲೇಜು, ಸಿಂಡಿಕೇಟು ವಿದ್ಯಾ ವಿಷಯ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ನಿರ್ಣಯಿಸುವು ದಕ್ಕೆ, ಸಾಧ್ಯವಾಗುವಂತೆ ಅಗತ್ಯವಾಗಬಹುದಾದಂಥ ವರದಿಗಳನ್ನು ವಿವರ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವನಿಗೆ ಒದಗಿಸತಕ್ಕದು.

(೨) ಸಿಂಡಿಕೇಟು ಅಂಥ ಪ್ರತಿಯೊಂದು ಕಾಲೇಜನ್ನು ಈ ಬಗ್ಗೆ ತನ್ನಿಂದ ಅಧಿಕೃತ ನಾದ ಒಬ್ಬ ಅಥವಾ ಹೆಚ್ಚು ಸಕ್ಷಮ ವ್ಯಕ್ತಿಗಳಿಂದ ಕಾಲಕಾಲಕ್ಕೆ ಪರಿಶೀಲನೆ ನಡೆಸುವಂತೆ ಮಾಡತಕ್ಕದು.

(೩) ಸಿಂಡಿಕೇಟು, ಹಾಗೆ ಪರಿಶೀಲಿಸಿದ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ೩೩ನೇ ಪ್ರಕರಣದ (೨)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮ ಕೈಗೊಳ್ಳಲು ಕೋರಬಹುದು.

೩೬. ಸಂಲಗ್ನತೆಯನ್ನು ಹಿಂತೆಗೆದುಕೊಳ್ಳುವುದು :—(೧) ೩೩ನೇ ಪ್ರಕರಣದ (೨೦)ನೇ ಉಪಪ್ರಕರಣದ ಯಾವುವೇ ಉಪಬಂಧಗಳನ್ನು ಪಾಲಿಸಲು ವಿಫಲಗೊಂಡರೆ ಸಂಲಗ್ನತೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಆ ಕಾಲೇಜು, ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಲಗ್ನತೆಯ ಮೂಲಕ ಕಾಲೇಜಿಗೆ ಪ್ರದತ್ತವಾದ ಹಕ್ಕುಗಳನ್ನು ಪೂರ್ತಿ ಯಾಗಿ ಅಥವಾ ಭಾಗಶಃ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡ ಬಹುದು.

(೨) ಅಂಥ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ ಸಿಂಡಿಕೇಟ್‌ನಲ್ಲಿ ಮಾತ್ರ ಸೂಚನೆಯನ್ನು ಪ್ರಾರಂಭಿಸತಕ್ಕುದು. ಅಂಥ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಸಿಂಡಿಕೇಟ್‌ನ ಸದಸ್ಯನು ಅದರ ಬಗ್ಗೆ ನೋಟೀಸನ್ನು ಕೊಡತಕ್ಕುದು ಮತ್ತು ಯಾವ ಆಧಾರಗಳ ಮೇಲೆ ಅದನ್ನು ಮಾಡಲಾಗಿದೆಯೋ ಆ ಆಧಾರಗಳನ್ನು ಬರಹದಲ್ಲಿ ನಿರೂಪಿಸತಕ್ಕುದು.

(೩) ಸದರಿ ಸೂಚನೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು, ಸಿಂಡಿಕೇಟು ನೋಟೀಸಿನ ಒಂದು ಪ್ರತಿಯನ್ನು, ಮತ್ತು (೨)ನೆಯ ಉಪಪ್ರಕರಣದಲ್ಲಿ ಹೇಳಿದ ಬರಹದಲ್ಲಿನ ನಿರೂಪಣೆಯನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆ ಕಾಲೇಜಿನ ಪರವಾಗಿ ಬರಹದಲ್ಲಿ ಸಲ್ಲಿಸಿದ ಯಾವುದೇ ಮನವಿಯನ್ನು ಸಿಂಡಿಕೇಟು ಪರ್ಯಾಲೋಚಿಸುವುದು ಎಂಬ ತಿಳಿವಳಿಕೆಯೊಡನೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕುದು :

ಪರಂತು, ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು, ಅವಶ್ಯವಿದ್ದಲ್ಲಿ ಸಿಂಡಿಕೇಟ್ ವಿಸ್ತರಿಸಬಹುದು.

(೪) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ (೩)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅವಧಿಯು ಮುಗಿದ ಮೇಲೆ, ಸಿಂಡಿಕೇಟು ಸೂಚನೆಯ ನೋಟೀಸನ್ನು, ನಿರೂಪಣೆಯನ್ನು ಮತ್ತು ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಈ ಬಗ್ಗೆ ಅದರಿಂದ ಅಧಿಕೃತರಾದ ಯಾವನೇ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂಥ ಪರಿಶೀಲನೆಯನ್ನು ಮತ್ತು ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿದ ತರುವಾಯ ಸೆನೆಟಿಗೆ ವರದಿಯನ್ನು ಸಲ್ಲಿಸತಕ್ಕುದು.

(೫) (೪)ನೆಯ ಉಪಪ್ರಕರಣದ ಮೇರೆಗಿನ ವರದಿಯನ್ನು ಸ್ವೀಕರಿಸಿದ ಮೇಲೆ ಸೆನೆಟು ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರುವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಅಭಿಲೇಖಿಸತಕ್ಕುದು.

ಪರಂತು, ಸಂಲಗ್ನತೆಯನ್ನು ಹಿಂತೆಗೆದುಕೊಳ್ಳುವ, ಸೆನೆಟು ಶಿಫಾರಸು ಮಾಡಿದ ಯಾವುದೇ ನಿರ್ಣಯವು ಸೆನೆಟಿನ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲವನ್ನು ಪಡೆದಿರುವ ಹೊರತು ಮತ್ತು ಅಂಥ ಬಹುಮತವು ಸೆನೆಟಿನ ಸದಸ್ಯರ ಒಟ್ಟು ಸಂಖ್ಯೆಯ ಅರ್ಧಕ್ಕಿಂತ ಕಡಿಮೆ ಆಗಿರದ ಹೊರತು ಅದರಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕುದಲ್ಲ.

(೬) ಕುಲಸಚಿವನು ಪ್ರಸ್ತಾವನೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯಾವಿಷಯಕ ಪರಿಷತ್ತಿನ, ಸಿಂಡಿಕೇಟು ಮತ್ತು ಸೆನೆಟಿನ ವ್ಯವಹರಣೆಗಳೇನಾದರೂ ಇದ್ದರೆ, ಅವೆಲ್ಲವ

ಗಳನ್ನು, ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕುದು. ರಾಜ್ಯ ಸರ್ಕಾರವು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ, ಹೆಚ್ಚಿನ ವಿಚಾರಣೆ, ಯಾವುದಾದರೂ ಇದ್ದರೆ, ಅದನ್ನು ನಡೆಸಿದ ತರುವಾಯ ಸೂಕ್ತವೆಂದು ಭಾವಿಸುವ ಆದೇಶವನ್ನು ಮಾಡತಕ್ಕುದು.

(೭) (೬) ನೇಯ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದ ಮೂಲಕ, ಸಂಲಗ್ನತೆಯ ಮೂಲಕ ಪ್ರದತ್ತವಾದ ಹಕ್ಕುಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ. ಹಿಂತೆಗೆದುಕೊಳ್ಳಲಾಗಿದ್ದಲ್ಲಿ ಅಥವಾ ಮಾರ್ಪಾಟು ಮಾಡಿದ್ದಲ್ಲಿ, ಅಂಥ ಹಿಂತೆಗೆದು ಕೊಳ್ಳುವಿಕೆ ಅಥವಾ ಮಾರ್ಪಾಟಿನ ಬಗ್ಗೆ ಆಧಾರಗಳನ್ನು ಆದೇಶದಲ್ಲಿ ನಿರೂಪಿಸತಕ್ಕದ್ದು.

೫೬ಕ. ಸ್ವಾಯತ್ತ ಕಾಲೇಜು :—(೧) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿತವಾದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ವಿನಿಯಮನಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಿಶ್ವವಿದ್ಯಾನಿಲಯವು ರಾಜ್ಯ ಸರ್ಕಾರದ ಮತ್ತು ವಿಶ್ವವಿದ್ಯಾ ನಿಲಯದ ಅನುದಾನ ಆಯೋಗದ ಪೂರ್ವ ಸಹಮತಿ ಪಡೆದು ಸಂಲಗ್ನಗೊಂಡ ಕಾಲೇಜು ವಿಭಾಗ ಅಥವಾ ಘಟಕವನ್ನು ಯಾವುದೇ ಅಧ್ಯಯನ ಕ್ರಮಕ್ಕಾಗಿ ಈ ಬಗ್ಗೆ ರಚಿಸಲಾದ ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ಅಧ್ಯಯನ ಕ್ರಮಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಾಗಿ ಸ್ವಾಯತ್ತ ಕಾಲೇಜೆಂದು ಹೆಸರಿಸಬಹುದು.

(೨) ಈ ಬಗ್ಗೆ ರಚಿಸಿದ ಪರಿನಿಯಮಗಳಿಗೆ ಒಳಪಟ್ಟು ಹಾಗೆ ಹೆಸರಿಸಲಾದ ಸ್ವಾಯತ್ತ ಕಾಲೇಜು ಅಧ್ಯಯನ ಕ್ರಮಗಳನ್ನು ರೂಪಿಸಲು ಸಮುಚಿತ ಬೋಧನಾ ಕ್ರಮಗಳನ್ನು ವ್ಯವಸ್ಥೆಗೊಳಿಸಲು ವಿಶ್ವವಿದ್ಯಾನಿಲಯವು ಪದವಿ ಅಥವಾ ಡಿಪ್ಲೋಮಗಳನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಪರೀಕ್ಷೆ ಮತ್ತು ವಸ್ತುಗಳನ್ನು ವ್ಯವಸ್ಥೆ ಗೊಳಿಸಲು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಬಗ್ಗೆ ನಿಯಮಗಳನ್ನು ರಚಿಸಲು ಹಕ್ಕುಳ್ಳದ್ದಾಗಿರತಕ್ಕುದು.

(೩) ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಯತಕಾಲಿಕ ಪುನರವಲೋಕನಕ್ಕೆ ಒಳಪಟ್ಟು ವಿಶ್ವವಿದ್ಯಾನಿಲಯವು, ರಾಜ್ಯಸರ್ಕಾರದ ಸಹಮತಿ ಪಡೆದೊಡನೆ, ನಿರ್ದಿಷ್ಟಪಡಿಸ ಬಹುದಾಂಥ ಹೆಚ್ಚಿನ ಅವಧಿಯವರೆಗೆ ವಿಶ್ವವಿದ್ಯಾನಿಲಯವು ಸ್ವಾಯತ್ತ ಕಾಲೇಜಿನ ಹೆಸರಿಸುವಿಕೆಯನ್ನು ಮುಂದುವರಿಸಬಹುದು ಅಥವಾ ಅಂಥ ಹೆಸರಿಸುವಿಕೆಯನ್ನು ರದ್ದು ಗೊಳಿಸಬಹುದು.

(೪) ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನೊಂದಿಗೆ ಸಮಾಲೋಚಿಸಿ ಪರಿನಿಯಮಗಳನ್ನು ರಚಿಸತಕ್ಕುದು ಮತ್ತು :—

(ಕ) ಸಂಲಗ್ನಗೊಂಡ ಕಾಲೇಜು ವಿಭಾಗ ಅಥವಾ ಘಟಕ ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸ್ವಾಯತ್ತ ಕಾಲೇಜೆಂದು ಹೆಸರಿಸಬಹುದು ಅಥವಾ ಅಂತ ಕಾಲೇಜಿನ ಹೆಸರಿಸುವಿಕೆಯನ್ನು ರದ್ದುಗೊಳಿಸಬಹುದು.

(ಖ) ಆಡಳಿತ ನಿಕಾಯ, ವಿದ್ಯಾವಿಷಯಕ ಪರಿಷತ್ತು, ಅಧ್ಯಯನ ಮಂಡಲಿ ಮತ್ತು ಸ್ವಾಯತ್ತ ಕಾಲೇಜಿನ ಪರೀಕ್ಷಾ ಮಂಡಲಿಯ ರಚನೆ ಅಥವಾ ಪುನಾರಚನೆ ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನೂ ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಆಡಳಿತಕ್ಕೆ ಪ್ರಾಸಂಗಿಕವಾದ ವಿಷಯಗಳು ;

(ಗ) ವಿದ್ಯಾರ್ಥಿಗಳ ವಿಷಯಕ್ಕೆ ಸಂಬಂಧಿಸಿದ ವಿಷಯಗಳು ;

(ಘ) ಸ್ವಾಯತ್ತ ಕಾಲೇಜಿನ ಮುಂದುವರಿಕೆ ಅಥವಾ ರದ್ದುಪಡಿಸುವಿಕೆ ಕುರಿತು ನಿಯತಕಾಲಿಕ ಪುನರವಲೋಕನ ; ಮತ್ತು

(ಙ) ೨ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಕೆಲಸಕ್ಕೆ ಸಂಸಂಗತವಾಗಬಹುದಾದಂಥ ಇತರ ವಿಷಯಗಳು :

ಇವುಗಳ ಬಗ್ಗೆ ಉಪಬಂಧಿಸತಕ್ಕುದು.

## ಅಧ್ಯಾಯ—X

### ಹಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

೫೭. **ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ** —:—ಯಾವನೇ ವಿದ್ಯಾರ್ಥಿಯು ನಿಯಮಿಸಬಹುದಾದಂಥ ಅರ್ಹತೆಗಳನ್ನು ಅವನು ಹೊಂದಿದ್ದ ಹೊರತು, ಪದವಿ ಅಥವಾ ಡಿಪ್ಲೊಮೊ ಅಧ್ಯಯನ ಕ್ರಮಗಳ ಪ್ರವೇಶಕ್ಕೆ ಅರ್ಹನಾಗಿರತಕ್ಕುದಲ್ಲ.

೫೮. **ವಿದ್ಯಾರ್ಥಿಗಳ ವಾಸಸ್ಥಳ** :— ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯವು ಮನ್ನಣೆ ಮಾಡಿದ ವಿದ್ಯಾರ್ಥಿನಿಲಯದಲ್ಲಿ ಅಥವಾ ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳ ಮೇರೆಗೆ ವಾಸಿಸತಕ್ಕುದು.

೫೯. **ಗೌರವ ಪದವಿಗಳು**:— ಸಿಂಡಿಕೇಟಿನ ಮೂರನೇ ಎರಡು ಅಂಶಕ್ಕಿಂತ ಕಡಿಮೆ ಇಲ್ಲದ ಸದಸ್ಯರು, ಯಾವನೇ ವ್ಯಕ್ತಿಗೆ, ಅವನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣ ದಿಂದಾಗಿ ಅವರ ಅಭಿಪ್ರಾಯದಲ್ಲಿ ಅಂಥ ಗೌರವ ಪದವಿ ಅಥವಾ ವಿದ್ಯಾ ವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸು ಮಾಡಿದರೆ, ಸೆನೆಟು ಶಿಫಾರಸು ಮಾಡಲಾದ ವ್ಯಕ್ತಿಗೆ ಅದನ್ನು ಪ್ರದಾನ ಮಾಡ ಬಹುದೆಂದು ನಿರ್ಣಯದ ಮೂಲಕ ತೀರ್ಮಾನಿಸಬಹುದು.

೬೦. **ಪದವಿ ಅಥವಾ ಡಿಪ್ಲೊಮೊಗಳನ್ನು ಹಿಂತೆಗೆದುಕೊಳ್ಳುವುದು**: — (೧) ನೈತಿಕ ಪತನವನ್ನು ಒಳಗೊಳ್ಳುವುದೆಂದು ಸೆನೆಟು ಅಭಿಪ್ರಾಯ ಪಡುವ ಯಾವುದೇ ಅಪರಾಧ ಕ್ಕಾಗಿ ವ್ಯಕ್ತಿಯು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ಅವನು

ಅತೀವ ದುರ್ನಡತೆಯ ತಪ್ಪಿತಸ್ಥನಾಗಿದ್ದರೆ ಸೆನೆಟಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸೆನೆಟಿನ ಮೂರನೆಯ ಎರಡು ಅಂಶಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಸಿಂಡಿಕೇಟ್ ಶಿಫಾರಸಿನ ಮೇಲೆ, ಸೆನೆಟು ಯಾವನೇ ವ್ಯಕ್ತಿಗೆ ಪ್ರದತ್ತವಾದ ಅಥವಾ ಕೊಡಲಾದ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮೋ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು,

(೨) ಈ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮ ಕೈಗೊಳ್ಳತಕ್ಕದಲ್ಲ.

(೩) ಸೆನೆಟು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕೂಡಲೇ ಕಳುಹಿಸತಕ್ಕದು ;

(೪) ಸೆನೆಟು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಗೆ ಅಪೀಲು ಹೂಡಬಹುದು.

(೫) ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕದು.

## ಅಧ್ಯಾಯ—XI

ವಿಶ್ವವಿದ್ಯಾನಿಲಯ ಪುನರ್ ಅಲೋಕನಾ ಆಯೋಗ.

೬೧. ವಿಶ್ವವಿದ್ಯಾನಿಲಯದ ಪುನರ್ ಅಲೋಕನಾ ಆಯೋಗದ ನೇಮಕ :— (೧) ಕುಲಾಧಿಪತಿಯು ಕನಿಷ್ಠಪಕ್ಷ ಐದು ವರ್ಷಗಳಿಗೊಮ್ಮೆ, ವಿಶ್ವವಿದ್ಯಾನಿಲಯದ ಕಾರ್ಯ ನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸುಗಳನ್ನು ಮಾಡುವುದಕ್ಕಾಗಿ ಆಯೋಗವನ್ನು ರಚಿಸತಕ್ಕದು.

(೨) ಆಯೋಗವು, ಮೂವರಿಗೆ ಕಡಿಮೆಯಿಲ್ಲದ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದು. ಅವರಲ್ಲಿ ಒಬ್ಬನು ಕುಲಾಧಿಪತಿಯು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ಅಧ್ಯಕ್ಷನಾಗಿರತಕ್ಕದು.

(೩) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ನಿರ್ಧರಿಸಿದಂಥವುಗಳು ಆಗಿರತಕ್ಕದು.

(೪) ಆಯೋಗವು, ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ರಾಜ್ಯ ಸರ್ಕಾರದ ಮೂಲಕ ತನ್ನ ಶಿಫಾರಸುಗಳನ್ನು, ಕುಲಾಧಿಪತಿಗೆ ಮಾಡತಕ್ಕದು.

(ಔ) ಕುಲಾಧಿಪತಿಯು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, [illegible] ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(೬) ರಾಜ್ಯ ಸರ್ಕಾರವು, ರಾಜ್ಯ ವಿಧಾನ ಮಂಡಲದ ಉಭಯ ಸದನಗಳ [illegible] ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ವರದಿಯ ಒಂದು ಪ್ರತಿಯನ್ನು ಇಡತಕ್ಕದ್ದು.

೬೧ಕ ಯೋಜನಾ ಮಂಡಲಿ :— ಕುಲಾಧಿಪತಿಯು, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಮತ್ತು ಉನ್ನತ ವ್ಯಾಸಂಗದ ಗುಣಮಟ್ಟ ಮತ್ತು ಸಂಶೋಧನೆಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಸಲಹೆ ನೀಡಲು, ಐವರು ಶ್ರೇಷ್ಠ ಶಿಕ್ಷಣ ತಜ್ಞರನ್ನು ಒಳಗೊಂಡ ಒಂದು ಯೋಜನಾ ಮಂಡಲಿಯನ್ನು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ರಚಿಸಬಹುದು. ಯೋಜನಾ ಮಂಡಳಿಯ ಪ್ರತಿಯೊಂದು ವರದಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಸೆನೆಟ್‌ನ ಮುಂದಿನ ಸಮಾಲೋಚನೆಗಾಗಿ ಮತ್ತು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಕ್ಕಾಗಿ ಇಡತಕ್ಕದ್ದು

## ಅಧ್ಯಾಯ–XII

### ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

೬೨. ಶಿಸ್ತು.—(೧) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತುಪಾಲನೆಯ ಹೊಣೆಗೆ ಕುಲಪತಿ ಅಂತಿಮ ಅಧಿಕಾರಿಯಾಗಿರತಕ್ಕದ್ದು. ಆ ಬಗ್ಗೆ ಅವನ ನಿರ್ದೇಶನಗಳನ್ನು ಕಾಲೇಜುಗಳ ವಿದ್ಯಾರ್ಥಿನಿಲಯಗಳ ಮತ್ತು ಇತರ ಸಂಸ್ಥೆಗಳ ಮುಖ್ಯಸ್ಥರು ಪಾಲಿಸತಕ್ಕದ್ದು.

(೨) (೧)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕುಲಪತಿಗಳ ವರದಿಯ ಮೇಲೆ ವಿದ್ಯಾರ್ಥಿಯನ್ನು ಪರೀಕ್ಷೆಗಳಿಂದ ಹೊರ ಹಾಕುವ ಅಥವಾ ಕಾಲೇಜಿನ ಅಥವಾ ವಿದ್ಯಾರ್ಥಿನಿಲಯ ಅಥವಾ ಸಂಸ್ಥೆಯಿಂದ ತಾತ್ಕಾಲಿಕವಾಗಿ ಹೊರದೂಡುವ ಶಿಕ್ಷೆಯನ್ನು ಸಿಂಡಿಕೇಟು ಪರ್ಯಾಲೋಚಿಸಿ ವಿಧಿಸತಕ್ಕದ್ದು:

ಪರಂತು, ಸಂಬಂಧಪಟ್ಟ ವಿದ್ಯಾರ್ಥಿಗೆ ಅವನ ವಿರುದ್ಧ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಯುಕ್ತ ಅವಕಾಶ ಕೊಟ್ಟ ಹೊರತು, ಅಂಥ ಯಾವುದೇ ಶಿಕ್ಷೆ ವಿಧಿಸತಕ್ಕದ್ದಲ್ಲ.

೬೩. ಜ್ಯೇಷ್ಠತೆ.—ಜ್ಯೇಷ್ಠತೆಗೆ ಅನುಸಾರವಾಗಿ ಅಧಿನಿಯಮ ಅಥವಾ ಪರಿನಿಯಮಗಳಿಗನುಸಾರವಾಗಿ, ಯಾವನೇ ವ್ಯಕ್ತಿಯು ಪದಧಾರಣ ಮಾಡಬೇಕಾದಾಗ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಬೇಕಾದಾಗ ಅಂಥ ಜ್ಯೇಷ್ಠತೆಯನ್ನು ಕೇಡರ್ ಅಥವಾ ವರ್ಗಕ್ಕೆ ಸಂಬಂಧಪಟ್ಟ ಜ್ಯೇಷ್ಠತಾ ಪಟ್ಟಿಯಲ್ಲಿ, ಯಾವ ಕ್ರಮದಲ್ಲಿ ಹೆಸರುಗಳನ್ನು ಏರ್ಪಡಿಸಲಾಗಿದೆಯೋ ಆ ಕ್ರಮದ ಮೇರೆಗೆ ನಿರ್ಧರಿಸತಕ್ಕದ್ದು.

(೧) ೬೪ ರಚನೆ, ಖಾಲಿಸ್ಥಾನ ಇತ್ಯಾದಿಗಳ ನ್ಯೂನತೆಯು ಕಾರಣದಿಂದ ಮಾತ್ರವೇ ಕಾರ್ಯಗಳು ಮತ್ತು ವ್ಯವಹರಣೆಗಳು ಅಸಿಂಧುಗೊಳ್ಳತಕ್ಕದಲ್ಲ:—ವಿಶ್ವವಿದ್ಯಾನಿಲಯದ ಸೆನೆಟು, ಸಿಂಡಿಕೇಟು, ಅಥವಾ ವಿದ್ಯಾ ವಿಷಯಕ ಪರಿಷತ್ತು ಅಥವಾ ಇತರ ಯಾವುದೇ ನಿಕಾಯವು, ಕ್ರಮಸಂಬದ್ಧವಾಗಿ ರಚಿತವಾಗಿಲ್ಲದಿದ್ದರೂ, ಅಥವಾ ಯಾವುದೇ ಕಾಲದಲ್ಲಿ ಅದರ ರಚನೆ ಅಥವಾ ಪುನರ್ರಚನೆಯಲ್ಲಿ ನ್ಯೂನತೆಯಿದ್ದಾಗ್ಯೂ ಮತ್ತು ಅಂಥ ಯಾವುದೇ ಪ್ರಾಧಿಕಾರ ಅಥವಾ ನಿಕಾಯದಲ್ಲಿ ಸದಸ್ಯತ್ವದಲ್ಲಿನ ಸ್ಥಾನ ಖಾಲಿ ಇದ್ದಾಗ್ಯೂ, ಅಂಥ ಪ್ರಾಧಿಕಾರ ಅಥವಾ ನಿಕಾಯದ, ಯಾವುದೇ ಕಾರ್ಯ, ಅಥವಾ ವ್ಯವಹರಣೆಗಳನ್ನು, ಕೇವಲ ಅಂಥ ಕಾರಣ ಅಥವಾ ಕಾರಣಗಳ ಮಾತ್ರದಿಂದಲೇ ಅಸಿಂಧುಗೊಳಿಸತಕ್ಕದಲ್ಲ.

(೨) ಯಾವನೇ ಸದಸ್ಯನ ಮೇಲೆ, ನೋಟೀಸನ್ನು ಜಾರಿ ಮಾಡುವಲ್ಲಿ ವಿಶ್ವ ವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವುದೇ ನಿರ್ಣಯವು, ಕ್ರಮದೋಷ ಕಾರಣದಿಂದಾಗಿ, ಅಸಿಂಧುವೆಂದು ಭಾವಿಸತಕ್ಕದಲ್ಲ. ಪರಂತು, ಅಂಥ ಪ್ರಾಧಿಕಾರ ಅಥವಾ ನಿಕಾಯದ ವ್ಯವಹರಣೆಗಳಿಗೆ ಅಂಥ ಕ್ರಮದೋಷದಿಂದ ಪ್ರತಿಕೂಲ ಪರಿಣಾಮ ಉಂಟಾಗಿರಕೂಡದು.

೬೫. ಇತರ ಅಧಿನಿಯಮಿತಿಗಳ ಮೇಲೆ ಈ ಅಧಿನಿಯಮವು ಪ್ರಭಾವವುಳ್ಳದಾಗಿರತಕ್ಕದು:—ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿತವಾದ ಯಾವುದೇ ಪರಿನಿಯಮ ಅಥವಾ ವಿನಿಯಮನ ಅಥವಾ ಅಧ್ಯಾದೇಶ ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವ ಯಾವುದೇ ಕಾಲೇಜಿಗೆ ಸಂಬಂಧಿಸಿದಂತೆ, ಭಾರತ ಸಂವಿಧಾನದ ಏಳನೇ ಅನುಸೂಚಿಯ ೨ನೆಯ ಪಟ್ಟಿಯಲ್ಲಿ ನಮೂದಿಸಿದ ವಿಷಯಗಳಿಗೆ ಸಂಬಂಧಿಸಿ ಇತರ ಯಾವುದೇ ಅಧಿನಿಯಮಿತದಲ್ಲಿ ಅದಕ್ಕೆ ಅಸಂಗತವಾದುದ್ದು ಏನೇ ಇದ್ದಾಗ್ಯೂ, ಪರಿಣಾಮಕಾರಿಯಾಗಿರತಕ್ಕದು.

೬೬. ಸದ್ಭಾವನೆಯಿಂದ ಮಾಡಲಾದ ಕಾರ್ಯಕ್ಕೆ ಸಂರಕ್ಷಣೆ:—ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ಪರಿನಿಯಮಗಳು, ಅಧ್ಯಾದೇಶಗಳು ವಿನಿಯಮನಗಳ ಅಥವಾ ನಿಯಮಗಳಿಗನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕ್ರಮದ ಬಗ್ಗೆ ವಿಶ್ವವಿದ್ಯಾನಿಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ, ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದಲ್ಲ ಅಥವಾ ಅವುಗಳಿಂದ ಯಾವುದೇ ಹಾನಿ ಪರಿಹಾರವನ್ನು ಕ್ಲೇಮು ಮಾಡತಕ್ಕದಲ್ಲ.

೬೭. ವಿಶ್ವವಿದ್ಯಾನಿಲಯದೊಡನೆ ಸಂಲಗ್ನಗೊಂಡ ಕಾಲೇಜುಗಳ ಸಂಬಂಧಗಳು :—ವಿಶ್ವವಿದ್ಯಾನಿಲಯದೊಡನೆ ಸಂಲಗ್ನಗೊಂಡ ಕಾಲೇಜುಗಳ ಸಂಬಂಧಗಳು, ಆ ಬಗ್ಗೆ ರಚಿಸಬೇಕಾಗಿರುವ ಪರಿನಿಯಮಗಳ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದು ಮತ್ತು ಅಂಥ ಪರಿನಿಯಮ

ಗಳು, ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜುಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸಲು ಅರ್ಹ... ತಕ್ಕದು. .

(೧) ಅಂಥ ಕಾಲೇಜುಗಳಿಂದ, ನಿಯೋಜಿತರಾದ ವಿವಿಧ ವರ್ಗಗಳ ಅ... ಮತ್ತು ಶಿಕ್ಷಕ ಸಿಬ್ಬಂದಿಗೆ ಕನಿಷ್ಠ ವಿದ್ಯಾರ್ಹತೆಗಳನ್ನು ನಿರೂಪಿಸುವುದು;

(೨) ಅಂಥ ಕಾಲೇಜುಗಳಿಂದ ಗ್ರಂಥಾಲಯಗಳು, ಪ್ರಯೋಗ ಶಾಲೆಗಳು ಮತ್ತು ಇತರ ಸಾಧನ ಸಾಮಗ್ರಿಗಳ ಬಗ್ಗೆ ಬೋಧನೆ ಹಾಗೂ ಸಂಶೋಧನೆಗಾಗಿ ಒದಗಿಸಿದ ಸೌಲಭ್ಯಗಳ ಹಾಗೂ ವಹಿಸಿದ ವೆಚ್ಚಗಳ ಸಮನ್ವಯ ಮತ್ತು ಅವುಗಳ ನಿಯಂತ್ರಣ;

(೩) ಭತ್ಯ ಸಹಿತ ಅಥವಾ ಇಲ್ಲದೆ ರಜೆಯ ಮಂಜೂರು ಮಾಡುವುದು ಒಳಗೊಂಡು ಅಂಥ ಕಾಲೇಜುಗಳ ಅಧ್ಯಾಪಕರ ಸೇವಾ ಷರತ್ತುಗಳನ್ನು ನಿಯಂತ್ರಿಸುವುದು ಮತ್ತು ಅಂಥ ಅಧ್ಯಾಪಕರ ಪ್ರಯೋಜನಕ್ಕಾಗಿ ಪಿಂಚಣಿ, ವಿಮೆ ಮತ್ತು ಭವಿಷ್ಯನಿಧಿಗಳನ್ನು ರೂಪಿಸುವುದು ; ಮತ್ತು

(೪) ಅಂಥ ಕಾಲೇಜುಗಳಲ್ಲಿ, ಶಿಕ್ಷಣ ಮತ್ತು ಅಂಥವೇ ಇತರ ಕೆಲಸಕ್ಕಾಗಿ ಅವಶ್ಯಕ ವಾದ ವ್ಯವಸ್ಥೆಗಳನ್ನು ಅಗತ್ಯಪಡಿಸುವುದು ಮತ್ತು ಕಾಲಕಾಲಕ್ಕೆ ಅಂಥ ವ್ಯವಸ್ಥೆಗಳನ್ನು ಪರಿಶೀಲಿಸುವುದು :

ಪರಂತು, ವಿದ್ಯಾ ವಿಷಯಕ ಪರಿಷತ್ತು ರಚಿಸಬೇಕಾದ ವಿನಿಯಮಗಳಿಂದ ನಿಯಮಿಸಬೇಕಾದ ರೀತಿಯಲ್ಲಿ ಶಿಕ್ಷಣ ಅಥವಾ ಇತರ ಸಂಸ್ಥೆಯಿಂದ ಅಂಥ ಬೋಧನೆಯನ್ನು ಅಥವಾ ತರಬೇತಿಯನ್ನು ಅಂಥ ಕಾಲೇಜುಗಳು ತುಂಬಿ ಕೊಡತಕ್ಕುದು,

೮. ವಿಶ್ವವಿದ್ಯಾನಿಲಯಕ್ಕೆ ಕಾಲೇಜುಗಳ ವರ್ಗಾವಣೆ ಮತ್ತು ವರ್ಗಾವಣೆಗೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ಇತರ ಉಪಬಂಧಗಳು.

(೧) ರಾಜ್ಯ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮವುಂಟಾಗುವಂತೆ ಮತ್ತು ಷರತ್ತುಗಳಿಗೆ ಒಳಪಟ್ಟು, ಅದರ ಯಾವುದೇ ಕಾಲೇಜು, ಯಾವುದೇ ವಿದ್ಯಾರ್ಥಿನಿಲಯ, ಅಥವಾ ಅಂಥ ಕಾಲೇಜಿನ ಇತರ ಕಟ್ಟಡ ಮತ್ತು ಅಂಥ ಕಾಲೇಜಿನ ಪೀಠೋಪಕರಣ ಸಾಮಗ್ರಿಗಳು, ಗ್ರಂಥಾಲಯ, ಪುಸ್ತಕಗಳು, ಪ್ರಯೋಗಶಾಲೆ, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಬಹುದು. ಅಂಥ ಆದೇಶವನ್ನು ಪ್ರಕಟಿಸಿದ ಮೇಲೆ, ಆ ಕಾಲೇಜು, ವಿಶ್ವವಿದ್ಯಾನಿಲಯದಿಂದ ಆದರ ಕಾಲೇಜಿನಂತೆ, ನಿರ್ವಹಿಸಲಾಗುವ ಮತ್ತು ಆಡಳಿತ ನಡೆಸಲಾಗುವ ಕಾಲೇಜು ಆಗತಕ್ಕದು ಮತ್ತು ಆದೇಶದಲ್ಲಿ ನಮೂದು ಮಾಡಿದ ಸ್ವತ್ತುಗಳು ವಿಶ್ವವಿದ್ಯಾನಿಲಯದ ಸ್ವತ್ತುಗಳಾಗತಕ್ಕದು;

ಪರಂತು, ವಿಶ್ವವಿದ್ಯಾನಿಲಯವು ವ್ಯವಸ್ಥೆಗಳನ್ನು ಮಾಡುವವರೆಗೆ, ವರ್ಗಾಯಿಸಲಾದ ಸದರಿ ಕಾಲೇಜಿನ ಕಟ್ಟಡವನ್ನು, ಸ್ಥಾವರಗಳು, ಜೋಡಣೆಗಳು ಮತ್ತು ಸಂಪರ್ಕಗಳನ್ನು ಒಳಗೊಂಡು, ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ, ಸರಿಯಾದ ದುರಸ್ತಿಯಲ್ಲಿ ಇಟ್ಟುಕೊಳ್ಳಲು, ರಾಜ್ಯ ಸರ್ಕಾರವು ಹೊಣೆಯಾಗಿರತಕ್ಕುದು ಮತ್ತು ಹೊಣೆಯಾಗಿರುವುದು ಮುಂದುವರೆಯತಕ್ಕುದು.

(೨) ಈ ಅಧಿನಿಯಮದಲ್ಲಿರುವುದು ಯಾವುದೂ, ೫ನೇ ಪ್ರಕರಣದ (೧)ನೆಯ ಉಪಪ್ರಕರಣದ ಮೇರೆಗೆ ಅಥವಾ (೪) ನೆಯ ಉಪಪ್ರಕರಣದ ಮೇರೆಗೆ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದ ಯಾವುದೇ ಭೂಮಿ ಅಥವಾ ಕಟ್ಟಡವನ್ನು, ಮಾರಾಟ ಮಾಡಲು, ಗೇಣಿಗೆ ಕೊಡಲು, ವಿನಿಮಯ ಮಾಡಲು ಅಥವಾ ವಿಲೆ ಮಾಡಲು, ವಿಶ್ವವಿದ್ಯಾನಿಲಯವನ್ನು ಅಧಿಕೃತಗೊಳಿಸಿದೆಯೆಂದು ಭಾವಿಸತಕ್ಕುದಲ್ಲ.

(೩) (೧)ನೆಯ ಉಪಪ್ರಕರಣದ ಮೇರೆಗಿನ, ಆದೇಶದ ಮೂಲಕ ಯಾವುದೇ ಕಾಲೇಜು ವಿಶ್ವವಿದ್ಯಾಲಯದ ನಿರ್ವಹಣೆಗೆ ಮತ್ತು ನಿಯಂತ್ರಣಕ್ಕೆ ವರ್ಗಾಯಿಸಲಾಗಿರುವಲ್ಲಿ ಆಗ ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ,—

(ಕ) ಸದರಿ ಆದೇಶದ ಪ್ರಕಟಣೆಯ ದಿನಾಂಕದ ನಿಕಟ ಪೂರ್ವದಲ್ಲಿ ಆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಥವಾ ಅದಕ್ಕೆ ಸಂಬಂಧಪಟ್ಟ ಬೋಧಕ ಸಿಬ್ಬಂದಿಯ ಎಲ್ಲಾ ಸದಸ್ಯರೂ ಮತ್ತು ರಾಜ್ಯ ಸರ್ಕಾರದ ಇತರೆ ನೌಕರರು ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಸಮುಚಿತ ಕೇಡರ್ ಅಥವಾ ಪ್ರವರ್ಗಕ್ಕೆ ವರ್ಗಾವಣೆಯಾಗತಕ್ಕುದು.

(ಖ) ವಿಶ್ವವಿದ್ಯಾನಿಲಯದ ಪ್ರಾದೇಶಿಕ ಪರಿಮಿತಿಗಳಲ್ಲಿ ಅಥವಾ ಅದರ ಹೊರಗೆ ಯಾವುದೇ ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ, ನಿಯೋಜಿತರಾದಂಥ ಅಧ್ಯಾಪಕರ ವಿಶ್ವವಿದ್ಯಾನಿಲಯದಲ್ಲಿನ ನೇಮಕಾತಿಗೆ ಕ್ಲೇಮುಗಳನ್ನು, ಯಾವ ಖಾಲಿ ಸ್ಥಾನಗಳಲ್ಲಿ, ವಿಶ್ವವಿದ್ಯಾನಿಲಯದಲ್ಲಿನ ಯಾವ ಅಧ್ಯಾಪಕರು ಅಂಥ ವರ್ಗಾವಣೆಯ ದಿನಾಂಕದ ನಿಕಟ ಪೂರ್ವದಲ್ಲಿ ರಾಜ್ಯ ಸರ್ಕಾರದ ಸೇವೆಯಲ್ಲಿದ್ದರೋ, ಆ ಅಧ್ಯಾಪಕರನ್ನು ನೇಮಕಾತಿ ಅಥವಾ ಬಡತಿ ಮೂಲಕ ಆ ಖಾಲಿ ಸ್ಥಾನಗಳಲ್ಲಿ ಭರ್ತಿ ಮಾಡುವ ಸಂದರ್ಭದಲ್ಲಿ, ಅಂಥ ವರ್ಗಾವಣೆಯ ದಿನಾಂಕದ ನಿಕಟ ಪೂರ್ವದಲ್ಲಿ ರಾಜ್ಯ ಸರ್ಕಾರದ ಸೇವೆಯಲ್ಲಿದ್ದ, ಮೇಲೆ ಉಲ್ಲೇಖಿಸಿದ ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಯೋಜಿತರಾಗಿರುವ ಅಧ್ಯಾಪಕರ ಕ್ಲೇಮುಗಳು ರದ್ದಿಯಾತಿಗೆ ಒಳಗಾಗಬಹುದೋ, ಆ ಕ್ಲೇಮುಗಳನ್ನು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ವಿಶ್ವವಿದ್ಯಾನಿಲಯವು ಪರ್ಯಾಲೋಚಿಸತಕ್ಕುದು.

೬೯. ಪುರಸ್ಕೃತ ಪರಿಯೋಜನೆಗಳು:—ಈ ವಿಶ್ವವಿದ್ಯಾನಿಲಯದ ಮೂಲಕ ಕಾರ್ಯಗತಗೊಳ್ಳುವುದಕ್ಕಾಗಿ ಪರಿಯೋಜನೆಯನ್ನು ಪುರಸ್ಕರಿಸಿದ ರಾಜ್ಯ ಸರ್ಕಾರ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಥವಾ ಇತರ ಏಜನ್ಸಿಗಳಿಂದ ವಿಶ್ವವಿದ್ಯಾನಿಲಯವು ನಿಧಿಗಳನ್ನು ಸ್ವೀಕರಿಸುವಾಗಲೆಲ್ಲಾ ಈ ಅಧಿನಿಯಮದಲ್ಲಿ ಏನೇ ಇದ್ದಾಗ್ಯೂ,—

(೧) ವಿಶ್ವವಿದ್ಯಾನಿಲಯವು ನಿಧಿಗಳಿಂದ ಪ್ರತ್ಯೇಕವಾಗಿ ಸ್ವೀಕೃತವಾದ ಮೊಬಲಗು ವಿಶ್ವವಿದ್ಯಾನಿಲಯವು ಇಡತಕ್ಕದು ಮತ್ತು ಪರಿಯೋಜನೆಯ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸತಕ್ಕದು ; ಮತ್ತು

(೨) ಪರಿಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಸಿಬ್ಬಂದಿಯನ್ನು ಪುರಸ್ಕರಿಸದ ಸಂಸ್ಥೆಯು ಗೊತ್ತುಮಾಡಿದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ನೌಕರಿಗೆ ಭರ್ತಿ ಮಾಡಿಕೊಳ್ಳತಕ್ಕದು;

೭೧. ಈ ಅಧಿನಿಯಮದ ಪ್ರಾರಂಭದಲ್ಲಿನ ಬರುವ ತೊಂದರೆಗಳ ನಿವಾರಣೆ :— ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಗ್ಗೆ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಮೊದಲನೆಯ ಸಭೆಗೆ ಸಂಬಂಧಿಸಿದಂತೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿ ಆದಂತೆ ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಪರಿನಿಯಮಗಳನ್ನು ಅನ್ಯಥಾ ಮೊದಲು ಜಾರಿಗೆ ತರುವುದರಲ್ಲಿ ಬೇರೆ ರೀತಿಯಾಗಿ ಯಾವುದೇ ತೊಂದರೆ ಉದ್ಭವಿಸಿದರೆ ಕುಲಾಧಿಪತಿಯು, ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧಿಕಾರಗಳನ್ನು ರಚಿಸುವುದಕ್ಕೆ ಮೊದಲು, ಯಾವುದೇ ಕಾಲದಲ್ಲಿ ಆದೇಶದ ಮೂಲಕ ಆ ತೊಂದರೆಯ ನಿವಾರಣೆಯ ಉದ್ದೇಶಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ಅವನಿಗೆ ತೋರುವ ಯಾವುದೇ ನೇಮಕಾತಿಯನ್ನು ಮಾಡಬಹುದು ಕಾರ್ಯವನ್ನು ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸಂಸಂಗತವಾಗಿ ಮಾಡಬಹುದು ಮತ್ತು ಅಂಥ ನೇಮಕಕ್ಕೆ ಅಥವಾ ಕಾರ್ಯವನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಾಡಲಾಗಿದ್ದರೆ ಅಥವಾ ಕೈಗೊಂಡಿದ್ದರೆ ಹೇಗೋ ಹಾಗೆ ಪ್ರತಿಯೊಂದು ಅಂಥ ಆದೇಶವು ಪರಿಣಾಮಕಾರಿಯಾಗತಕ್ಕದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು, ಕುಲಾಧಿಪತಿಯು, ಪ್ರಸ್ತಾಪಿಸಿದ ಆದೇಶದ ಮೇಲೆ, ಕುಲಪತಿಯು ಮತ್ತು ರಚಿತವಾಗಿರಬಹುದಾದಂಥ ವಿಶ್ವವಿದ್ಯಾನಿಲಯದ ಸಮುಚಿತ ಪ್ರಾಧಿಕಾರಗಳ ಅಭಿಪ್ರಾಯವನ್ನು ಖಚಿತ ಪಡಿಸಿಕೊಳ್ಳತಕ್ಕದು ಮತ್ತು ಪರ್ಯಾಲೋಚಿಸತಕ್ಕದು.

೭೧. ತಾತ್ಕಾಲಿಕ ಉಪಬಂಧಗಳು:—(೧) ಈ ಅಧಿನಿಯಮದದಲ್ಲಿ ಏನೇಅಡಕವಾಗಿದ್ದಾಗ್ಯೂ, ಕುಲಪತಿಯು ಕುಲಾಧಿಪತಿಯ ಪೂರ್ವಾನುಮೋದನೆಯೊಂದಿಗೆ ಮತ್ತು ರಾಜ್ಯಸರ್ಕಾರದಿಂದ ಅಥವಾ ಅನ್ಯಥಾ ನಿಧಿಗಳನ್ನು ಒದಗಿಸಿಕೊಳ್ಳುವುದಕ್ಕೆ ಒಳಪಟ್ಟು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು. ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬಹುದಾದ ಅಥವಾ ನಿರ್ವಹಿಸಬೇಕಾದ ಯಾವುದೇ ಅಧಿಕಾರಗಳನ್ನು ಅಥವಾ

ಕರ್ತವ್ಯ ಗಳನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

(೨) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ,—

(ಕ) ಕಲ್ಬುರ್ಗಿ ವಿಶ್ವವಿದ್ಯಾನಿಲಯ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಮೊದಲನೆಯ ಕುಲಪತಿಯನ್ನು ಕುಲಾಧಿಪತಿಯು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ಮೂರು ವರ್ಷಗಳ ಅವಧಿಗಾಗಿ ನೇಮಕ ಮಾಡತಕ್ಕದು.

(ಖ) ಕಲ್ಬುರ್ಗಿ ವಿಶ್ವವಿದ್ಯಾನಿಲಯದ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಮೊದಲನೆಯ ಕುಲಸಚಿವ, ಪರೀಕ್ಷೆಗಳ ನಿಯಂತ್ರಕ, ಹಣಕಾಸು ಅಧಿಕಾರಿ ಮತ್ತು ಗ್ರಂಥಪಾಲಕರನ್ನು ಕುಲಾಧಿಪತಿಯು, ಕುಲಪತಿಯ ಅಭಿಪ್ರಾಯವನ್ನು ಖಚಿತಪಡಿಸಿಕೊಂಡು ಮತ್ತು ಪರ್ಯಾಲೋಚಿಸಿ, ಕರಾರಿನ ಆಧಾರದ ಮೇಲೆ ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನೇಮಕ ಮಾಡತಕ್ಕದ್ದು.

(ಗ) (ಗ), (ಜ) ಮತ್ತು (ಚ) ಖಂಡಗಳಿಗೆ ಒಳಪಟ್ಟು,—

(೧) ಕಲ್ಬುರ್ಗಿ ವಿಶ್ವವಿದ್ಯಾನಿಲಯ ಮತ್ತು ಮಂಗಳೂರು ವಿಶ್ವವಿದ್ಯಾನಿಲಯ ಗಳಲ್ಲಿ ತಿದ್ದುಪಡಿ ಅಧಿನಿಯಮದ ಪ್ರಾರಂಭದ ತರುವಾಯ ಮೊದಲ ಮೂರು ವರ್ಷ ಗಳವರೆಗೆ ಪ್ರಾಧ್ಯಾಪಕರ ನೇಮಕಾತಿಯನ್ನು, ಕುಲಾಧಿಪತಿಯು, ಕುಲಪತಿಯೊಡನೆ ಸಮಾಲೋಚಿಸಿ ಕರಾರಿನ ಆಧಾರದ ಮೇಲೆ ನೇಮಕ ಮಾಡತಕ್ಕದು.

(೨) ಇತರ ಲಿಪಿಕ ಮತ್ತು ಲಿಪಿಕೇತರ ಸಿಬ್ಬಂದಿಯ ನೇಮಕಾತಿಯನ್ನು ಕುಲ ಪತಿಯು, ವಿಶೇಷ ಅಧಿಕಾರಿಯ ಕಛೇರಿಯಲ್ಲಿನ ಹಾಗೆ ನೇಮಕಗೊಳ್ಳಲು ಸಮ್ಮತಿಸುವಂಥ ವ್ಯಕ್ತಿಗಳನ್ನು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾ ನಿಲಯದಲ್ಲಿನ ಸೇವೆಯಲ್ಲಿರುವ ಶ್ರೇಣಿಯ ಅಧಿಕಾರಿಗಳನ್ನು ಪ್ರತಿನಿಯೋಜನೆಯ ಮೂಲಕ ಅಥವಾ ನೇರ ನೌಕರ ಭರ್ತಿ ಮೂಲಕ ಮಾಡತಕ್ಕದು.

ವಿವರಣೆ :—ಈ ಖಂಡದಲ್ಲಿ "ವಿಶೇಷ ಅಧಿಕಾರಿ" ಎಂದರೆ ದಿನಾಂಕ ೧೨ನೇ ಫೆಬ್ರುವರಿ ೧೯೮೦ರ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೫೧ ಎಸ್‌ಎಎಸ್ ೮೦, ವಿಶೇಷ ಕರ್ತವ್ಯದ ಮೇಲೆ ಇರುವ ಅಧಿಕಾರಿ ಎಂದು ನೇಮಕಗೊಂಡ ಅಧಿಕಾರಿ.

(ಘ) (೧) ಕಲ್ಬುರ್ಗಿ ಮತ್ತು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರಗಳಲ್ಲಿ, ತಿದ್ದು ಪಡಿ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ಅದಕ್ಕೆ ಸೇರಿದ ಕರ್ನಾಟಕ ವಿಶ್ವವಿದ್ಯಾನಿಲಯದ ಅಧ್ಯಾಪಕ ಮತ್ತು ಇತರ ನಿಯೋ ಜಿತನು ಅಂಥ ದಿನಾಂಕದಿಂದ ಕಲ್ಬುರ್ಗಿ ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಸಮುಚಿತ ಕೇಡರ್ ಅಥವಾ ಪ್ರವರ್ಗಕ್ಕೆ ವರ್ಗಾಯಿಂತನಾಗತಕ್ಕದು.

(೨) ಕೊಣಾಜೆಯಲ್ಲಿನ ಸ್ನಾತಕೋತ್ತರ ಕೇಂದ್ರದಲ್ಲಿ ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಸೇವೆ ಸಲ್ಲಿಸುತ್ತಿರುವ ಅಥವಾ ಅದಕ್ಕೆ

ಸೇರಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ಅಧ್ಯಾಪಕ ಮತ್ತು ಇತರ ನಿಯೋಜಿತನನ್ನು ಅಂಥ ದಿನಾಂಕದಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಸಮುಚಿತ ಕೇಡರ್ ಅಥವಾ ಪ್ರವರ್ಗಕ್ಕೆ ವರ್ಗಾಯಿಸಿತನಾಗತಕ್ಕದ್ದು :

ಪರಂತು, ಹಾಗೆ ವರ್ಗಾಯಿಸಿತನಾದ ಯಾವನೇ ಅಧ್ಯಾಪಕ ಅಥವಾ ಇತರ ನಿಯೋಜಿತನು ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ತೊಂಭತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಆರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯೊಳಗೆ ಅವನನ್ನು ಅಂಥ ವರ್ಗಾವಣೆಗೆ ಮೊದಲು ಯಾವ ವಿಶ್ವವಿದ್ಯಾನಿಲಯದಲ್ಲಿ ನಿಯೋಜಿತನಾಗಿದ್ದನೋ, ಆ ವಿಶ್ವ ವಿದ್ಯಾನಿಲಯಕ್ಕೆ ಮರು ವರ್ಗಾವಣೆಗಾಗಿ ಕುಲಾಧಿಪತಿಗೆ ಅರ್ಜಿ ಸಲ್ಲಿಸಬಹುದು. ಮತ್ತು ಅದರ ಮೇಲಿನ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(ಙ) ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದ್ಯಾನಿಲಯಗಳಿಗೆ ವರ್ಗಾಯಿಸಿಕೊಳ್ಳಬೇಕೆಂದು ಬಯಸುವ, ಕರ್ನಾಟಕ ವಿಶ್ವವಿದ್ಯಾನಿಲಯದ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಯಾವನೇ ಅಧ್ಯಾಪಕ ಅಥವಾ ಇತರ ನಿಯೋಜಿತನು, ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯಲ್ಲಿ, ಅಂಥ ವರ್ಗಾವಣೆಗಾಗಿ ಕುಲಾಧಿಪತಿಗೆ ಅರ್ಜಿ ಸಲ್ಲಿಸಬಹುದು ಮತ್ತು ಅದರ ಮೇಲಿನ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(ಚ) ಕುಲಾಧಿಪತಿಯು ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವ ವಿದ್ಯಾನಿಲಯಗಳ ಕುಲಪತಿಗಳೊಡನೆ ಸಮಾಲೋಚಿಸಿ, ಈ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಇತರ ಸಿಬ್ಬಂದಿಯಲ್ಲಿ ಹೆಚ್ಚು ಏನಾದರೂ ಇದ್ದರೆ ನಿರ್ಧರಿಸಬಹುದು ಮತ್ತು ಹಾಗೆ ಹೆಚ್ಚಳವಿರುವ ಸಿಬ್ಬಂದಿಯನ್ನು ತಾನು ಯುಕ್ತವೆಂದು ಪರ್ಯಾಲೋಚಿಸಬಹುದಾದಂಥ ತತ್ವಗಳು ಮತ್ತು ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ ಸಂದರ್ಭಾನುಸಾರ ಕಲ್ಬುರ್ಗಿ ವಿಶ್ವವಿದ್ಯಾನಿಲಯಕ್ಕೆ ಅಥವಾ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಬಹುದು.

(ಛ) ಕಲ್ಬುರ್ಗಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ೧೯೮೦-೮೧ನೇ ಸಾಲಿಗಾಗಿ ಹಣಕಾಸಿನ ಅಂದಾಜುಗಳನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು.

೭೨ ಪರಿನಿಯಮಗಳು ಅಧ್ಯಾದೇಶಗಳು ಇತ್ಯಾದಿಗಳ ಮುಂದುವರಿಕೆ :—

(೧) ಈ ಅಧಿನಿಯಮದ ಸಮುಚಿತ ಉಪಬಂಧಗಳ ಮೇರೆಗೆ ಪರಿನಿಯಮಗಳು ಅಧ್ಯಾದೇಶಗಳು, ನಿಯಮಗಳು, ಮತ್ತು ವಿನಿಯಮಗಳನ್ನು ರಚಿಸುವವರೆಗೆ, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೬೪ರ

(೧೯೬೪ರ ಕರ್ನಾಟಕ ಅಧಿನಿಯಮ ೨೬) ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ ೧೯೪೯ (೧೯೪೯ರ ಮುಂಬಯಿ ಅಧಿನಿಯಮ ೨೦) ಮತ್ತು ಮೈಸೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೫೬ (೧೯೫೬ರ ಮೈಸೂರು ಅಧಿನಿಯಮ, ೨೩) ಇವುಗಳ ಮೇರೆಗೆ ಜಾರಿಯಲ್ಲಿದ್ದ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮನಗಳು ಮತ್ತು ನಿಯಮಗಳನ್ನು, ಕುಲಪತಿಯು ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಯ ಅನುಮೋದನೆಯಿಂದ ಈ ಅಧಿನಿಯಮದ ಉಪಬಂಧಗಳಿಗೆ ಅವುಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ ಮಾಡಬಹುದಾದಂಥ ಅಳವಡಿಕೆಗಳು ಮತ್ತು ಮಾರ್ಪಾಡುಗಳಿಗೆ ಒಳಪಟ್ಟು, ಅವು ಈ ಅಧಿನಿಯಮದ ಸಮುಚಿತ ಉಪಬಂಧಗಳ ಮೇರೆಗೆ ರಚಿಸಲಾದ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮನಗಳು ಮತ್ತು ನಿಯಮಗಳೆಂದು, ಭಾವಿಸತಕ್ಕದ್ದು.

(೨) ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯ ಪದವನ್ನು ಅಧಿನಿಯಮ ಪ್ರಾರಂಭವಾದ ದಿನಾಂಕದಿಂದ ಧಾರಣ ಮಾಡಿರುವ ವ್ಯಕ್ತಿಯು, ಈ ಅಧಿನಿಯಮವನ್ನು ಅಂಗೀಕರಿಸಲಾಗದಿದ್ದರೆ ಆ ಪದವನ್ನು ಅವನು ಧಾರಣ ಮಾಡುತ್ತಿದ್ದ ದಿನಾಂಕದವರೆಗೆ ಧಾರಣ ಮಾಡುವುದು ಮುಂದುವರಿಯತಕ್ಕದ್ದು.

(೩) ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಪದಧಾರಣ ಮಾಡಿರುವ ವ್ಯಕ್ತಿಗಳು, ಈ ಅಧಿನಿಯಮವನ್ನು ಅಂಗೀಕರಿಸಲಾಗದಿದ್ದರೆ ಆ ಪದವನ್ನು ಅವನು ಧಾರಣ ಮಾಡುತ್ತಿದ್ದ ದಿನಾಂಕದವರೆಗೆ, ಅವನು ಧಾರಣ ಮಾಡುವುದು ಮುಂದುವರಿಯತಕ್ಕದ್ದು.

(೪) ಕಲ್ಬುರ್ಗಿ ವಿಶ್ವವಿದ್ಯಾನಿಲಯ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳು ಪರಿನಿಯಮಗಳು, ಅಧ್ಯಾದೇಶಗಳು ವಿನಿಯಮನಗಳನ್ನು ಮತ್ತು ನಿಯಮಗಳನ್ನು ಮಾಡುವವರೆಗೆ, —

(ಕ) ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿದ್ದಂತೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಅನ್ವಯವಾಗತಕ್ಕ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮನಗಳು ಮತ್ತು ನಿಯಮಗಳನ್ನು ಈ ಅಧಿನಿಯಮದ ಮೇರೆಗೆ ಕಲ್ಬುರ್ಗಿ ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಅಧ್ಯಾದೇಶಗಳು ವಿನಿಯಮನಗಳ ಮತ್ತು ನಿಯಮಗಳೆಂದು ಭಾವಿಸತಕ್ಕದ್ದು.

(ಖ) ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿದ್ದಂತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅನ್ವಯಿಸತಕ್ಕ ಪರಿನಿಯಮಗಳು, ಅಧ್ಯಾದೇಶಗಳು ವಿನಿಯಮನಗಳು ಮತ್ತು ನಿಯಮಗಳನ್ನು ಈ ಅಧಿನಿಯಮದ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಅಧ್ಯಾದೇಶಗಳು ವಿನಿಯಮನಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು :

ಪರಂತು, ಕುಲಪತಿಯು ರಾಜ್ಯ ಸರ್ಕಾರದ ಮೂಲಕ, ಕುಲಾಧಿಪತಿಯು ಕುಲಪತಿಯ ಅನುಮೋದನೆಯೊಡನೆ ಅವುಗಳಲ್ಲಿ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾಂಥ ಮಾರ್ಪಡುಗಳನ್ನು ಮತ್ತು ಅಳವಡಿಕೆಗಳನ್ನು ಮಾಡಬಹುದು.

೭೩. ಕುಲಪತಿಯು ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿಗೆ ಸದಸ್ಯರ ಆಯ್ಕೆ, ನೇಮಕಾತಿ, ನಾಮನಿರ್ದೇಶನ ಮತ್ತು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳುವ ಬಗ್ಗೆ ಅವಶ್ಯ ಕ್ರಮವನ್ನು ಕೈಗೊಳ್ಳತಕ್ಕದು ;—

ಕುಲಪತಿಯು, ಗೊತ್ತುಪಡಿಸಿದ ದಿನಾಂಕದಿಂದ (ಎರಡು ವರ್ಷಗಳಿಗೆ) ಮೀರದಂತೆ ಮತ್ತು ೩ನೇ ಪ್ರಕರಣದ (೧ಕ) ಉಪಪ್ರಕರದ ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾನಿಲಯುಗಳ ಸಂದರ್ಭದಲ್ಲಿ, ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷಕ್ಕೆ ಮೀರದಂತೆ ಸೆನೆಟು, ಸಿಂಡಿಕೇಟು, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬರುವಂತೆ, ಈ ಅಧಿನಿಯಮದ ಮೇರೆಗೆ ಚುನಾವಣೆಗಳನ್ನು ನಡೆಸುವುದಕ್ಕೆ, ನೇಮಕಾತಿಗಳನ್ನು ಮಾಡುವುದಕ್ಕೆ, ನಾಮನಿರ್ದೇಶನಕ್ಕೆ, ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳುವುದಕ್ಕೆ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದು.

೭೪. ಕೆಲವೊಂದು ಪರೀಕ್ಷೆಯ ಬಗ್ಗೆ ಉಳಿಸುವಿಕೆ :— ಈ ಅಧಿನಿಯಮ, ಪರಿನಿಯಮ ಅಧ್ಯಾದೇಶ, ಅಥವಾ ವಿನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,—

(ಕ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೬೪ ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ, ೧೯೪೯ ಮೈಸೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೫೬ರ ಮೇರೆಗೆ ಸ್ಥಾಪಿತವಾದ, ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಅಥವಾ ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಆ ಅಧಿನಿಯಮಗಳ ಮೇರೆಗೆ, ಜಾರಿಯಲ್ಲಿರುವ, ವಿನಿಯಮಗಳಿಗೆ ಅನುಸಾರವಾಗಿ ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಯಾವನೇ ವಿದ್ಯಾರ್ಥಿಗೆ, ಅಂಥ ಪರೀಕ್ಷೆಯ ಬಗ್ಗೆ ವಿಶ್ವವಿದ್ಯಾನಿಲಯವು ಏರ್ಪಾಟು ಮಾಡುವವರೆಗೆ, ೩ನೇ ಪ್ರಕರಣದ ಮೇರೆಗೆ, ಸ್ಥಾಪಿತವಾದ ಮತ್ತು ನಿಗಮಿತವಾದ ಬೆಂಗಳೂರು ಕರ್ನಾಟಕ, ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳಿಗೆ ಪ್ರವೇಶ ನೀಡಬಹುದು ಮತ್ತು ಅಂಥ ಪರೀಕ್ಷೆಯ ಫಲಿತಾಂಶದ ಮೇಲೆ ಅವನು ಅರ್ಹತೆ ಪಡೆಯುವ ಎರಡನೆಯದಾಗಿ ಹೇಳಿದ ವಿಶ್ವವಿದ್ಯಾನಿಲಯಗಳ ಪದವಿಯನ್ನು ಆತನಿಗೆ ಪ್ರಧಾನ ಮಾಡಬಹುದು.

(ಖ) ಬೆಂಗಳೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೬೪, ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ ೧೯೪೯ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಅಧಿನಿಯಮ ೧೯೫೬ರ ಮೇರೆಗೆ ಸ್ಥಾಪಿತವಾದ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಅಥವಾ ಮೈಸೂರು ವಿಶ್ವವಿದ್ಯಾನಿಲಯವು, ಯಾವುದೇ ಪರೀಕ್ಷೆಯನ್ನು ನಡೆಸಿದ್ದು

ಆದರ ಫಲಿತಾಂಶವು ಪ್ರಕಟವಾಗಿದ್ದರೆ, ಆದರೆ ಅವುಗಳಿಗೆ ಸಂಬಂಧಿಸಿದ ಪದವಿಗಳನ್ನು, ಪ್ರಧಾನ ಮಾಡಿರದಿದ್ದರೆ ಇಲ್ಲವೇ ಕೊಟ್ಟಿಲ್ಲದೆ ಇದ್ದರೆ ಅಥವಾ ಯಾವುದೇ ಅಂಥ ಪರೀಕ್ಷೆಯ ಫಲಿತಾಂಶವನ್ನು ಸದರಿ ವಿಶ್ವವಿದ್ಯಾನಿಲಯವು, ಪ್ರಕಟಿಸದಿದ್ದರೆ, ಆಗ, ಅಂಥ ಪರೀಕ್ಷೆಯನ್ನು ೩ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮತ್ತು ನಿಗಮಿತವಾದ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಅಥವಾ ಮೈಸೂರು ವಿಶ್ವವಿದ್ಯಾನಿಲಯವು ನಡೆಸಿರುವುದಾಗಿ ಭಾವಿಸತಕ್ಕದ್ದು.

(೨) ಈ ಅಧಿನಿಯಮ ಪರಿನಿಯಮ, ಅಧ್ಯಾದೇಶ, ವಿನಿಯಮಗಳ, ಮತ್ತು ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ತಿದ್ದುಪಡಿ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಕಲ್ಬುರ್ಗಿ ವಿಶ್ವವಿದ್ಯಾನಿಲಯ ಅಥವಾ ಮಂಗಳೂರು ವಿಶ್ವವಿದ್ಯಾನಿಲಯ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿನ ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಪದವಿಗಾಗಿ ಜಾರಿಯಲ್ಲಿರುವ ವಿನಿಯಮಗಳಿಗೆ ಅನುಸಾರವಾಗಿ ಅಧ್ಯಯನ ಮಾಡುತ್ತಿದ್ದ ಯಾವನೇ ವಿದ್ಯಾರ್ಥಿಗೆ ಸಂದರ್ಭಾನುಸಾರ ಕಲ್ಬುರ್ಗಿ ವಿಶ್ವವಿದ್ಯಾನಿಲಯವು ಅಥವಾ ಮಂಗಳೂರು ವಿಶ್ವವಿದ್ಯಾನಿಲಯವು ಅಂಥ ಪರೀಕ್ಷೆಯನ್ನು ಏರ್ಪಾಟು ಮಾಡುವವರೆಗೆ, ಸಂದರ್ಭಾನುಸಾರ ಕರ್ನಾಟಕ ವಿಶ್ವವಿದ್ಯಾನಿಲಯದ ಅಥವಾ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಪ್ರವೇಶ ನೀಡಬಹುದು ಹಾಗೂ ಅಂಥ ಪರೀಕ್ಷೆಯ ಫಲಿತಾಂಶದ ಮೇಲೆ ಯಾವ ಪದವಿಗೆ ಅವನು ಪಡೆಯುತ್ತಾನೋ ಸಂದರ್ಭಾನುಸಾರ ಕರ್ನಾಟಕ ವಿಶ್ವವಿದ್ಯಾನಿಲಯ ಅಥವಾ ಮೈಸೂರು ವಿಶ್ವವಿದ್ಯಾನಿಲಯ ಆ ಪದವಿಯನ್ನು ಪ್ರಧಾನ ಮಾಡಬಹುದು.

೭೫. ೧೯೭೫ರ ಕರ್ನಾಟಕ ಅಧ್ಯಾದೇಶ ಸಂಖ್ಯೆ ೧೨ರ ನಿರಸನ :- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧ್ಯಾದೇಶ ೧೯೭೫ (೧೯೭೫ರ ಕರ್ನಾಟಕ ಅಧ್ಯಾದೇಶ ಸಂಖ್ಯೆ ೧೨) ಈ ಮೂಲಕ ನಿರಸಿತವಾಗಿದೆ.

(೨) ಹಾಗೆ ನಿರಸಿತವಾಗಿದ್ದಾಗ್ಯೂ,

(೧) ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ; ಮತ್ತು

(೨) ಸದರಿ ಅಧ್ಯಾದೇಶದ ೭೪ನೇ ಪ್ರಕರಣದ (೧) ಮತ್ತು (೩)ನೇ ಉಪಪ್ರಕರಣದ ಈ ಅಧಿನಿಯಮದಲ್ಲಿ ಅಧಿನಿಯಮಿತಿಗೊಳಿಸಿದ್ದರೆ ಹೇಗೋ ಹಾಗೆ ಅಧಿನಿಯಮದಲ್ಲಿ ಪರಿಣಾಮಕಾರಿ ಆಗಿರುವುದು ಮುಂದುವರೆಯತಕ್ಕದ್ದು.

೧೯೮೭ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೩

೧೯೮೭ರ ಮೇ ಹದಿನಾಲ್ಕನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ.

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭**

(೧೯೮೭ರ ಮೇ ಏಳನೆಯ ದಿವಸದ ದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು.)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, ೧೯೭೬ ಇದನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, ೧೯೭೬ (ಕರ್ನಾಟಕ ಅಧಿನಿಯಮ, ೧೯೭೬ರ ೨೮) ಇದನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರ್ಯಾಲೋಚಿಸಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು :—

೧. ಚಿಕ್ಕ ಹೆಸರು ಮತ್ತು ಪ್ರಾರಂಭ :—(೧) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ.೧೯೮೭ ಎಂದು ಕರೆಯತಕ್ಕದು

(೨) ಇದು ಈ ಕೂಡಲೇ ಜಾರಿಗೆ ಬರತಕ್ಕದು.

೨. ೨ನೇ ಪ್ರಕರಣದ ತಿದ್ದುಪಡಿ :— ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, ೧೯೭೬ (ಕರ್ನಾಟಕ ಅಧಿನಿಯಮ, ೧೯೭೬ರ ೨೮) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ ೨ನೇ ಪ್ರಕರಣದ (೫)ನೇ ಖಂಡಕ್ಕೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕದು ಎಂದರೆ :—

(೫) "ನೋಂದಾಯಿತ ಪದವೀಧರ" ಎಂದರೆ ಭಾರತದ ನಾಗರಿಕನಾಗಿರುವ ಮತ್ತು ಚುನಾವಣೆಯು ನಡೆಯಬೇಕಾಗಿರವಂಥ ವರ್ಷದ ೩೧ನೇ ಜನವರಿಯಂದು ಎರಡು ವರ್ಷಗಳಿಗೆ ಕಡಿಮೆಯಿಲ್ಲದ ನಿರಂತರ ಅವಧಿಗಾಗಿ ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಮತ್ತು ಈ ಬಗ್ಗೆ ರಚಿಸಿದ ಪರಿನಿಯಮಗಳಿಗೆ ಅನುಸಾರವಾಗಿ ನೋಂದಾಯಿತ ಪದವೀಧರರ ಮತದಾರರ ಪಟ್ಟಿಯಲ್ಲಿ ಅವನನ್ನು ನೋಂದಾಯಿಸಿಕೊಂಡಿರುವ ಹಾಗೂ ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯದ

ಅಥವಾ ವಿಶ್ವವಿದ್ಯಾನಿಲಯಂದ ಅನಂದಾನಗಳ ಆಯೋಗ ಅಧಿನಿಯಮವಂ, ೧೯೫೬ (ಕೇಂದ್ರ ಅಧಿನಿಯಂವಂ, ೧೯೫೬ರ III)ರ ೩ನೇ ಪ್ರಕರಣದ ಮೇರೆಗೆ ಅಧಿಸೂಚನೆಯಂ ಮೂಲಕ ಕೇಂದ್ರ ಸರ್ಕಾರವು ಘೋಷಿಸಿದ ಭಾವಿತ ವಿಶ್ವವಿದ್ಯಾನಿಲಯಂದ ಪದವೀಧರ "

೩. ೪ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಂಮದ ೪ನೇ ಪ್ರಕರಣದಲ್ಲಿ.—

(೧) (xii)ನೇ ಖಂಡದಲ್ಲಿ "ಸ್ವೀಕರಿಸಂವುದಂ" ಎಂಬ ಪದದ ತರುವಾಯ ಅಥವಾ ಸಂಗ್ರಹಿಸಂವುದಂ ಎಂಬ ಪದಗಳನ್ನು ಸೇರಿಸತಕ್ಕದಂ.

(೨) (xvi)ನೇ ಖಂಡದಲ್ಲಿ 'ಮತ್ತು ಸಂಶೋಧನೆಯು' ಎಂಬ ಪದಗಳಿಗೆ ಬದಲಾಗಿ ಒಂದಂ ಅಲ್ಪವಿರಾಮ ಮತ್ತು 'ಸಂಶೋಧನೆ' ಎಂಬ ಪದವನ್ನು ಪ್ರತಿಯೋಜಿಸತಕ್ಕದಂ

(೩) (xvii)ನೇ ಖಂಡದಲ್ಲಿ 'ಸಂಘಗಳಂ' ಎಂಬ ಪದದ ತರುವಾಯಂ ಮಂತ್ತು "ಸಂಸ್ಥೆಗಳನ್ನು" ಎಂಬ ಪದಗಳನ್ನು ಸೇರಿಸತಕ್ಕದಂ.

(೪) (xv)ನೇ ಖಂಡದ ಪರಂತಂಕದಲ್ಲಿ 'ಅನುಮೋದನೆಯಿಂಲ್ಲದೆ' ಎಂಬ ಪದಗಳ ತರುವಾಯಂ ವಿಶ್ವವಿದ್ಯಾನಿಲಯುವು ಎಂಬ ಪದವನ್ನು ಸೇರಿಸತಕ್ಕದಂ.

೪. ೬ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಂಮದ ೬ನೇ ಪ್ರಕರಣದ (೩)ನೇ ಉಪ-ಪ್ರಕರಣದ ವಿವರಣೆಯಲ್ಲಿ ಅಧಿವಾಸಿಯಾದ ಎಂಬ ಪದಕ್ಕೆ ಬದಲಾಗಿ 'ಸಾಮಾನ್ಯವಾಗಿ ವಾಸಿಸುತ್ತಿರಂವ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದಂ.

೫. ೯ನೇ ಪ್ರಕರಣದ ತಿದ್ದುಪಡಿ ;—ಮೂಲ ಅಧಿನಿಯಂಮದ ೯ನೇ ಪ್ರಕರಣದಲ್ಲಿ,

(೧) (ಕ) ಖಂಡದ ತರುವಾಯಂ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದಂ ಎಂದರೆ,

(ಕಕ) ಪ್ರತಿ—ಕಂಲಾಧಿಪತಿ

(೨) (ಖ) ಖಂಡದ ತರುವಾಯಂ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದಂ ಎಂದರೆ,

(ಖ) (ಖ) ಡೀನ್‌ಗಳು ; ಮಂತ್ತು

(೩) (ಚ) ಖಂಡವನ್ನು ಲೋಪಿಸತಕ್ಕದಂ.

೬. ಹೊಸ ೧೦ಕ ಪ್ರಕರಣದ ಸೇರ್ಪಡೆ :—ಮೂಲ ಅಧಿನಿಯಂಮದ ೧೦ನೇ ಪ್ರಕರಣದ ತರುವಾಯಂ ಈ ಕೆಳಕಂಡ ಹೊಸ ಪ್ರಕರಣವನ್ನು ಸೇರಿಸತಕ್ಕದಂ, ಎಂದರೆ :-

೧೦ ಕ. ಪ್ರತಿ ಕುಲಾಧಿಪತಿ :— (೧) ಕರ್ನಾಟಕದಲ್ಲಿ ವಿಶ್ವವಿದ್ಯಾನಿಲಯು ಶಿಕ್ಷಣದ ಪ್ರಭಾರದಲ್ಲಿರುವ ಮಂತ್ರಿಯಂ ಅವನ ಪದದ ಕಾರಣದಿಂದಾಗಿ ವಿಶ ವಿದ್ಯಾನಿಲಯುದ ಪ್ರತಿ ಕಂಲಾಧಿಪತಿ ಆಗಿರತಕ್ಕದಂ.

(೨) "ಅವನು ಕುಲಾಧಿಪತಿಯು ಗೈರುಹಾಜರಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದು."

೭. ೧೧ನೇ ಪ್ರಕರಣದ ತಿದ್ದುಪಡಿ :— ಮೂಲ ಅಧಿನಿಯಮದ ೧೧ನೇ ಪ್ರಕರಣದಲ್ಲಿ,—

(೧) (೨)ನೇ ಉಪ ಪ್ರಕರಣದಲ್ಲಿ,—

(ಕ) "ರಾಜ್ಯ ಸರ್ಕಾರದಿಂದ ಒಬ್ಬೊಬ್ಬ ವ್ಯಕ್ತಿಯಿಂದ" ಎಂಬ ಪದಗಳನ್ನು ಲೋಪಿಸತಕ್ಕದು.

(ಖ) "ಸಿಂಡಿಕೇಟಿನಿಂದ ಒಬ್ಬರು" ಎಂಬ ಪದಕ್ಕೆ ಬದಲಾಗಿ "ಸಿಂಡಿಕೇಟಿನಿಂದ ಇಬ್ಬರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಗ) "ನಾಮನಿರ್ದೇಶಿತನಾಗಿ ಯಾವನೇ ವ್ಯಕ್ತಿಯು" ಎಂಬ ಪದಗಳ ತರುವಾಯ "ರಾಜ್ಯಸರ್ಕಾರ" ಎಂಬ ಪದಗಳನ್ನು ಮತ್ತು ಅಲ್ಪವಿರಾಮವನ್ನು ಸೇರಿಸತಕ್ಕದು.

(ಘ) ಪರಂತುಕದಲ್ಲಿ "ಯಾವೊಬ್ಬ ವ್ಯಕ್ತಿಯನ್ನು ಅನುಮೋದಿಸದಿದ್ದರೆ" ಎಂಬ ಪದಗಳಿಗೆ ಬದಲಾಗಿ "ಯಾರನ್ನೂ ಅನುಮೋದಿಸದಿದ್ದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(೨) (೪)ನೇ ಉಪ-ಪ್ರಕರಣದ ಕೊನೆಯಲ್ಲಿ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದು ಎಂದರೆ :—

"ಮತ್ತು ಪರಂತು, ಯಾವನೇ ಕುಲಪತಿಯನ್ನು ಪದದಿಂದ ಕುಲಾಧಿಪತಿಯು ನೇಮಕ ಮಾಡಿದ ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಾಧೀಶನು ಕ್ರಮಬದ್ಧವಾಗಿ ವಿಚಾರಣೆ ಮಾಡಿದ ತರುವಾಯ ದುರ್ವರ್ತನೆ, ದುರ್ವ್ಯವಸ್ಥಾಪನೆ, ಅಸಮರ್ಥತೆ ಅಥವಾ ಅನ್ಯಥಾ ಕಾರಣದ ಮೇಲೆ ಮಾಡಿದ ಆದೇಶದ ಮೂಲಕವಲ್ಲದೆ ತೆಗೆದುಹಾಕತಕ್ಕದಲ್ಲ".

(೩) (೫)ನೇ ಉಪ-ಪ್ರಕರಣದ ಇತರ ಸೇವಾ ಷರತ್ತುಗಳು ಎಂಬ ಪದಗಳ ತರುವಾಯ ಈ ಬಗ್ಗೆ ರಚಿಸಿದ ಪರಿನಿಯಮಗಳು ಯಾವುವಾದರೂ ಇದ್ದರೆ ಅವುಗಳಿಗನುಸಾರವಾಗಿ ಎಂಬ ಪದಗಳನ್ನು ಸೇರಿಸತಕ್ಕದು.

೮. ೧೨ನೇ ಪ್ರಕರಣದ ತಿದ್ದುಪಡಿ :— ಮೂಲ ಅಧಿನಿಯಮದ ೧೨ನೇ ಪ್ರಕರಣದಲ್ಲಿ (೧) (೨)ನೇ ಉಪ-ಪ್ರಕರಣದಲ್ಲಿ "ಅವನು ಸೆನೆಟ್ಟಿನ ಮತ್ತು ಕುಲಾಧಿಪತಿಯು ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದು" ಎಂಬ ಪದಗಳಿಗೆ ಬದಲಾಗಿ "ಅವನು ಕುಲಾಧಿಪತಿಯು ಗೈರುಹಾಜರಿಯಲ್ಲಿ ಸೆನೆಟ್ಟಿನ ಮತ್ತು ಕುಲಾಧಿಪತಿ

ಮತ್ತು ಪ್ರತಿ ಕುಲಾಧಿಪತಿಯು ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ಸಹ ವಹಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(೨) (೫)ನೇ ಉಪ-ಪ್ರಕರಣದಲ್ಲಿ "ಎರಡೂ ಪರಂತುಕಗಳಲ್ಲಿ ಸಂಭವಿಸುವ ರಾಜ್ಯ ಸರ್ಕಾರದ ಮೂಲಕ" ಎಂಬ ಪದಗಳನ್ನು ಲೋಪಿಸತಕ್ಕದ್ದು.

(೩) ಎರಡನೇ ಪರಂತುಕದ ತರುವಾಯ ಈ ಕೆಳಕಂಡ ಪರಂತುಕವನ್ನು ಸೇರಿಸ ತಕ್ಕದ್ದು ಎಂದರೆ :—

"ಅದೂ ಅಲ್ಲದೆ ಈ ಉಪ-ಪ್ರಕರಣದ ಮೇರೆಗಿನ ಅಧಿಕಾರಗಳನ್ನು ವಿಶ್ವವಿದ್ಯಾ ನಿಲಯದ ನಿಯೋಜಿತರ ವೇತನ ಶ್ರೇಣಿಗಳನ್ನು ಪರಿಷ್ಕರಿಸಲು ಅಥವಾ ಕಾಲೇಜಿನ ಸಂಲಗ್ನತೆಯನ್ನು ಅಥವಾ ಶಿಕ್ಷಣ ಕ್ರಮವನ್ನು ಮಂಜೂರುಮಾಡಲು ಚಲಾಯಿಸತಕ್ಕದಲ್ಲ ಮತ್ತು ಈ ಉಪ-ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವಲ್ಲಿ ಪರಿನಿಯಮ ಗಳು ಅಥವಾ ವಿನಿಮಯಗಳನ್ನು ರಚಿಸಿದ್ದರೆ ಈ ಅಧಿನಿಯಮದ ಸಂಬಂಧಪಟ್ಟ ಉಪ ಬಂಧಗಳ ಮೇರೆಗೆ ಅವು ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಅಧ್ಯಾದೇಶಗಳನ್ನು ಮಾಡಲಾಗದಿದ್ದರೆ ಅವುಗಳನ್ನು ಈ ಅಧಿನಿಯಮಕ್ಕೆ ಅನುಸಾರವಾಗಿ ಕುಲಾಧಿಪತಿಗೆ ಒಪ್ಪಿಸತಕ್ಕದ್ದು".

೯. ೧೩ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೧೩ನೇ ಪ್ರಕರಣದಲ್ಲಿ (೧) (೧)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಪರಂತುಕವನ್ನು ಸೇರಿಸ ತಕ್ಕದ್ದು ಎಂದರೆ :—

"ಪರಂತು, ಕುಲಾಧಿಪತಿಯು ಅಂಥ ವ್ಯವಸ್ಥೆಗಳನ್ನು ಮಾಡುವುದಕ್ಕೆ ಮೊದಲು ಕುಲಾಧಿಪತಿಯು ವಿಶ್ವವಿದ್ಯಾನಿಲಯದ ಡೀನ್‌ಗಳ ಪೈಕಿ ಒಬ್ಬನನ್ನು ಒಂದು ತಿಂಗಳನ್ನು ಮೀರದ ಅವಧಿಗಾಗಿ ಅಥವಾ ಕುಲಾಧಿಪತಿಯು ವ್ಯವಸ್ಥೆಗಳನ್ನು ಮಾಡುವವರೆಗೆ ಅವುಗಳಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಕುಲಪತಿಯ ಚಾಲ್ತಿ ಕರ್ತವ್ಯಗಳ ಪ್ರಭಾರ ದಲ್ಲಿಡಲು ಗೊತ್ತುಮಾಡಬಹುದು."

(೨) (೨)ನೇ ಉಪ-ಪ್ರಕರಣದಲ್ಲಿ,—

(ಕ) "ಅಂಥ ವ್ಯಕ್ತಿಯು" ಎಂಬ ಪದಗಳಿಗೆ ಬದಲಾಗಿ "ವಿಶ್ವವಿದ್ಯಾನಿಲಯದ ಡೀನುಗಳ ಪೈಕಿ ಒಬ್ಬನು.'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ; ಮತ್ತು

(ಖ) "ಕುಲಾಧಿಪತಿಯು" ಎಂಬ ಪದಕ್ಕೆ ಮುಂಚೆ "ಈ ಬಗ್ಗೆ ಯಾವುದಾದರೂ ಪರಿನಿಯಮಗಳನ್ನು ರಚಿಸಿದ್ದರೆ ಅವುಗಳಿಗೆ ಅನುಸಾರವಾಗಿ." ಎಂಬ ಪದಗಳನ್ನು ಸೇರಿಸ ತಕ್ಕದ್ದು ;

೧೦. ೧೪ನೇ ಪ್ರಕರಣದ ತಿದ್ದುಪಡಿ;— ಮೂಲ ಅಧಿನಿಯಮದ ೧೪ನೇ ಪ್ರಕರ
ಣದ (೧) ನೇ ಉಪಪ್ರಕರಣದಲ್ಲಿ 'ಕುಲಾಧಿಪತಿಯು ಕುಲಪತಿಯೊಡನೆ ಮತ್ತು ರಾಜ್ಯ
ಸರ್ಕಾರದೊಂದಿಗೆ ಸಮಾಲೋಚಿಸಿ' ಎಂಬ ಪದಗಳಿಗೆ ಬದಲಾಗಿ "ಕುಲಪತಿಯು ಸಿಂಡಿಕೇಟಿಗೆ
ಮೂರು ವ್ಯಕ್ತಿಗಳಿಗೆ ಕಡಿಮೆಯಿಲ್ಲದ ಪಟ್ಟಿಯಿಂದ ಶಿಫಾರಸು ಮಾಡಿದ ಸಿಂಡಿಕೇಟಿನ ಅನು
ಮೋದನೆಯೊಂದಿಗೆ ಕುಲಪತಿಯು ಪರಿನಿಯಮಗಳು ನಿಯಮಿಸಿದ ಕಾಲದೊಳಗೆ ಪಟ್ಟಿಯ
ಲ್ಲಿರುವ ಯಾರನ್ನು ಸಿಂಡಿಕೇಟ್ ಅನುಮೋದಿಸದಿದ್ದರೆ ಕುಲಾಧಿಪತಿಯು ಕುಲಪತಿಯೊಡನೆ
ಸಮಾಲೋಚಿಸಿ ಅವನು ಯೋಗ್ಯವೆಂದು ಭಾವಿಸುವಂಥ ವ್ಯಕ್ತಿಯನ್ನು ಕುಲಸಚಿವನೆಂಬು
ದಾಗಿ ನೇಮಕ ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

೧೧. ಪರೀಕ್ಷೆಗಳ ನಿಯಂತ್ರಕರು ಮತ್ತು ಉಪ-ನಿಯಂತ್ರಕರು ಎಂಬ ಪದಗಳಿಗೆ
ಬದಲಾಗಿ ಕುಲಸಚಿವ (ಮೌಲ್ಯೀಕರಣ) ಮತ್ತು ಉಪಕುಲಸಚಿವ (ಮೌಲ್ಯೀಕರಣ) ಎಂಬ
ಪದಗಳ ಪ್ರತ್ಯಾಯೋಜನೆ;— ಮೂಲ ಅಧಿನಿಯಮದ ೧೫ನೇ ಪ್ರಕರಣದ ಶೀರ್ಷಿಕೆಯಲ್ಲಿ
ಮತ್ತು ಮೂಲ ಅಧಿನಿಯಮದಲ್ಲಿ ಸಂದರ್ಭಾನುಸಾರ "ಪರೀಕ್ಷೆಗಳ ನಿಯಂತ್ರಕ ಮತ್ತು
ಉಪ-ನಿಯಂತ್ರಕರು"ಎಂಬ ಪದಗಳು ಸಂಭವಿಸುವಲ್ಲೆಲ್ಲಾ ಅನುಕ್ರಮವಾಗಿ"ಕುಲಸಚಿವರು"
(ಮೌಲ್ಯೀಕರಣ) ಮತ್ತು ಉಪಕುಲಸಚಿವ (ಮೌಲ್ಯೀಕರಣ) ಎಂಬ ಪದಾವಳಿಗಳನು
ಪ್ರತಿಯೋಜಿಸತಕ್ಕದು.

೧೨. ೧೫ನೇ ಪ್ರಕರಣದ ತಿದ್ದುಪಡಿ:—ಮೂಲ ಅಧಿನಿಯಮದ ೧೫ನೇ ಪ್ರಕರಣದ
(೧)ನೇ ಉಪ-ಪ್ರಕರಣದಲ್ಲಿ "ಕುಲಾಧಿಪತಿಯು ಕುಲಪತಿಗಳೊಂದಿಗೆ ಮತ್ತು ರಾಜ್ಯಸರ್ಕಾರ
ದೊಂದಿಗೆ ಸಮಾಲೋಚಿಸಿ" ಎಂಬ ಪದಗಳ ಬದಲಾಗಿ "ಕುಲಪತಿಯು ಸಿಂಡಿಕೇಟಿನ
ಅನುಮೋದನೆಯೊಂದಿಗೆ ಕುಲಪತಿಯು ಶಿಫಾರಸು ಮಾಡಿದ ಮೂರು ವ್ಯಕ್ತಿಗಳಿಗಿಂತ
ಕಡಿಮೆಯಲ್ಲದ ಪಟ್ಟಿಯೊಳಗಿಂದ ಸಿಂಡಿಕೇಟಿಗೆ ಪರಿನಿಯಮಗಳ ಮೂಲಕ ನಿಯಮಿಸಿದ
ಕಾಲದೊಳಗೆ ಪಟ್ಟಿಯಲ್ಲಿರುವ ಯಾರೂ ಅನುಮೋದಿತವಾಗದಿದ್ದರೆ ಕುಲಾಧಿಪತಿಯು
ಕುಲಪತಿಯೊಂದಿಗೆ ಸಮಾಲೋಚಿಸಿ ಅವನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿ
ಯನ್ನು ಕುಲಸಚಿವ (ಮೌಲ್ಯೀಕರಣ) ಎಂಬುದಾಗಿ ನೇಮಕ ಮಾಡಬಹುದು" ಎಂಬ ಪದ
ಗಳನ್ನು ಪ್ರತಿಯೋಜಿಸತಕ್ಕದು,

೧೩. ೧೬ನೇ ಪ್ರಕರಣದ ತಿದ್ದುಪಡಿ:-ಮೂಲ ಅಧಿನಿಯಮದ ೧೬ನೇ ಪ್ರಕರಣದಲ್ಲಿ
(೧) (೧)ನೇ ಉಪ-ಪ್ರಕರಣದಲ್ಲಿ ಲೆಕ್ಕಪರಿಶೋಧನೆ, ಲೆಕ್ಕ ಮತ್ತು ಹಣಕಾಸಿನ ಆಡಳಿತದ
ಅನುಭವವುಳ್ಳ ಕೇಂದ್ರ ಅಥವಾ ರಾಜ್ಯಸರ್ಕಾರದ ಅಧಿಕಾರಿಗಳ ಪೈಕಿ ಕುಲಾಧಿಪತಿಯು ಎಂಬ
ಪದಗಳಿಗೆ ಬದಲಾಗಿ "ಸಿಂಡಿಕೇಟಿಗೆ ಕುಲಪತಿಯು ಶಿಫಾರಸು ಮಾಡಿದ ಲೆಕ್ಕಪರಿಶೋಧನೆ, ಲೆಕ್ಕ
ಮತ್ತು ಹಣಕಾಸಿನ ಆಡಳಿತದ ಅನುಭವವುಳ ಕೇಂದ್ರ ಅಥವಾ ರಾಜ ಸರ್ಕಾರದ ಅಧಿಕಾರಿ

ಗಳಾಗಿರುವ ಮೂರು ವ್ಯಕ್ತಿಗಳಿಗೆ ಕಡಿಮೆಯಿಲ್ಲದ ಪಟ್ಟಿಯಿಂದ ಸಿಂಡಿಕೇಟಿನ ಅನುಮೋದನೆಯೊಡನೆ ಕುಲಪತಿಯು ಪರಿನಿಯಮಗಳನ್ನು ರೂಪಿಸಿದ ಕಾಲದೊಳಗೆ ಸಿಂಡಿಕೇಟು ಪಟ್ಟಿಯಲ್ಲಿರುವ ಯಾರನ್ನೂ ಅನುಮೋದಿಸದಿದ್ದರೆ ಕುಲಾಧಿಪತಿಯು ಕುಲಪತಿಯೊಡನೆ ಸಮಾಲೋಚಿಸಿ ಅವನು ಯೋಗ್ಯನೆಂದು ಭಾವಿಸಿದಂಥ ವ್ಯಕ್ತಿಯನ್ನು ಹಣಕಾಸು ಅಧಿಕಾರಿ ಎಂಬುದಾಗಿ ನೇಮಿಸಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು; ಮತ್ತು

(೨) (೨)ನೇ ಉಪಪ್ರಕರಣದಲ್ಲಿ "ಪರಿನಿಯಮಗಳು" ಎಂಬ ಪದದ ತರುವಾಯ ಅಲ್ಪವಿರಾಮ ಮತ್ತು ಈ ಕೆಳಕಂಡ ಪದಗಳನ್ನು ಸೇರಿಸತಕ್ಕದ್ದು, ಎಂದರೆ:—

"ಅಧ್ಯಾದೇಶಗಳು ಅಥವಾ ವಿನಿಯಮಗಳು ನಿಯಮಿಸಬಹುದಾದಂಥ ಅಥವಾ ಕುಲಪತಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ."

೧೪. ೧೬ಕ ಪ್ರಕರಣದ ತಿದ್ದುಪಡಿ:— ಮೂಲ ಅಧಿನಿಯಮದ ೧೬ಕ ಪ್ರಕರಣದಲ್ಲಿ,—

(೧) "ತಾತ್ಕಾಲಿಕ ಗೈರು ಹಾಜರಿಯು" ಎಂಬ ಪದಗಳ ತರುವಾಯ "ಅಥವಾ ಅವರ ನೇಮಕಾತಿಯು ಇತ್ಯರ್ಥದಲ್ಲಿರುವ" ಎಂಬ ಪದಗಳನ್ನು ಸೇರಿಸತಕ್ಕದು ಮತ್ತು ಕೊನೆಯಲ್ಲಿ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದು ಎಂದರೆ:—

"ಪರಂತು, ಕುಲಪತಿಯು ಒಬ್ಬ ಅಧಿಕಾರಿಯನ್ನು ಒಂದು ತಿಂಗಳನ್ನು ಮೀರದ ಅವಧಿಗಾಗಿ ಅಥವಾ ಕುಲಾಧಿಪತಿಯು ಒಬ್ಬ ಅಧಿಕಾರಿಯನ್ನು ತಕ್ಕಗೊಳಿಸುವವರೆಗೆ ಯಾವುದು ಮುಂಚಿನದೋ ಅಲ್ಲಿಯವರೆಗೆ ಅಂಥ ಕರ್ತವ್ಯಗಳನ್ನು ನೆರವೇರಿಸಲು ತಕ್ಕಗೊಳಿಸಬಹುದು. ಕುಲಪತಿಯು ಕೂಡಲೇ ಕುಲಾಧಿಪತಿಗೆ ಈ ಪರಂತುಕದ ಮೇರೆಗೆ ಕೈಕೊಂಡ ಕ್ರಮವನ್ನು ವರದಿ ಮಾಡತಕ್ಕದು.

೧೫. ೧೭ನೇ ಪ್ರಕರಣದ ತಿದ್ದುಪಡಿ:— ಮೂಲ ಅಧಿನಿಯಮದ ೧೭ನೇ ಪ್ರಕರಣದ (೧)ನೇ ಉಪ-ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡದನ್ನು ಪ್ರತಿಯೋಜಿಸತಕ್ಕದು. ಎಂದರೆ — "(೧) ಪ್ರಾಧ್ಯಾಪಕನಾಗಿರುವ ಅಧ್ಯಯನಗಳ ವಿಭಾಗದ ವಿಭಾಗೀಯ ಪರಿಷತ್ತಿನ ಪ್ರತಿಯೊಬ್ಬ ಅಧ್ಯಕ್ಷನು ಜೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಎರಡು ವರ್ಷಗಳ ಅವಧಿಗಾಗಿ ವ್ಯಾಸಂಗ ವಿಭಾಗದ ಡೀನ್ ಆಗಿ ಕೆಲಸ ಮಾಡತಕ್ಕದು. ಯಾವನೇ ಅಧ್ಯಕ್ಷನು ಪ್ರಾಧ್ಯಾಪಕನಾಗಿಲ್ಲದಿರುವಲ್ಲಿ ಒಬ್ಬ ಪ್ರಾಧ್ಯಾಪಕನು ಜೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಎರಡು ವರ್ಷಗಳ ಅವಧಿಗಾಗಿ ವ್ಯಾಸಂಗ ವಿಭಾಗದ ಡೀನ್ ಆಗಿ ಕೆಲಸ ಮಾಡತಕ್ಕದು.

೧೬. "ವಿದ್ಯಾರ್ಥಿ ಕಲ್ಯಾಣದ ಡೀನ್" ಎಂಬ ಪದಾವಳಿಗೆ ಬದಲಾಗಿ "ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕ" ಎಂಬ ಪದಾವಳಿಯ ಪ್ರತಿಯೋಜನೆ:— ಮೂಲ ಅಧಿನಿಯ

ಮದ ೧೮ನೇ ಪ್ರಕರಣದ ಶೀರ್ಷಿಕೆಯಲ್ಲಿ ಮತ್ತು ಮೂಲ ಅಧಿನಿಯಮದಲ್ಲಿ 'ವಿದ್ಯಾರ್ಥಿ ಕಲ್ಯಾಣದ ಡೀನ್' ಎಂಬ ಪದಾವಳಿಗೆ ಬದಲಾಗಿ ಅದು ಸಂಭವಿಸುವಲ್ಲೆಲ್ಲಾ 'ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕ' ಎಂಬ ಪದಾವಳಿಯನ್ನು ಪ್ರತಿಯೋಜಿಸತಕ್ಕದ್ದು.

೧೭. ೧೯ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೧೯ನೇ ಪ್ರಕರಣದಲ್ಲಿ "ಕುಲಾಧಿಪತಿಯಿಂದ" ಎಂಬ ಪದಕ್ಕೆ ಬದಲಾಗಿ "ಸಿಂಡಿಕೇಟ್‌ನಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

೧೮. ೨೧ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೨೧ನೇ ಪ್ರಕರಣದ (೧)ನೇ ಉಪ-ಪ್ರಕರಣದಲ್ಲಿ,

(೧) (೪)ನೇ ಬಾಬಿನ ತರುವಾಯ ಈ ಕೆಳಕಂಡದನ್ನು ಸೇರಿಸತಕ್ಕದು ಎಂದರೆ:—

(೪ಕ) ಅಧ್ಯಕ್ಷ, ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಲಿ ;

(೨) (೧೦)ನೇ ಬಾಬಿಗೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕದು ಎಂದರೆ :—

"(೧೦) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ನಿರ್ದೇಶಕ.

(೩) (೧೬)ನೇ ಬಾಬಿಗೆ ಬದಲಾಗಿ ಈ ಕೆಳಕಂಡದನ್ನು ಪ್ರತಿಯೋಜಿಸತಕ್ಕದು ಎಂದರೆ :—

"(೧೬) ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕ"

(೪) (೨೨)ನೇ ಬಾಬಿಗೆ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕದು ಎಂದರೆ :—

"(೨೨) (ಕ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಐವರು ಚುನಾಯಿತ ಪ್ರತಿನಿಧಿಗಳು, ಸ್ನಾತಕೋತ್ತರ ವಿದ್ಯಾರ್ಥಿಗಳ ಪೈಕಿ ಇಬ್ಬರು ಮತ್ತು ಪದವಿಪೂರ್ವ ವಿದ್ಯಾರ್ಥಿಗಳ ಪೈಕಿ ಮೂವರು ಒಂದು ವರ್ಷದ ಅವಧಿಗಾಗಿ ಮತ್ತು ಅವರು ಸಂದರ್ಭಾನುಸಾರ ಅಂಥ ಸದಸ್ಯರನ್ನು ಒಳಗೊಂಡ ವಿಭಾಗ ಅಥವಾ ಕಾಲೇಜಿನ ಅಂಥ ಮತದಾರರ ಮೂಲಕ ಮತ್ತು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಚುನಾಯಿತರಾಗತಕ್ಕದು :

ಪರಂತು, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಪದವಿಪೂರ್ವ ವಿದ್ಯಾರ್ಥಿಗಳ ಪ್ರತಿನಿಧಿಗಳ ಪೈಕಿ ಒಬ್ಬೊಬ್ಬರು ಸಂದರ್ಭಾನುಸಾರ ಆ ವಿಭಾಗ ಅಥವಾ ಕಾಲೇಜಿನ ಮಹಿಳಾ ಸದಸ್ಯರನ್ನು ಒಳಗೊಂಡಂಥ ಚುನಾವಣೆ ಕಾಲೇಜುಗಳಿಂದ ಮತ್ತು ಪರನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಚುನಾಯಿತರಾದ ಮಹಿಳೆ ಆಗಿರತಕ್ಕದು.

(ಖ) ಕುಲಪತಿಯು ಶಿಫಾರಸಿನ ಮೇಲೆ ಕುಲಾಧಿಪತಿಯು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ನಾಮನಿರ್ದೇಶನ ಮಾಡಿದ ವಿದ್ಯಾರ್ಥಿಗಳ ಮೂವರು ಪ್ರತಿನಿಧಿಗಳು ಅವರ ಪೈಕಿ ಒಬ್ಬನು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಪ್ರತಿನಿಧಿಸತಕ್ಕುದು. ಒಬ್ಬನು ನ್ಯಾಷನಲ್ ಕೆಡೆಟ್ ಕೋರ್‌ನ ಕೆಡೆಟ್ ಆಗಿರತಕ್ಕುದು ಮತ್ತು ಒಬ್ಬನು/ಳು ಪರಿನಿಯಮ ಗಳ ಮೂಲಕ ನಿಯಮಿಸಬಹುದಾದಂಥ ಉತ್ಕೃಷ್ಟ ಯೋಗ್ಯತೆಯ ಆಟಗಾರ ಅಥವಾ ಆಟಗಾರ್ತಿಯಾಗಿರತಕ್ಕುದು.

ಪರಂತು, ಯಾವನೇ ವಿದ್ಯಾರ್ಥಿಯು,—

(i) ಅವನ ಹೆಸರು ವಿಶ್ವವಿದ್ಯಾನಿಲಯ ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನ ಗೊಂಡ ಕಾಲೇಜಿನ ಪಟ್ಟಿಗಳಲ್ಲಿ ಕಂಡುಬಂದ ಹೊರತು ;

(ii) ವಿಶ್ವವಿದ್ಯಾನಿಲಯದ ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೊಮಾಗೆ ಕೊಂಡೊಯ್ಯುವ ವಿಶ್ವವಿದ್ಯಾನಿಲಯದಲ್ಲಿನ ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಕಾಲೇಜಿನಲ್ಲಿನ ಪಠ್ಯಕ್ರಮವನ್ನು ಅವನು ಅನುಸರಿಸುತ್ತಿದ್ದ ಹೊರತು ;

(iii) ಅವನು ಮುಂಜಾನೆ ಕಾಲೇಜು ಅಥವಾ ಸಂಜೆ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದರೆ ಅಥವಾ ಹೊರ ಅಭ್ಯರ್ಥಿಯಾಗಿ ಅಥವಾ ಅಂಚೆ ಪಠ್ಯಕ್ರಮಗಳ ಮೂಲಕ ಪರೀಕ್ಷೆಯನ್ನು ಹೊಂದಿದ್ದರೆ ;

(iv) ಆರು ವರ್ಷಗಳಲ್ಲಿ ಅವನು ಪಠ್ಯ ಕ್ರಮವನ್ನು ಮುಗಿಸಲು ವಿಫಲನಾಗಿದ್ದರೆ ಚುನಾವಣೆ ಅಥವಾ ನಾಮನಿರ್ದೇಶನಕ್ಕಾಗಿ ಅರ್ಹನಾಗಿರತಕ್ಕುದಲ್ಲ ;

ಮತ್ತು ಪರಂತು ; ಗೊತ್ತುಪಡಿಸಿದ ದಿನಾಂಕದ ತರುವಾಯ ಮೊದಲ ಬಾರಿಗೆ ರಚಿತವಾಗಬೇಕಾದ ಸೆನೆಟ್ಟಿನಲ್ಲಿ (೧)ನೇ ಉಪ-ಪ್ರಕರಣದ (೨೨)ನೇ ಖಂಡದ (೧)ನೇ ಬಾಬಿನಲ್ಲಿ ನಿರ್ದಿಷ್ಟಪಡಿಸಿರುವ ಐವರು ಪ್ರತಿನಿಧಿಗಳನ್ನು ಪ್ರತಿಬಾರಿಗೆ ಒಂದು ವರ್ಷದ ಅವಧಿಗಾಗಿ ಕುಲಾಧಿಪತಿಯು ಕುಲಪತಿಯೊಡನೆ ಸಮಾಲೋಚಿಸಿ ನಾಮನಿರ್ದೇಶನ ಮಾಡ ತಕ್ಕುದು ;

ಅದೂ ಅಲ್ಲದೆ, ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಚುನಾಯಿಸಿದಾಗ ಹಿಂದಿನ ಪರಂತುಕದ ಮೇರೆಗೆ ನಾಮನಿರ್ದೇಶನ ಮಾಡಿದ ವಿದ್ಯಾರ್ಥಿಗಳ ಪದಾವಧಿಯು ಕೊನೆ ಗೊಳ್ಳತಕ್ಕುದು.

೧೯. <u>೨೩ನೇ ಪ್ರಕರಣದ ತಿದ್ದುಪಡಿ</u> :—ಮೂಲ ಅಧಿನಿಯಮದ ೨೩ನೇ ಪ್ರಕರಣದಲ್ಲಿ (೨)ನೇ ಉಪ-ಪ್ರಕರಣದ (ಫ) ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡ ವನ್ನು ಪ್ರತಿಯೋಜಿಸತಕ್ಕುದು ಎಂದರೆ :—

(ಫ) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸಿನ ಮೇಲೆ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾದ ಪ್ರಾಧ್ಯಾಪಕರ ಹುದ್ದೆಗಳು, ಲೆಕ್ಚರರ್ ಹುದ್ದೆಗಳು ಅಥವಾ ಅಧ್ಯಾಪಕರ

ಯಾವುವೇ ಇತರ ಹುದ್ದೆಗಳನ್ನು ಸೃಷ್ಟಿಸುವುದು ಅದಾಗ್ಯೂ, ಈ ಹುದ್ದೆಗಳಿಗೆ ನೇಮಕಾತಿಗಳನ್ನು ಅವಶ್ಯವಾದರೆ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರವು ಈ ಪ್ರಕಾರ ಅಧಿಕಾರ ವಹಿಸಿಕೊಡಬಹುದಾದಂಥ ಇತರ ಯಾವುದೇ ಪ್ರಾಧಿಕಾರಿ ಅಥವಾ ಹಣಕಾಸಿನ ಅನುಮೋದನೆಯನ್ನು ಪಡೆದುಕೊಂಡ ತರುವಾಯ ಮಾಡತಕ್ಕದ್ದು.

೨೦. <u>೨೪ನೇ ಪ್ರಕರಣದ ತಿದ್ದುಪಡಿ</u> :—ಮೂಲ ಅಧಿನಿಯಮದ ೨೪ನೇ ಪ್ರಕರಣದಲ್ಲಿ,—

(೧) (v)ನೇ ಖಂಡದ ಬದಲಾಗಿ ಈ ಕೆಳಕಂಡುದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :—(v)ಕುಲಾಧಿಪತಿಯು ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿದ ತರುವಾಯ ಜ್ಯೇಷ್ಠತೆಗೆ ಅನುಸಾರವಾಗಿ ಸರದಿ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿದ ಮೂರು ಕಾಲೇಜುಗಳ ಪ್ರಾಂಶುಪಾಲರು ಅವರ ಪೈಕಿ ಒಬ್ಬನು ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿರತಕ್ಕದ್ದು. ಒಬ್ಬನು ವೃತ್ತಿಯ ಕಾಲೇಜಿನ ಪ್ರಾಂಶುಪಾಲರಾಗಿರತಕ್ಕದ್ದು ಮತ್ತು ಇನ್ನೊಬ್ಬನು ವಿಶ್ವವಿದ್ಯಾನಿಲಯದ ಅಥವಾ ಸಂಲಗ್ನಗೊಂಡ ವೃತ್ತಿಯವಲ್ಲದ ಕಾಲೇಜಿನ ಪ್ರಾಂಶುಪಾಲರಾಗಿರತಕ್ಕದ್ದು.

(೨) (ix)ನೇ ಖಂಡದಲ್ಲಿ 'ಒಬ್ಬ ಸದಸ್ಯ' ಎಂಬ ಪದಗಳಿಗೆ ಬದಲಾಗಿ 'ಇಬ್ಬರು ಸದಸ್ಯರು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(೩) (ix)ನೇ ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು ಎಂದರೆ:–

(xii) ಅಧ್ಯಕ್ಷ, ಪದವಿಪೂರ್ವ ಮಂಡಳಿ.

(4) ಕುಲಾಧಿಪತಿಯು ಎಂಬ ಪದದ ತರುವಾಯ ಅವು ಸಂಭವಿಸುವಲ್ಲೆಲ್ಲಾ "ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

೨೧. <u>೨೬ನೇ ಪ್ರಕರಣದ ತಿದ್ದುಪಡಿ</u>:– ಮೂಲ ಅಧಿನಿಯಮದ ೨೬ನೇ ಪ್ರಕರಣದಲ್ಲಿ:–

(೧) (ix)ನೇ ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(ixಕ) ಅಧ್ಯಕ್ಷ, ಪದವಿಪೂರ್ವಮಂಡಳಿ.

(೨) (xiv)ನೇ ಖಂಡವನ್ನು ಲೋಪಿಸತಕ್ಕದ್ದು.

(೩) 'ಕುಲಾಧಿಪತಿಯು' ಎಂಬ ಪದದ ತರುವಾಯ ಅದು ಸಂಭವಿಸುವಲ್ಲೆಲ್ಲಾ "ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

೨೨. <u>೨೮ನೇ ಪ್ರಕರಣದ ತಿದ್ದುಪಡಿ:</u>- ಮೂಲ ಅಧಿನಿಯಮದ ೨೮ನೇ ಪ್ರಕರಣದಲ್ಲಿ.-

(೧) (೨)ನೇ ಉಪ-ಪ್ರಕರಣದಲ್ಲಿ (ಘ) ಖಂಡಕ್ಕೆ ಬದಲಾಗಿ ಈ ಕೆಳಕಂಡುದುದನ್ನು ಪ್ರತಿಯೋಜಿಸತಕ್ಕದು, ಎಂದರೆ:-

(ಘ) (i) ಪ್ರತಿಯೊಂದು ಅಧ್ಯಯನ ವಿಭಾಗವು ಒಬ್ಬ ಅಧ್ಯಕ್ಷನನ್ನು ಹೊಂದಿರತಕ್ಕದು ಅವನು ವಿಭಾಗೀಯ ಪರಿಷತ್ತಿನ ಅಧ್ಯಕ್ಷನು ಸಹ ಆಗಿರತಕ್ಕದು.

(ii) ಪ್ರತಿಯೊಂದು ಅಧ್ಯಯನ ವಿಭಾಗವು ಪ್ರಾಧ್ಯಾಪಕರು, ರೀಡರುಗಳು ಮತ್ತು ವಿಭಾಗದಲ್ಲಿನ ಇಬ್ಬರು ಅತಿ ಜೇಷ್ಠ ಲೆಕ್ಚರರ್‌ರನ್ನು ಒಳಗೊಂಡ ವಿಭಾಗೀಯ ಪರಿಷತ್ತನ್ನು ಹೊಂದಿರತಕ್ಕದು.

(iii) 'ಅಧ್ಯಕ್ಷ' ನನ್ನು ನಿರ್ದಿಷ್ಟ ಅವಧಿಗಾಗಿ ಸಿಂಡಿಕೇಟು ನೇಮಕ ಮಾಡತಕ್ಕದು:

ಪರಂತು ಸಿಂಡಿಕೇಟು ಕಾಲಕಾಲಕ್ಕೆ ಪುನರವಲೋಕನ ಮಾಡಿದ ತರುವಾಯ ಆ ಅವಧಿಯನ್ನು ಮಾರ್ಪಾಟು ಮಾಡಲು ಸಕ್ಷಮವಾಗಿರತಕ್ಕದು.

(iv) ಅಧ್ಯಕ್ಷನು ವಿಭಾಗೀಯ ಪರಿಷತ್ತಿನೊಡನೆ ಸಮಾಲೋಚಿಸಿ ವಿಭಾಗದ ಆಡಳಿತದ ಪ್ರಭಾರದಲ್ಲಿರತಕ್ಕದು. ವಿಭಾಗೀಯ ಪರಿಷತ್ತಿನ ಮತ್ತು ಅಧ್ಯಕ್ಷನ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಪರಿನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದು.

(೨)(೩)ನೇ ಉಪ-ಪ್ರಕರಣದಲ್ಲಿ (ii)ನೇ ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಪ್ರತಿಯೋಜಿಸತಕ್ಕದು, ಎಂದರೆ:—

(ii) ವ್ಯಾಸಂಗ ವಿಭಾಗದಲ್ಲಿನ ಅಧ್ಯಯನ ವಿಭಾಗದ ಅಧ್ಯಕ್ಷ.

೨೩. <u>೨೯ನೇ ಪ್ರಕರಣದ ತಿದ್ದುಪಡಿ:</u>— ಮೂಲ ಅಧಿನಿಯಮದ ೨೯ನೇ ಪ್ರಕರಣದಲ್ಲಿ

(೧)ನೇ ಉಪ-ಪ್ರಕರಣಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದು ಎಂದರೆ:-

"ಯಾವುದೇ ವಿಷಯ ಅಥವಾ ವಿಷಯಗಳ ಸಮೂಹದಲ್ಲಿ ಸ್ನಾತ ಪೂರ್ವ ಅಧ್ಯಯನಗಳಿಗಾಗಿ ಅಥವಾ ಸ್ನಾತಕೋತ್ತರ ಅಧ್ಯಯನಗಳಿಗಾಗಿ ಪ್ರತ್ಯೇಕ ಅಧ್ಯಯನ ಮಂಡಲಿಯನ್ನು ಅವಶ್ಯ ಕಂಡುಬಂದಲ್ಲೆಲ್ಲಾ ಸಿಂಡಿಕೇಟು ರಚಿಸಬಹುದು.

೨೪. <u>೩೦ನೇ ಪ್ರಕರಣದ ತಿದ್ದುಪಡಿ:</u>— ಮೂಲ ಅಧಿನಿಯಮದ ೩೦ನೇ ಪ್ರಕರಣದಲ್ಲಿ

(೧)ನೇ ಉಪ-ಪ್ರಕರಣದಲ್ಲಿ (v) ಖಂಡದಲ್ಲಿ "ಸದಸ್ಯ" ಎಂಬ ಪದವನ್ನು ಲೋಪಿಸತಕ್ಕದು.

೨೫. ೩೧ನೇ ಪ್ರಕರಣದ ತಿದ್ದುಪಡಿ;— ಮೂಲ ಅಧಿನಿಯಮದ ೩೧ನೇ ಪ್ರಕರಣ ದಲ್ಲಿ:—

(೧)ನೇ ಉಪ-ಪ್ರಕರಣದಲ್ಲಿ

(ಕ) (iii) ಮತ್ತು (iv)ನೇ ಖಂಡಗಳನ್ನು ಲೋಪಿಸತಕ್ಕದು,

(ಖ) (vi) ನೇ ಖಂಡದಲ್ಲಿ " ಸದಸ್ಯ " ಎಂಬ ಪದವನ್ನು ಲೋಪಿಸತಕ್ಕದು.

(೨) ೪ನೇ ಉಪ-ಪ್ರಕರಣದಲ್ಲಿ "ಸಿಂಡಿಕೇಟಿನ ಅಥವಾ" ಎಂಬ ಪದಗಳನ್ನು ಲೋಪಿಸ ತಕ್ಕದು.

೨೬. ಹೊಸ ೩೩ಕ ಪ್ರಕರಣದ ಸೇರ್ಪಡೆ;— ಮೂಲ ಅಧಿನಿಯಮದ ೩೩ನೇ ಪ್ರಕರಣದ ತರುವಾಯ ಈ ಕೆಳಕಂಡ ಹೊಸ ಪ್ರಕರಣವನ್ನು ಸೇರಿಸತಕ್ಕದು ಎಂದರೆ:—

**೩೩ಕ. ಪ್ರಾಧಿಕಾರಗಳ ನಾಮ ನಿರ್ದೇಶನಗೊಂಡ ಮತ್ತು ಚುನಾಯಿತ ಸದಸ್ಯರುಗಳು ಪದವನ್ನು ಧಾರಣ ಮಾಡುವುದರ ಮೇಲೆ ಕೆಲವು ಪರಿಬಂಧ:—**

(೧) ೨೦ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರಾಧಿಕಾರಕ್ಕೆ ನಾಮ ನಿರ್ದೇಶನಗೊಂಡ ಯಾವನೇ ಸದಸ್ಯನು ಅವನನ್ನು "ನಾಮ ನಿರ್ದೇಶಿಸಿದ ವ್ಯಕ್ತಿಯ ಅಥವಾ ಪ್ರಾಧಿಕಾರದ ಇಷ್ಟಪರ್ಯಂತ ಪದವನ್ನು ಧಾರಣ ಮಾಡತಕ್ಕದು. "

(೨) ೨೦ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರಾಧಿಕಾರಕ್ಕೆ ನಾಮ ನಿರ್ದೇಶನ ಗೊಂಡ ಅಥವಾ ಚುನಾಯಿತನಾದ ಯಾವನೇ ವ್ಯಕ್ತಿಯು ಅಂಥ ಪ್ರಾಧಿಕಾರದಲ್ಲಿ ಎರಡು ಕ್ರಮಾಗತ ಅವಧಿಗಳಿಗಿಂತ ಹೆಚ್ಚಿಗೆಯಾಗಿ ಪದ ಧಾರಣ ಮಾಡತಕ್ಕದಲ್ಲ.

೨೭. ೩೫ನೇ ಪ್ರಕರಣದ ತಿದ್ದುಪಡಿ: —ಮೂಲ ಅಧಿನಿಯಮದ ೨೫ನೇ ಪ್ರಕರಣ ದಲ್ಲಿ (ತ) ಖಂಡವನ್ನು ಅದರ (ದ) ಖಂಡವೆಂದು ಪುನರಂಕಿಸತಕ್ಕದು ಮತ್ತು ಪುನರಂಕಿಸಿದ ಖಂಡಕ್ಕೆ ಮೊದಲು ಈ ಕೆಳಕಂಡ ಖಂಡಗಳನ್ನು ಸೇರಿಸತಕ್ಕದು, ಎಂದರೆ:—

(ತ) ವಿಶ ವಿದ್ಯಾನಿಲಯ ಅಥವಾ ಸಂಲಗ್ನಗೊಂಡ ಕಾಲೇಜುಗಳಲ್ಲಿ ಅಧ್ಯಯನ ಪಠ್ಯ ಕ್ರಮಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೊಮಾ ಗಳಿಗೆ ಪ್ರವೇಶಗಳಿಗಾಗಿ ವಿಧಿಸಬೇಕಾದ ಫೀಜುಗಳು;

(ಥ) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಫೀಜುಗಳು,

೨೮. ೩೬ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೩೬ನೇ ಪ್ರಕರಣ ದಲ್ಲಿ (೪)ನೇ ಉಪಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪ–ಪ್ರಕರಣವನ್ನು ಪ್ರತಿಯೋಜಿಸ ತಕ್ಕದು ಎಂದರೆ :—

(೪) ಸೆನೆಟ್ ಅಂಗೀಕರಿಸಿದ ಪ್ರತಿಯೊಂದು ಪರಿನಿಯಮವನ್ನು ಅನುಮತಿಗಾಗಿ ಕುಲಾಧಿಪತಿಗೆ ಒಪ್ಪಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದು. ರಾಜ್ಯ ಸರ್ಕಾರವು

ವಿಶ್ವವಿದ್ಯಾನಿಲಯದಿಂದ ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗೆ ಕುಲಾಧಿಪತಿಗೆ ಅದರ ವ್ಯಾಖ್ಯಾನಗಳೊಂದಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯು ರಾಜ್ಯ ಸರ್ಕಾರದಿಂದ ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅವನ ಅನುಮತಿಯನ್ನು ನೀಡಬಹುದು ಅಥವಾ ತಡೆಹಿಡಿಯಬಹುದು ಅಥವಾ ಸೆನೆಟ್ಟಿಗೆ ಅದನ್ನು ಪುನಃ ಪರ್ಯಾಲೋಚನೆಗಾಗಿ ಕಳುಹಿಸಬಹುದು.

೨೯. ೩೭ನೇ ಪ್ರಕರಣದ ತಿದ್ದುಪಡಿ:—ಮೂಲ ಅಧಿನಿಯಮದ ೩೭ನೇ ಪ್ರಕರಣದಲ್ಲಿ,— (೧) (ಗ) ಖಂಡದಲ್ಲಿ 'ಅರ್ಹತೆ' ಎಂಬ ಪದಕ್ಕೆ ಬದಲಾಗಿ 'ಅಗತ್ಯತೆ' ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(೨) (ಘ) ಮತ್ತು (ಠ) ಖಂಡಗಳನ್ನು ಲೋಪಿಸತಕ್ಕದ್ದು.

೩೦. ೩೮ನೇ ಪ್ರಕರಣದ ತಿದ್ದುಪಡಿ—ಮೂಲ ಅಧಿನಿಯಮದ ೩೮ನೇ ಪ್ರಕರಣದಲ್ಲಿ (೪) (೫) ಮತ್ತು (೬) ನೇ ಉಪ-ಪ್ರಕರಣಗಳಲ್ಲಿ "ರಾಜ್ಯ ಸರ್ಕಾರದ ಮೂಲಕ" ಎಂಬ ಪದಗಳನ್ನು ಅವುಗಳು ಸಂಭವಿಸುವಲೆಲ್ಲಾ ಲೋಪಿಸತಕ್ಕದ್ದು,

೩೧. ೩೯ನೇ ಪ್ರಕರಣದ ತಿದ್ದುಪಡಿ;— ಮೂಲ ಅಧಿನಿಯಮದ ೩೯ನೇ ಪ್ರಕರಣದಲ್ಲಿ (೧) ನೇ ಉಪ-ಪ್ರಕರಣದ ಕೊನೆಯಲ್ಲಿ ಈ ಕೆಳಕಂಡುದನ್ನು ಸೇರಿಸತಕ್ಕದ್ದು ಎಂದರೆ:—

ರಾಜ್ಯ ಸರ್ಕಾರವು ವಿಶ್ವವಿದ್ಯಾನಿಲಯದಿಂದ ವಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಅವುಗಳನ್ನು ಎರಡು ತಿಂಗಳ ಒಳಗೆ ಅದರ ವ್ಯಾಖ್ಯಾನಗಳೊಂದಿಗೆ ಕುಲಾಧಿಪತಿಗೆ ಕಳುಹಿಸತಕ್ಕದ್ದು.

೩೨. ೪೩ನೇ ಪ್ರಕರಣದ ತಿದ್ದುಪಡಿ:— ಮೂಲ ಅಧಿನಿಯಮದ ೪೩ನೇ ಪ್ರಕರಣದಲ್ಲಿ (೨) ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಉಪ-ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:—

(೩) ವಿಶ್ವವಿದ್ಯಾನಿಲಯದ ಬಜೆಟ್ ಅಂದಾಜನ್ನು ರಾಜ್ಯ ಸರ್ಕಾರ ಮತ್ತು ಇತರ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು ಹಾಗಿದ್ದರೂ ಪೂರಕ ಬಜೆಟ್‌ನ್ನು ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನಗಳ ನಿರೀಕ್ಷೆಯಲ್ಲಿ ಅಕ್ಟೋಬರ್‌ದಲ್ಲಿ ಸೆನೆಟ್ಟಿನ ಮುಂದೆ ಇಡಬಹುದು, ಆದರೆ ಈ ಬಗ್ಗೆ ಯಾವುದೇ ವೆಚ್ಚವನ್ನು ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ವಹಿಸತಕ್ಕದ್ದಲ್ಲ.

(೪) ವಿಶ್ವವಿದ್ಯಾನಿಲಯವು ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ವಿಾಸಲಿಟ್ಟ ನಿಧಿಗಳನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ

ಯಾವುದೇ ಸರಿಸಮಾನ ವಂತಿಕೆಗಳನ್ನು ಒಳಗೊಳ್ಳುವಂಥ ಯಾವುದೇ ಯೋಜನೆಗಳನ್ನು ಅಥವಾ ಪುರಸ್ಕರಣ ಪ್ರಾಧಿಕಾರಿಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದಲ್ಲ.

೩೩. ಅಧ್ಯಾಯ VIIIದ ಶೀರ್ಷಿಕೆಯ ತಿದ್ದುಪಡಿ :—ಮೂಲ ಅಧಿನಿಯಮದ ಅಧ್ಯಾಯದ ಶೀರ್ಷಿಕೆಯಲ್ಲಿ "ನೌಕರರ" ಎಂಬ ಪದಗಳಿಗೆ ಬದಲಾಗಿ "ನಿಯೋಜಿತರ" ಎಂಬ ಪದವನ್ನು ಪ್ರತಿಯೋಜಿಸತಕ್ಕದು.

೩೪. ೪೯ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೪೯ನೇ ಪ್ರಕರಣದಲ್ಲಿ,—

(೧) (೨)ನೇ ಉಪ-ಪ್ರಕರಣದಲ್ಲಿ.—

(ಕ) "ಕುಲಾಧಿಪತಿಯು ನಾಮನಿರ್ದೇಶಿಸಿದ" ಎಂಬ ಪದಗಳ ಮೊದಲು ಅದು ಸಂಭವಿಸುವಲೆಲ್ಲಾ "ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ" ಎಂಬ ಪದಗಳನ್ನು ಸೇರಿಸತಕ್ಕದು.

(ಖ) (ಕ) ಖಂಡದಲ್ಲಿ,—

(೧) "ಪ್ರಾಧ್ಯಾಪಕರ" ಎಂಬ ಪದದ ತರುವಾಯ ಅಲ್ಪವಿರಾಮ ಮತ್ತು ರೀಡರುಗಳು ಎಂಬ ಪದವನ್ನು ಸೇರಿಸತಕ್ಕದು.

(ii) (ii)ನೇ ಉಪ-ಖಂಡದಲ್ಲಿ "ಸಂಬಂಧಪಟ್ಟ ವಿಭಾಗದ ಮುಖ್ಯಸ" ಪದಗಳಿಗೆ ಬದಲಾಗಿ "ಸಂಬಂಧಪಟ್ಟ ವಿಭಾಗೀಯ ಪರಿಷತ್ತಿನ ಅಧ್ಯಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(iii) (iii)ನೇ ಉಪ-ಖಂಡದಲ್ಲಿ "ಮೂರು ಮತ್ತು ಇನ್ನೊಬ್ಬ" ಎಂಬ ಪದಗಳಿಗೆ ಬದಲಾಗಿ "ನಾಲ್ಕು ಮತ್ತು ಇತರರು" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದು.

(ಗ) (ಖ) ಖಂಡದಲ್ಲಿ,—

(i) ರೀಡರುಗಳು ಮತ್ತು ಎಂಬ ಪದಗಳನ್ನು ಲೋಪಿಸತಕ್ಕದು.

(ii) (iii)ನೇ ಉಪ-ಖಂಡದಲ್ಲಿ "ವಿಭಾಗದ ಮುಖ್ಯಸ್ಥ" ಎಂಬ ಪದಗಳಿಗೆ ಬದಲಾಗಿ "ವಿಭಾಗೀಯ ಪರಿಷತ್ತಿನ ಅಧ್ಯಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(iii) (iv)ನೇ ಉಪ-ಖಂಡದಲ್ಲಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥನು ಪ್ರಾಧ್ಯಾಪಕನಾಗಿಲ್ಲದಿದ್ದರೆ ಎಂಬ ಪದಗಳನ್ನು ಲೋಪಿಸತಕ್ಕದು.

(೨) (೫)ನೇ ಉಪ-ಪ್ರಕರಣದಲ್ಲಿ "ಪ್ರಾಧ್ಯಾಪಕರು" ಎಂಬ ಪದದ ತರುವಾಯ ಒಂದು ಅಲ್ಪ ವಿರಾಮ ಮತ್ತು "ರೀಡರುಗಳು" ಎಂಬ ಪದವನ್ನು ಸೇರಿಸತಕ್ಕದು.

(೩) (೬)ನೇ ಉಪ-ಪ್ರಕರಣದಲ್ಲಿ,—

(೭) ವಿವರಣೆಯನ್ನು ಹೊರತುಪಡಿಸಿ 'ಕುಲಾಧಿಪತಿ' ಎಂಬ ಪದಕ್ಕೆ ಬದಲಾಗಿ "ಸಿಂಡಿಕೇಟ್" ಎಂಬ ಪದವನ್ನು ಪ್ರತಿಯೋಜಿಸತಕ್ಕದು ಮತ್ತು ಕೊನೆಯಲ್ಲಿ ಈ ಕೆಳಕಂಡುದನ್ನು ಸೇರಿಸಬೇಕು ಎಂದರೆ:—

"ಮಂಡಲಿ ಮತ್ತು ಸಿಂಡಿಕೇಟ್ ನಡುವೆ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸತಕ್ಕದು ಅವನ ತೀರ್ಮಾನವು ಅಂತಿಮವಾಗಿರತಕ್ಕದು."

(೮) ವಿವರಣೆಯಲ್ಲಿ "ಕುಲಾಧಿಪತಿಯನ್ನು ಅಗತ್ಯಪಡಿಸುವುದೆಂದು" ಎಂಬ ಪದಗಳಿಗೆ ಬದಲಾಗಿ "ಸಿಂಡಿಕೇಟ್‌ನ್ನು ಅಗತ್ಯಪಡಿಸುವುದೆಂದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(೯) (೮) ನೇ ಉಪ–ಪ್ರಕರಣದಲ್ಲಿ 'ಸ್ವಲ್ಪ ಹೆಚ್ಚಿನ ಯೋಗ್ಯತೆ' ಎಂಬ ಪದಗಳನ್ನು ಲೋಪಿಸತಕ್ಕದು.

(೧೦) (೯)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಉಪ–ಪ್ರಕರಣವನ್ನು ಸೇರಿಸತಕ್ಕದು.

(೧೧) ಹಿಂದಿನ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕುಲಪತಿಯು ಶಿಫಾರಸಿನ ಮೇಲೆ ಹೆಚ್ಚಿನ ವಿದ್ಯಾವಿಷಯಕ ಪ್ರಶಸ್ತಿ ಮತ್ತು ವೃತ್ತಿಯ ಸಾಧನೆಯನ್ನು ಹೊಂದಿದ ವ್ಯಕ್ತಿಯನ್ನು ಪರಸ್ಪರ ಒಪ್ಪಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ವಿಶ್ವ ವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕನ ಹುದ್ದೆಯನ್ನು ಅಂಗೀಕರಿಸಲು ಆಮಂತ್ರಿಸಲು ಸಕ್ಷಮವಾಗಿರತಕ್ಕದು.

ಪರಂತು ಯಾವುದೇ ಕಾಲದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಅಂಥ ನಾಲ್ಕಕ್ಕಿಂತ ಹೆಚ್ಚು ಅಂಥ ಸಂದರ್ಶಕ ಪ್ರಾಧ್ಯಾಪಕರು ಇರತಕ್ಕದಲ್ಲ.

೩೫. <u>ಹೊಸ ೪೯ಕ ಪ್ರಕರಣದ ಸೇರ್ಪಡೆ;</u>— ಮೂಲ ಅಧಿನಿಯಮದ ೪೯ನೇ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದು ಎಂದರೆ :—

"೪೯ಕ <u>ಬಡ್ತಿ ಯೋಜನೆಗಳಿಗೆ ಅನುಸಾರವಾಗಿ ನೇಮಕಾತಿ:</u>- ೪೯ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆದರೆ ಅನುಸೂಚಿತ ಜಾತಿಗಳು ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ನೇಮಕಾತಿಗಳು ಮತ್ತು ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿಯಮಗಳು ಮತ್ತು ಆದೇಶಗಳಿಗೆ ಒಳಪಟ್ಟು ವಿಶ್ವವಿದ್ಯಾನಿಲಯ ಸಂಸ್ಥೆ ಮತ್ತು ವಿಭಾಗಗಳಲ್ಲಿ ರೀಡರುಗಳು ಮತ್ತು ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿಗಳನ್ನು ಅಥವಾ ವಿಭಾಗವು ಪದವಿಪೂರ್ವ ಮತ್ತು ಸ್ನಾತಕೋತ್ತರ ಮತ್ತು ಸ್ನಾತಕೋತ್ತರ ಪಠ್ಯಕ್ರಮವನ್ನು ಹೊಂದಿದ್ದರೆ ಈ ಬಗ್ಗೆ ರಚಿಸಿದ ಪರಿನಿಯಮಗಳ ಮೂಲಕ ನಿಯಮಿಸಿದ ಬಡ್ತಿ ಯೋಜನೆ ಯಾವುದಾದರೂ ಇದ್ದಾಗ ಅದಕ್ಕನುಸಾರವಾಗಿ ಸಿಂಡಿಕೇಟು ಮಾಡಬಹುದು.

೩೬. ೫೦ನೇ ಪ್ರಕರಣದ ತಿದ್ದುಪಡಿ:— ಮೂಲ ಅಧಿನಿಯಮದ ೫೦ನೇ ಪ್ರಕರಣದಲ್ಲಿ,—

(೧) ಶೀರ್ಷಿಕೆಗೆ ಬದಲಾಗಿ, ಈ ಕೆಳಕಂಡದನ್ನು ಪ್ರತಿಯೋಜಿಸತಕ್ಕದು ಎಂದರೆ "ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ"

೨) (೧)ನೇ ಉಪ-ಪ್ರಕರಣದಲ್ಲಿ 'ಹೊರತುಪಡಿಸಿ' ಎಂಬ ಪದಗಳಿಗೆ ಬದಲಾಗಿ 'ಮತ್ತು' ಎಂಬ ಪದವನ್ನು ಪ್ರತಿಯೋಜಿಸತಕ್ಕದು.

(೩) (೨)ನೇ ಉಪ-ಪ್ರಕರಣದಲ್ಲಿ,—

(ಕ) (iii)ನೇ ಖಂಡದಲ್ಲಿ 'ವಿಭಾಗದ ಮುಖ್ಯಸ್ಥ' ಎಂಬ ಪದಗಳಿಗೆ ಬದಲಾಗಿ "ವಿಭಾಗೀಯ ಪರಿಷತ್ತಿನ ಅಧ್ಯಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(ಖ) (iv) ಖಂಡದಲ್ಲಿ "ಇಬ್ಬರು ವ್ಯಕ್ತಿಗಳು" ಎಂಬ ಪದಗಳಿಗೆ ಬದಲಾಗಿ "ಮೂವರು ವ್ಯಕ್ತಿಗಳು" ಎಂಬ ಪದಗಳನ್ನು ಮತ್ತು ಇತರ ಎಂಬ ಪದಕ್ಕೆ ಬದಲಾಗಿ ಇನ್ನೊಬ್ಬ ಎಂಬ ಪದವನ್ನು ಕ್ರಮಾನುಗತವಾಗಿ ಪ್ರತಿಯೋಜಿಸತಕ್ಕದು ಮತ್ತು ಕೊನೆಯಲ್ಲಿ ಈ ಕೆಳಕಂಡುದನ್ನು ಸೇರಿಸತಕ್ಕದು ಎಂದರೆ :—

"ಅಂಥ ಸದಸ್ಯತ ಅವಧಿಯು ಮೂರು ವರ್ಷಗಳಾಗಿರತಕ್ಕದು."

(೪) (೩)ನೇ ಉಪ-ಪ್ರಕರಣದಲ್ಲಿ "ಬಡ್ತಿ" ಎಂಬ ಪದದ ತರುವಾಯ ಅಲ್ಪವಿರಾಮ ಮತ್ತು "ಹುದ್ದೆಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದಂತೆ ಪರಿಯೋಜನೆಯಲ್ಲಿ ನಿಯಮಿಸಬಹುದಾದಂತೆ ಪ್ರತಿಯೋಜನೆ ಅಥವಾ ವರ್ಗಾವಣೆ ಅಥವಾ ಕರಾರು" ಎಂಬ ಪದಗಳನ್ನು ಸೇರಿಸತಕ್ಕದು,

(೫) (೫)ನೇ ಉಪ-ಪ್ರಕರಣದಲ್ಲಿ,—

(ಕ) ಪರಂತುಕವನ್ನು ಹೊರತುಪಡಿಸಿ ಉಳಿದಂತೆ "ಕುಲಾಧಿಪತಿ" ಎಂಬ ಪದಕ್ಕೆ ಬದಲಾಗಿ "ಸಿಂಡಿಕೇಟ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು ಮತ್ತು ಕೊನೆಯಲ್ಲಿ ಈ ಕೆಳಕಂಡುದನ್ನು ಸೇರಿಸತಕ್ಕದು ಎಂದರೆ :—

ಮಂಡಲಿ ಮತ್ತು ಸಿಂಡಿಕೇಟ್ ನಡುವೆ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸತಕ್ಕದು. ಈ ಬಗ್ಗೆ ಅವನ ತೀರ್ಮಾನವು ಅಂತಿಮವಾಗಿರತಕ್ಕದು.

(ಖ) ಪರಂತುಕದಲ್ಲಿ "ಒಂದು ಸಾವಿರದ ಐದು ನೂರು ತೊಂಬತ್ತೊಂಬತ್ತು" ಎಂಬ ಪದಗಳಿಗೆ ಬದಲಾಗಿ "ಎರಡು ಸಾವಿರದ ಇಪ್ಪತ್ನಾಲ್ಕು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದು.

(೬) (೫)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಹೊಸ ಉಪ-ಪ್ರಕರಣವನ್ನು ಸೇರಿಸತಕ್ಕದು ಎಂದರೆ—

(6) ಹಿಂದಿನ ಉಪ-ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ರಾಜ್ಯ ಸಿವಿಲ್ ಸೇವೆಗಳಲ್ಲಿನ "ಸಿ" ಮತ್ತು "ಡಿ" ಹುದ್ದೆಗಳ ಸಮೂಹಗಳಿಗೆ ಸಮನಾದ ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳಿಗೆ ನೇಮಕಾತಿಗಳನ್ನು ಈ ಉದ್ದೇಶಗಳಿಗಾಗಿ ರೂಪಿಸಬೇಕಾದ ಪರಿನಿಯಮಗಳಿಗನುಸಾರವಾಗಿ ಮತ್ತು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ಸಮುದಾಯಗಳಿಗಾಗಿ ಹುದ್ದೆಗಳ ಮೀಸಲಾತಿಗಾಗಿ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಹೊರಡಿಸಿದ ಆದೇಶಕ್ಕೆ ಅನುಸಾರವಾಗಿ ಕುಲಪತಿಯು ಮಾಡತಕ್ಕದ್ದು.

೩೭. ೫೧ನೇ ಪ್ರಕರಣವನ್ನು ಲೋಪಿಸುವುದು :—ಮೂಲ ಅಧಿನಿಯಮದ ೫೧ನೇ ಪ್ರಕರಣವನ್ನು ಲೋಪಿಸತಕ್ಕದ್ದು.

೩೮. ೫೧ಖ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೫೧ಖ ಪ್ರಕರಣದಲ್ಲಿ ಎರಡು ಸ್ಥಳಗಳಲ್ಲಿ ಬರುವ "೫೧" ಎಂಬ ಅಂಕಿಗಳನ್ನು ಲೋಪಿಸತಕ್ಕದ್ದು.

೩೯. ೫೩ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೫೩ನೇ ಪ್ರಕರಣದಲ್ಲಿ,—

(೧) (೧)ನೇ ಉಪ-ಪ್ರಕರಣದಲ್ಲಿ 'ರಾಜ್ಯ ಸರ್ಕಾರವು' ಎಂಬ ಪದಗಳಿಗೆ ಬದಲಾಗಿ 'ರಾಜ್ಯ ಸರ್ಕಾರವು ಮಾಡಿದ ಶಿಫಾರಸುಗಳ ಮೇಲೆ ವಿಶ್ವವಿದ್ಯಾನಿಲಯವು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(೨) (೨)ನೇ ಉಪ-ಪ್ರಕರಣದಲ್ಲಿ "ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು ಎಂಬ ಪದಗಳಿಗೆ ಬದಲಾಗಿ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡುವುದಕ್ಕೆ ಅಥವಾ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ತಿರಸ್ಕರಿಸುವುದಕ್ಕೆ ಅವರ ಶಿಫಾರಸುಗಳನ್ನು ಮಾಡತಕ್ಕದ್ದು ಮತ್ತು ವಿಶ್ವವಿದ್ಯಾನಿಲಯವು ತದನುಸಾರವಾಗಿ ಆದೇಶಗಳನ್ನು ಹೊರಡಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(೬) (೭)ನೇ ಉಪ-ಪ್ರಕರಣದಲ್ಲಿ,—

(ಕ) 'ರಾಜ್ಯ ಸರ್ಕಾರದ ಆದೇಶ' ಎಂಬ ಪದಗಳಿಗೆ ಬದಲಾಗಿ 'ವಿಶ್ವವಿದ್ಯಾನಿಲಯದ ಆದೇಶ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಖ) 'ತಿರಸ್ಕರಿಸಿದಲ್ಲಿ' ಎಂಬ ಪದಕ್ಕೆ ಮುಂಚೆ 'ರಾಜ್ಯ ಸರ್ಕಾರ ಅಥವಾ ವಿಶ್ವವಿದ್ಯಾನಿಲಯವು' ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಗ) ಪರಂತುಕದಲ್ಲಿ 'ವಿಶ್ವವಿದ್ಯಾನಿಲಯದ ಶಿಫಾರಸಿನ ಮೇಲೆ' ಎಂಬ ಪದಗಳ ಬದಲಾಗಿ 'ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(೪) (೭)ನೇ ಉಪ-ಪ್ರಕರಣದಲ್ಲಿ 'ರಾಜ್ಯ ಸರ್ಕಾರ' ಎಂಬ ಪದಗಳ ತರುವಾಯ 'ಅಥವಾ ವಿಶ್ವವಿದ್ಯಾನಿಲಯ' ಎಂಬ ಪದಗಳನ್ನು ಸೇರಿಸತಕ್ಕದ್ದು;

(೫) (೯)ನೇ ಉಪ-ಪ್ರಕರಣದ ಕೊನೆಯಲ್ಲಿ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದು ಎಂದರೆ :—

ಪರಂತು, ಆದಾಗ್ಯೂ ಅಸ್ತಿತ್ವದಲ್ಲಿರುವ ಅಧ್ಯಯನ ಕ್ರಮಕ್ಕಾಗಿ ಸಂಲಗ್ನತೆಯ ಮುಂದುವರಿಕೆಯನ್ನು ಮತ್ತು ಮುಂದುವರಿಸುವ ಪಠ್ಯ ಕ್ರಮಗಳಿಗಾಗಿ ಸಂಲಗ್ನತೆಯ ವಿಸ್ತರಣೆಯನ್ನು ವಿದ್ಯಾವಿಷಯಕ ಪರಿಷತ್ತಿನೊಂದಿಗೆ ಸಮಾಲೋಚಿಸಿ ಸಿಂಡಿಕೇಟು ಮಂಜೂರು ಮಾಡಬಹುದು; ಮತ್ತು

(೬) (೯)ನೇ ಉಪ—ಪ್ರಕರಣದ ತರುವಾಯ ಈ ಕೆಳಕಂಡ ಉಪ—ಪ್ರಕರಣವನ್ನು ಸೇರಿಸತಕ್ಕದು ಎಂದರೆ:—

(೧೦) ಕ) ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನತೆಯನ್ನು ಕೋರುವ ಹೊಸ ಕಾಲೇಜು ಅಥವಾ ಈಗಾಗಲೇ ಅಸ್ತಿತ್ವದಲ್ಲಿರುವ ಹೊಸ ಅಧ್ಯಯನ ಕ್ರಮಕ್ಕೆ ಸಂಲಗ್ನತೆಯನ್ನು ಕೋರುವ ಕಾಲೇಜಿಗೆ ಸಂಧರ್ಭಾನುಸಾರವಾಗಿ ಅಂಥ ಹೊಸ ಕಾಲೇಜಿಗೆ ಅಥವಾ ಅಂಥ ಅಧ್ಯಯನ ಕ್ರಮಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾಲೇಜಿಗೆ ಸಂಲಗ್ನತೆಯನ್ನು ಮಂಜೂರು ಮಾಡಿದ್ದ ಹೊರತು ಅಂಥ ಅಧ್ಯಯನ ಕ್ರಮಕ್ಕೆ ಯಾರೇ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದಲ್ಲ.

(ಖ) ಅಧ್ಯಯನ ಕ್ರಮಕ್ಕೆ ಪ್ರವೇಶ ಕೊಡಬೇಕಾದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯು ಸಂಧರ್ಭಾನುಸಾರ ವಿಶ್ವವಿದ್ಯಾನಿಲಯ ಅಥವಾ ಸರ್ಕಾರವು ನಿಗದಿಪಡಿಸಿದ ಸ್ವೀಕರಣಾ ಸಂಖ್ಯೆಯನ್ನು ಮೀರತಕ್ಕದಲ್ಲ ಮತ್ತು ಈ ಪ್ರಕರಣವು ಜಾರಿಗೆ ಬಂದ ತರುವಾಯ ಸ್ವೀಕರಣಕ್ಕಿಂತ ಹೆಚ್ಚಿಗೆಯಾಗಿ ಮಾಡಿದ ಯಾವುದೇ ಪ್ರವೇಶವು ಅಸಿಂಧುವಾಗಿರತಕ್ಕದು.

(ಗ) (ಖ) ಖಂಡದ ಮೇರೆಗೆ ಯಾರ ಪ್ರವೇಶವು ಅಸಿಂಧುವಾಗುವುದೋ ಆ ಯಾವನೇ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯವು ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾಗಲು ಅರ್ಹವಾಗಿರತಕ್ಕದಲ್ಲ ಅಥವಾ ಹಾಗೆ ಹಾಜರಾಗುವ ಸಲುವಾಗಿ ಕಾಲೇಜು ಕಳುಹಿಸತಕ್ಕದಲ್ಲ

೪೦. <u>೫೬ನೇ ಪ್ರಕರಣದ ತಿದ್ದುಪಡಿ :—</u> ಮೂಲ ಅಧಿನಿಯಮದ ೫೬ನೇ ಪ್ರಕರಣದಲ್ಲಿ,—

(೧) (೧)ನೇ ಉಪ ಪ್ರಕರಣದಲ್ಲಿ (೨)ನೇ ಉಪ ಪ್ರಕರಣದ ಎಂಬ ಪದಗಳನು ಆವರಣಗಳನ್ನು ಮತ್ತು ಅಂಕಿಯನ್ನು ಲೋಪಿಸತಕ್ಕದು; ಮತ್ತು

(೨) (೬)ನೇ ಉಪ ಪ್ರಕರಣದಲ್ಲಿ "ಅದು ಸೂಕ್ತವೆಂದೂ ಯೋಚಿಸುವಂಥ ಆದೇಶವನ್ನು ಮಾಡತಕ್ಕದು" ಎಂಬ ಪದಗಳಿಗೆ ಬದಲಾಗಿ —"ವಿಶ್ವವಿದ್ಯಾನಿಲಯಕ್ಕೆ ಅವರ ಶಿಫಾರಸುಗಳನ್ನು ಮಾಡತಕ್ಕದು ಅದು ಆ ತರುವಾಯ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡತಕ್ಕದು" ಎಂಬ ಪದಗಳನ್ನು ಪ್ರಯೋಜಿಸತಕ್ಕದು.

೪೧. ೫೯ನೇ ಪ್ರಕರಣದ ತಿದ್ದುಪಡಿ :— ಮೂಲ ಅಧಿನಿಯಮದ ೫೯ನೇ ಪ್ರಕರಣಕ್ಕೆ ಬದಲಾಗಿ ಕೆಳಕಂಡ ಹೊಸ ಪ್ರಕರಣವನ್ನು ಪ್ರತಿಯೋಜಿಸತಕ್ಕದು ಎಂದರೆ:—

೫೯. ಗೌರವ ಪದವಿಗಳು:— ಸಿಂಡಿಕೇಟಿನ ಮೂರನೇ ಎರಡಕ್ಕಿಂತ ಕಡಿಮೆಯಿಲ್ಲದ ಸದಸ್ಯರು ಯಾವನೇ ವ್ಯಕ್ತಿಗೆ ಅವನು ಅವರ ಅಭಿಪ್ರಾಯದಲ್ಲಿ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದವನೆಂದು ಅಭಿಪ್ರಾಯಪಟ್ಟರೆ, ಅಂಥ ಪದವಿ ಅಥವಾ ವಿದ್ಯಾ ವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬಹುದೆಂದು ಶಿಫಾರಸು ಮಾಡಿದರೆ, ಸಿಂಡಿಕೇಟು ಸಂಬಂಧಪಟ್ಟ ವ್ಯಕ್ತಿಯ ಮೇಲೆ ಪ್ರದಾನ ಮಾಡುವುದಕ್ಕಾಗಿ ಕುಲಾಧಿಪತಿಯ ಅನುಮೋದನೆಗಾಗಿ ಅದನ್ನು ಶಿಫಾರಸು ಮಾಡಬಹುದು.

೪೨. ೬೦ನೇ ಪ್ರಕರಣದ ತಿದ್ದುಪಡಿ :—ಮೂಲ ಅಧಿನಿಯಮದ ೬೦ನೇ ಪ್ರಕರಣದಲ್ಲಿ (೪)ನೇ ಉಪ-ಪ್ರಕರಣದಲ್ಲಿ 'ರಾಜ್ಯ ಸರ್ಕಾರದ ಮೂಲಕ' ಎಂಬ ಪದಗಳನ್ನು ಲೋಪಿಸತಕ್ಕದು

೪೩. ಹೊಸ ೬೧ಖ ಪ್ರಕರಣದ ಸೇರ್ಪಡೆ :—ಮೂಲ ಅಧಿನಿಯಮದ ೬೧ನೇ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದು ಎಂದರೆ :—

೬೧ಖ. ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾನಿಲಯ ಮಂಡಲಿ :—

(೧) ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾನಿಲಯ ಮಂಡಲಿಯೆಂದು ಕರೆಯಲಾಗುವ ಅಂತರ್ ವಿಶ್ವವಿದ್ಯಾನಿಲಯ ಮಂಡಲಿಯು ಕರ್ನಾಟಕ ರಾಜ್ಯದಲ್ಲಿ ಇರತಕ್ಕದು :—

(ಕ) ವಿಶ್ವವಿದ್ಯಾನಿಲಯದ ಶಿಕ್ಷಣದ ಪ್ರಭಾರದಲ್ಲಿರುವ ಮಂತ್ರಿ ;

(ಖ) ಈ ಅಧಿನಿಯಮದ ಮೇರೆಗೆ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳ ಕುಲಪತಿಗಳು ;

(ಗ) ಸಾರ್ವಜನಿಕ ಶಿಕ್ಷಣದ ಕಮಿಷನರು ;

(ಘ) ಕಾಲೇಜು ಶಿಕ್ಷಣದ ನಿರ್ದೇಶಕ ;

(ಙ) ತಾಂತ್ರಿಕ ಶಿಕ್ಷಣದ ನಿರ್ದೇಶಕ ;

(ಚ) ವೈದ್ಯಕೀಯ ಶಿಕ್ಷಣದ ನಿರ್ದೇಶಕ ;

(ಛ) ಪದವಿಪೂರ್ವ ಶಿಕ್ಷಣ ಮಂಡಲಿಯ ಅಧ

(ಜ) ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ ;

(ಠಖ) ವಿಶ್ವವಿದ್ಯಾನಿಲಯಂದ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ

(೨) ವಿಶ್ವವಿದ್ಯಾನಿಲಯಂ ಶಿಕ್ಷಣದ ಪ್ರಭಾರದಲ್ಲಿರುವ ಮಂತ್ರಿಯು ಆ ಮಂಡಲಿಯು ಅಧ್ಯಕ್ಷರಾಗಿರತಕ್ಕದು ಮತ್ತು ಅದರ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದು.

(೩) ವಿಶ್ವವಿದ್ಯಾನಿಲಯಂದ ಶಿಕ್ಷಣದ ಪ್ರಭಾರದಲ್ಲಿರುವ ಶಿಕ್ಷಣ ಇಲಾಖೆಯು ಸರ್ಕಾರದ ಕಾರ್ಯದರ್ಶಿಯು ಮಂಡಲಿಯು ಸದಸ್ಯ ಕಾರ್ಯದರ್ಶಿಯಾಗಿರತಕ್ಕದು.

(೪) ಮಂಡಲಿಯು ಅವಶ್ಯವಿದ್ದಾಗಲೆಲ್ಲಾ ಸಭೆ ಸೇರಬಹುದು. ಒ ರೆ ಮೂರು ತಿಂಗಳಿಗೆ ಕನಿಷ್ಠ ಒಮ್ಮೆ ಸಭೆ ಸೇರತಕ್ಕದು. ಮಂಡಲಿಯು ತನ್ನ ಚಟು ಗಳಲ್ಲಿ ನೆರವಾಗಲು ಅಗತ್ಯವಾಗಬಹುದಾದಂಥ ಇತರ ವ್ಯಕ್ತಿಗಳನ್ನು ಆಮಂತ್ರಿಸಬಹುದು.

(೫) ಮಂಡಲಿಯ ಸಭೆಗೆ ಕೋರಂ ಐದು ಆಗಿರತಕ್ಕದು.

(೬) ಮಂಡಲಿಯು ಪ್ರಕಾರ್ಯಗಳು, —

(ಕ) ಶೈಕ್ಷಣಿಕ ಸೌಲಭ್ಯಗಳು, ವಿಶೇಷ ಪರಿಣತಿಗಳು ಮತ್ತು ಮಟ್ಟಗಳ ಅಭಿವೃದ್ಧಿಯನ್ನು ಸಮನ್ವಯಗೊಳಿಸುವುದು ;

(ಖ) ಪ್ರವೇಶಗಳಿಗಾಗಿ ಅರ್ಹತೆ, ಚಲನೆ, ಪರೀಕ್ಷೆ ಇತ್ಯಾದಿಗಳಂಥ ವಿದ್ಯಾರ್ಥಿಗಳನ್ನು ಬಾಧಿಸುವ ವಿಷಯಗಳನ್ನು ಸಮನ್ವಯಗೊಳಿಸುವುದು ;

(ಗ) ವಿಶ್ವವಿದ್ಯಾನಿಲಯಗಳ ಹಣಕಾಸು ಹಾಗೂ ವಿಶ್ವವಿದ್ಯಾನಿಲಯಗಳ ಆಡಳಿತ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ; ಮತ್ತು

(ಘ) ಅನುಕ್ರಮವಾಗಿ ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮತ್ತು ರಾಜ್ಯ ಸರ್ಕಾರವು ನಿಧಿಯನ್ನು ಒದಗಿಸುವ ವಿಶ್ವವಿದ್ಯಾನಿಲಯಗಳ ಹಣಕಾಸು ಕಾರ್ಯಕ್ರಮಕ್ಕಾಗಿ ಸಮನ್ವಯ ಏಜೆನ್ಸಿಯಾಗಿ ಕೆಲಸ ಮಾಡುವುದು. —

—ಇವುಗಳನ್ನು ಒಳಗೊಂಡಿರತಕ್ಕದು.

(೭) ಮಂಡಳಿಯು ಶೈಕ್ಷಣಿಕ ಹಾಗೂ ಹಣಕಾಸು ವಿಷಯಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಸಲಹಾ ಮಂಡಲಿಯಾಗಿರುವುದು ಶೈಕ್ಷಣಿಕ ವಿಷಯಗಳ ಮೇಲೆ ಶಿಫಾರಸುಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳ ನಿಕಾಯಗಳ ಮುಂದೆ ಅವುಗಳ ಪರ್ಯಾಲೋಚನೆಗಾಗಿ ಇಡತಕ್ಕದು. ಹಣಕಾಸು ವಿಷಯಗಳ ಮೇಲಿನ ಶಿಫಾರಸುಗಳನ್ನು ಪರ್ಯಾಲೋಚನೆಗಾಗಿ ಸಂದರ್ಭಾನುಸಾರ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ನಿಕಾಯಗಳ ಅಥವಾ ರಾಜ್ಯ ಸರ್ಕಾರದ ಮುಂದೆ ಇಡತಕ್ಕದು.

(೮) ಅನುಸೂಚಿತ ಜಾತಿ. ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿನ ಹುದ್ದೆಗಳ ಮೀಸಲಾತಿಗಾಗಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿ

ಸಿದ ಆದೇಶಗಳನ್ನು, ೪೯ನೇ ಪ್ರಕರಣದ (೭)ನೇ ಉಪ—ಪ್ರಕರಣದ ಮೇರೆಗೆ ಮತ್ತು ೫೦ನೇ ಪ್ರಕರಣದ (೪)ನೇ ಉಪ—ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಅಥವಾ ೪೯ಕ ಪ್ರಕರಣದ ಮೇರೆಗೆ ಮಾಡಿದ ನೇಮಕಾತಿಗಳಲ್ಲಿ ಅನುಸರಿಸಲಾಗಿದೆಯೇ ಅಥವಾ ೫೧ಗ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ರೀತಿಯಲ್ಲಿ ಪಾಲಿಸಲಾಗಿದೆಯೇ ಹೇಗೆ ಎಂಬುದನ್ನು ಮಂಡಲಿಯು ಪುನರವಲೋಕಿಸತಕ್ಕದು. ಮತ್ತು ಆ ಬಗ್ಗೆ ವರದಿ ಮಾಡತಕ್ಕದು. ವರದಿಯನ್ನು ಪರ್ಯಾಲೋಚನೆಗಾಗಿ ಸಂದರ್ಭಾನುಸಾರ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ನಿಕಾಯಗಳು ಅಥವಾ ರಾಜ್ಯ ಸರ್ಕಾರದ ಮುಂದೆ ಇರಿಸತಕ್ಕದು.

**೪೪.** <u>೬೨ನೇ ಪ್ರಕರಣದ ತಿದ್ದುಪಡಿ</u> :—ಮೂಲ ಅಧಿನಿಯಮದ ೬೨ನೇ ಪ್ರಕರಣದಲ್ಲಿ (೨)ನೇ ಉಪ—ಪ್ರಕರಣಕ್ಕೆ ಬದಲಾಗಿ. ಈ ಕೆಳಕಂಡ ಉಪ ಪ್ರಕರಣವನ್ನು ಪ್ರತಿಯೋಜಿಸತಕ್ಕದು ಎಂದರೆ :—

"(೨) (೧)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ,—

(ಕ) ಪರೀಕ್ಷೆಗಳಿಂದ ವಿದ್ಯಾರ್ಥಿಯನ್ನು ಹೊರಹಾಕುವ ಶಿಕ್ಷೆಯನ್ನು ಕುಲಪತಿಯ ವರದಿಯ ಮೇಲೆ ಸಿಂಡಿಕೇಟು ಪರ್ಯಾಲೋಚಿಸಿ ವಿಧಿಸತಕ್ಕದು ; ಮತ್ತು

(ಖ) ಯಾವುದೇ ಕಾಲೇಜು ಅಥವಾ ಹಾಸ್ಟೆಲ್ ಅಥವಾ ಸಂಸ್ಥೆಯಿಂದ ತಾತ್ಕಾಲಿಕವಾಗಿ ಹೊರದೂಡುವ ಶಿಕ್ಷೆಯನ್ನು ಸಂಬಂಧಪಟ್ಟ ಕಾಲೇಜು ಅಥವಾ ಹಾಸ್ಟೆಲ್ ಅಥವಾ ಸಂಸ್ಥೆಯ ಮುಖ್ಯಸ್ಥನು ವಿಧಿಸತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ

**(ಕೆ. ಆರ್. ಚಾಮಯ್ಯ)**

ಸರ್ಕಾರದ ಕಾರ್ಯದರ್ಶಿ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

(೧೯೮೭ರ ಜೂನ್ ಇಪ್ಪತ್ತೊಂಬತ್ತನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭

(೧೯೮೭ರ ಜೂನ್ ಇಪ್ಪತ್ತೆರಡನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

(ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, ೧೯೭೬ನ್ನು ಮತ್ತಷ್ಟು) ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ವಿಶ ವಿದ್ಯಾನಿಲಯಗಳ ಅಧಿನಿಯಮ, ೧೯೭೬ (ಕರ್ನಾಟಕ ಅಧಿನಿಯಮ, ೧೯೭೬ರ ೨೮) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:—

೧. ಚಿಕ್ಕ ಹೆಸರು ಮತ್ತು ಪ್ರಾರಂಭ:—(೧) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ)ಅಧಿನಿಯಮ, ೧೯೮೭ ಎಂದು ಕರೆಯತಕ್ಕದ್ದು,

(೨) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು

೨. ೩ನೇ ಪ್ರಕರಣದ ತಿದ್ದುಪಡಿ:— ಕರ್ನಾಟಕ ರಾಜ್ಯ ವಿಶ ವಿದ್ಯಾನಿಲಯಗಳ ಅಧಿನಿಯಮ ೧೯೭೬ (ಕರ್ನಾಟಕ ಅಧಿನಿಯಮ, ೧೯೭೬ರ ೨೮) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ ೩ನೇ ಪ್ರಕರಣದಲ್ಲಿ

( ಉಪ ಪ್ರಕರಣದ ತರುವಾಯ ಈ ಕೆಳಕಂಡ ಉಪ-ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:—

"(೧ಎ) (೧)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ-—

(ಕ) ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕಮಗಳೂರು ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಮೈಸೂರು ವಿಶ್ವವಿದ್ಯಾನಿಲಯವು ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನು ಹೊಂದಿರುವುದು ನಿಂತುಹೋ ದು.

(ಖ) ಭದ್ರಾ ಜಲಾಶಯ ಯೋಜನಾ ಪ್ರದೇ , ಶಿವಮೊಗ್ಗ-ಇಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿರುವ ಮತ್ತು ಶಿವಮೊಗ್ಗ, ಚಿತ್ರದುರ್ಗ ಮತ್ತು ಚಿಕ್ಕಮಗಳೂರ ಜಿಲ್ಲೆಗಳನ್ನೊಳಗೊಂಡ ಪ್ರದೇಶದ ಮೇಲೆ ಪ್ರಾದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕುವೆಂಪು ವಿಶ್ವವಿದ್ಯಾನಿಲಯವು ಸ್ಥಾಪಿತವಾಗತಕ್ಕದು ;

(ii) (೨)ನೇ ಉಪ-ಪ್ರಕರಣದಲ್ಲಿ, "ಮತ್ತು (೧ಕ) ಉಪ-ಪ್ರಕರಣದಲ್ಲಿ" ಎಂಬ ಪದಗಳು ಆವರಣಗಳು ಮತ್ತು ಅಂಕಿಗಳಿಗೆ ಬದಲಾಗಿ "(೧ಕ) ಮತ್ತು (೧ಖ) ಉಪ-ಪ್ರಕರಣಗಳಲ್ಲಿ" ಎಂಬ ಪದಗಳು ಆವರಣಗಳು ಮತ್ತು ಅಂಕಿಗಳನ್ನು ಪ್ರಯೋಜಿಸ ತಕ್ಕುದು.

೩. ೫ನೇ ಪ್ರಕರಣದ ತಿದ್ದುಪಡಿ :— ಮೂಲ ಅಧಿನಿಯಮದ ೫ನೇ ಪ್ರಕರಣ ದಲ್ಲಿ (೫)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಉಪ-ಪ್ರಕರಣವನ್ನು ಸೇರಿಸ ತಕುದು ಎಂದರೆ :—

"(೬) (೩) ಮತ್ತು (೪)ನೇ ಉಪ-ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ,-

(ಕ) ಚಿತ್ರದುರ್ಗ, ಚಿಕ್ಕಮಗಳೂರು ಮತು ಶಿವಮೊಗ್ಗ ಜಿಲ್ಲೆಗಳಲ್ಲಿರುವ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದ ನಿಕಟ ಪೂರ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಗಳಿಗೆ ಅವಕಾಶ ಮಾಡಿಕೊಟ್ಟಿದ್ದ ಅಥವಾ ಅದರೊಂದಿಗೆ ಸಂಲಗ್ನಗೊಂಡಿದ್ದ ಎಲ್ಲ ಶೈಕ್ಷಣಿಕ ಸಂಸ್ಥೆಗಳು ಸದರಿ ದಿನಾಂಕದಂದು ಮತ್ತು ಅಂದಿನಿಂದ ಪರಿಣಾಮಕಾರಿ ಯಾಗುವಂತೆ ಮತ್ತು ixನೇ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಗಳಿಗೆ ಅವಕಾಶ ಮಾಡಿಕೊಟ್ಟ ಅಥವಾ ಅದರೊಂದಿಗೆ ಸಂಲಗ್ನಗೊಂಡಿರುವ ಸಂಸ್ಥೆಗಳೆಂಬುದಾಗಿ ಭಾವಿಸ ತಕ್ಕುದು :

ಪರಂತು, ಈ ಹಿಂದೆ ಹೇಳಿದ ಯಾವುದೇ ಜಿಲ್ಲೆಯಲ್ಲಿರುವ ಯಾವುದೇ ಸಂಸ್ಥೆಗೆ ಸಂಬಂಧಿಸಿದಂತೆ ಸಂಲಗ್ನತೆಗಾಗಿ ಮಾಡಿಕೊಂಡ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಂದು ಮೈಸೂರು ವಿಶ್ವವಿದ್ಯಾನಿಲಯ ಅಥವಾ ರಾಜ್ಯ ಸರ್ಕಾರದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಅರ್ಜಿ ಯನ್ನು ೩ನೇ ಪ್ರಕರಣದ (೧ಖ) ಉಪ-ಪ್ರಕರಣದ ಮೇರೆಗೆ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಂಲಗ್ನತೆಗಾಗಿ ಮಾಡಿಕೊಂಡ ಅರ್ಜಿಯೆಂಬುದಾಗಿ ಭಾವಿಸತಕ್ಕುದು ಮತ್ತು ಅದನ್ನು ಈ ಆಧಾರದ ಮೇಲೆ, ಸಂದರ್ಭಾನುಸಾರ ಕುವೆಂಪು ವಿಶ ವಿದ್ಯಾನಿಲಯ

ಅಥವಾ ರಾಜ್ಯ ಸರ್ಕಾರವು ಅದರೊಡನೆ ವ್ಯವಹರಿಸತಕ್ಕುದು ಮತ್ತು ಅದನ್ನು ವಿಲೆ ಮಾಡತಕ್ಕುದು.

(ಖ) ಶಿವಮೊಗ ಜಿಲ್ಲೆಯಲ್ಲಿನ ಭದ್ರಾ ಜಲಾಶಯ ಯೋಜನಾ ಪ್ರದೇಶದಲ್ಲಿನ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿನ ದಾವಣಗೆರೆಯಲ್ಲಿನ ಸ್ನಾತಕೋತ್ತರ ಕೇಂದ್ರಗಳು ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಎಲ್ಲಾ ಕಾಲೇಜುಗಳು ಲಗತ್ತಾದ ಹಾಸ್ಟೆಲುಗಳು, ಪೀಠೋಪಕರಣ ವಸ್ತುಗಳೊಂದಿಗೆ ಇತರ ಕಟ್ಟಡಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಸಾಧನ ಸಾಮಗ್ರಿಗಳು ಮತ್ತು ಸಜ್ಜುಗಳು ಮತ್ತು ಎಲ್ಲಾ ಇತರ ಸ್ವತ್ತು-ಚರ ಮತ್ತು ಸ್ಥಿರ ಇವೆರಡೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ಪರಿಣಾಮಕಾರಿಯಾಗುವಂತೆ ೩ನೇ ಪ್ರಕರಣ (೧ಖ) ಉಪ-ಪ್ರಕರಣದ ಮೇರೆಗೆ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿತವಾಗತಕ್ಕುದು."

(ಗ) ಮೈಸೂರು ವಿಶ್ವವಿದ್ಯಾಲಯಂದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮತ್ತು ಕುವೆಂಪು ವಿಶ್ವವಿದ್ಯಾನಿಲಯದ, ವಿಶ್ವವಿದ್ಯಾನಿಲಯ ಪ್ರದೇಶದಿಂದ ಉದ್ಭವಿಸುವ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿನ ಇತ್ಯರ್ಥದಲ್ಲಿರುವ ಕಾನೂನು ವ್ಯವಹರಣೆಗಳನ್ನು ಒಳಗೊಂಡು ಎಲ್ಲಾ ವ್ಯವಹರಣೆಗಳು ಆ ದಿನಾಂಕದಂದು ಮತ್ತು ಆ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ೩ನೇ ಪ್ರಕರಣದ (೧ಖ) ಉಪ ಪ್ರಕರಣದ ಮೇರೆಗೆ ಸ್ಥಾಪಿತವಾದ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿತವಾಗತಕ್ಕುದು ಅಥವಾ ಅದು ಮುಂದುವರಿಸತಕ್ಕುದು ಅಥವಾ ಅದರ ವಿರುದ್ಧ ಮುಂದುವರೆಯುತಕ್ಕುದು.

೪. <u>೭೦ನೇ ಪ್ರಕರಣ ತಿದ್ದುಪಡಿ</u> :- ಮೂಲ ಅಧಿನಿಯಮದ ೭೦ನೇ ಪ್ರಕರಣದಲ್ಲಿ ,ತಿದ್ದುಪಡಿ ಅಧಿನಿಯಮ'ದ ಎಂಬ ಪದಗಳ ತರುವಾಯ ಅಥವಾ "ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭" ಎಂಬ ಪದಗಳು ಮತ್ತು ಅಂಕಿಗಳನ್ನು ಸೇರಿಸತಕ್ಕುದು.

೫. <u>೭೧ನೇ ಪ್ರಕರಣದ ತಿದ್ದುಪಡಿ</u>:—ಮೂಲ ಅಧಿನಿಯಮದ ೭೧ನೇ ಪ್ರಕರಣದ (೨)ನೇ ಉಪ-ಪ್ರಕರಣದಲ್ಲಿ,—

(i) (ಕ) ಖಂಡದಲ್ಲಿ "ಮತ್ತು ಮಂಗಳೂರು ವಿಶ್ವವಿದ್ಯಾನಿಲಯ" ಎಂಬ ಪದಗಳ ತರುವಾಯ "ಮತ್ತು ಕುವೆಂಪು ವಿಶ್ವವಿದ್ಯಾನಿಲಯ" ಎಂಬ ಪದಗಳನ್ನು ಸೇರಿಸತಕ್ಕುದು.

ii (ಖ) ಖಂಡದಲ್ಲಿ "ಮತ್ತು ಮಂಗಳೂರು ವಿಶ್ವವಿದ್ಯಾನಿಲಯ" ಎಂಬ ಪದಗಳ ತರುವಾಯ "ಮತ್ತು ಕುವೆಂಪು ವಿಶ್ವವಿದ್ಯಾನಿಲಯ" ಎಂಬ ಪದಗಳನ್ನು ಸೇರಿಸತಕ್ಕುದು ;

(iii) (ಗ) ಖಂಡದಲ್ಲಿ (೧)ನೇ ಬಾಬಿನಲ್ಲಿ "ತಿದ್ದುಪಡಿ ಅಧಿನಿಯಮ" ಎಂಬ ಪದಗಳ ತರುವಾಯ "ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ತರುವಾಯ, ಮೊದಲ ಮೂರು ವರ್ಷಗಳ ಅವಧಿಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿನ ಅಂಥ ನೇಮಕಾತಿಗಳನ್ನು" ಎಂಬ ಪದಗಳನ್ನು ಮತ್ತು ವಿರಾಮ ಚಿಹ್ನೆಯನ್ನು ಸೇರಿಸತಕ್ಕದ್ದು.

(iv) (ಘ) ಖಂಡದಲ್ಲಿ (ii)ನೇ ಬಾಬಿನ ತರುವಾಯ, ಈ ಕೆಳಕಂಡ ಬಾಬನ್ನು ಸೇರಿಸತಕ್ಕದ್ದು, ಎಂದರೆ :—

(iii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯ ಯೋಜನಾ ಮತ್ತು ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ಅವುಗಳಿಗೆ ಲಗತ್ತಿಸಿದ ಪ್ರತಿಯೊಬ್ಬ ಅಧ್ಯಾಪಕ ಮತ್ತು ಇತರ ನಿಯೋಜಿತನು ಅಂಥ ದಿನಾಂಕದಿಂದ ಕುವೆಂಪು ವಿಶ್ವವಿದ್ಯಾನಿಲಯದಲ್ಲಿನ ಹುದ್ದೆಗಳ ಸಮುಚಿತ ಕಾಡರ್ ಅಥವಾ ಪ್ರವರ್ಗಕ್ಕೆ ವರ್ಗಾಯಿತನಾಗತಕ್ಕದ್ದು.

(v) (ಙ) ಖಂಡದ ತರುವಾಯ, ಈ ಕೆಳಕಂಡುದನ್ನು ಸೇರಿಸತಕ್ಕದ್ದು, ಎಂದರೆ :-

(ಙ ಙ) ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯಾವನೇ ಅಧ್ಯಾಪಕ ಅಥವಾ ಇತರ ನಿಯೋಜಿತನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಿಂದ ತೊಂಭತ್ತು ದಿವಸಗಳೊಳಗೆ ಅಥವಾ ರಾಜ್ಯ ಸರ್ಕಾರದ ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಆರು ತಿಂಗಳುಗಳನ್ನು ಮೀರದಂಥ ಹೆಚ್ಚಿನ ಅವಧಿಯೊಳಗೆ ಅಂಥ ವರ್ಗಾವಣೆಗಾಗಿ ಕುಲಾಧಿಪತಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅದರ ಮೇಲೆ ಕುಲಾಧಿಪತಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(vi) (ಜ) ಖಂಡದಲ್ಲಿ 'ಅಥವಾ ಮಂಗಳೂರು ವಿಶ್ವವಿದ್ಯಾನಿಲಯ' ಎಂಬ ಪದಗಳಿಗೆ ಬದಲಾಗಿ 'ಅಥವಾ ಮಂಗಳೂರು ವಿಶ್ವವಿದ್ಯಾನಿಲಯ ಅಥವಾ ಕುವೆಂಪು ವಿಶ್ವವಿದ್ಯಾನಿಲಯ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

vii) (ಛ) ಖಂಡದ ತರುವಾಯ ಈ ಕೆಳಕಂಡುದನ್ನು ಸೇರಿಸತಕ್ಕದ್ದು ಎಂದರೆ :—

(ಜ) ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ೧೯೮೭-೮೮ನೇ ವರ್ಷಕ್ಕಾಗಿ ಹಣಕಾಸು ಅಂದಾಜನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು.

೬. <u>೭೨ನೇ ಪ್ರಕರಣದ ತಿದ್ದುಪಡಿ</u> :—ಮೂಲ ಅಧಿನಿಯಮದ ೭೨ನೇ ಪ್ರಕರಣದಲ್ಲಿ (೪)ನೇ ಉಪ-ಪ್ರಕರಣದ ತರುವಾಯ, ಈ ಕೆಳಕಂಡುದನ್ನು ಸೇರಿಸತಕ್ಕದ್ದು, ಎಂದರೆ :—

"(೫) ಕುವೆಂಪು ವಿಶ್ವವಿದ್ಯಾನಿಲಯ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅನ್ವಯವಾಗಬಹುದಾದ ಪರಿನಿಯಮಗಳು ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳನ್ನು ಈ ಅಧಿನಿಯಮದ ಮೇರೆಗೆ ಕುವೆಂಪು ವಿಶ್ವವಿದ್ಯಾನಿಲಯವು ರಚಿಸಿದ ಪರಿನಿಯಮಗಳು, ಅಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳೆಂಬುದಾಗಿ ಭಾವಿಸತಕ್ಕದ್ದು :

ಪರಂತು, ಕುಲಪತಿಯು ರಾಜ್ಯಸರ್ಕಾರದ ಮೂಲಕ ಪಡೆದ ಕುಲಾಧಿಪತಿಯ ಅನುಮೋದನೆಯೊಂದಿಗೆ ಅವನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಮಾರ್ಪಾಟುಗಳನ್ನು ಮತ್ತು ಅಳವಡಿಕೆಗಳನ್ನು ಅವುಗಳಲ್ಲಿ ಮಾಡಬಹುದು.

೭. <u>೭೩ನೇ ಪ್ರಕರಣದ ತಿದ್ದುಪಡಿ</u> :—ಮೂಲ ಅಧಿನಿಯಮದ ೭೩ನೇ ಪ್ರಕರಣದಲ್ಲಿ ಒಂದು ವರ್ಷಕ್ಕೆ ಮೀರದಂತೆ ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :—

"ಮತ್ತು ೩ನೇ ಪ್ರಕರಣದ (೧೩) ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ವಿಶ್ವವಿದ್ಯಾನಿಲಯದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷಕ್ಕೆ ಮೀರದಂತೆ"

೮: <u>೭೪ನೇ ಪ್ರಕರಣದ ತಿದ್ದುಪಡಿ</u>.—ಮೂಲ ಅಧಿನಿಯಮದ ೭೪ನೇ ಪ್ರಕರಣದಲ್ಲಿ (೨)ನೇ ಉಪಪ್ರಕರಣದ ತರುವಾಯ ಈ ಕೆಳಕಂಡುದನ್ನು ಸೇರಿಸತಕ್ಕದ್ದು, ಎಂದರೆ–

"(೩) ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶ ಅಥವಾ ವಿನಿಯಮಗಳು ಅಥವಾ ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, ೧೯೮೭ರ ಪ್ರಾರಂಭದ ನಿಕಟ ಪೂರ್ವದಲ್ಲಿ ಜಾರಿಯಲ್ಲಿರುವ ವಿನಿಯಮಕ್ಕೆ ಅನುಸಾರವಾಗಿ ಕುವೆಂಪು ವಿಶ್ವವಿದ್ಯಾನಿಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿನ ಶಿಕ್ಷಣ ಸಂಸ್ಥೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಯಾವನೇ ವಿದ್ಯಾರ್ಥಿಗೆ ಕುವೆಂಪು ವಿಶ್ವವಿದ್ಯಾನಿಲಯವು ಅಂಥ

ಪರೀಕ್ಷೆಯನ್ನು ಏರ್ಪಡಿಸುವವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಪ್ರವೇಶ ಕೊಡಬಹುದು ಮತ್ತು ಅಂಥ ಪರೀಕ್ಷೆಗಳ ಫಲಿತಾಂಶಗಳ ಮೇಲೆ ಅವನು ಅರ್ಹತೆಗಳಿಸುವಂಥ ಮೈಸೂರು ವಿಶ್ವವಿದ್ಯಾನಿಲಯಂದ ಆ ಪದವಿಯನ್ನು ಅವನಿಗೆ ಪ್ರದಾನ ಮಾಡತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಈಶ್ವರ್‌ಭಟ್**

ಪ್ರಾರೂಪಕಾರ ಮತ್ತು ಸರ್ಕಾರದ ಪದನಿಮಿತ್ತ ವಿಶೇಷ ಕಾರ್ಯದರ್ಶಿ,

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.



...lhi-11001...